A.—Sri K. HANUMANTHAIYA (Chief Minister).—

(*a*) Rs. 93,30,454 to end of January 1956.

(*b*) By June 1956.

(*c*) (i) Rs. 3 lakhs. (ii) Rs. 8 lakhs.

Vidhana Soudha.

Q.—626. Sri K. PRABHAKAR (Nelamangala—Scheduled Castes).—

Will the Government be pleased to state :—

what would be the cost of Vidhana Soudha building when completed ?

A.—Sri K. HANUMANTHAIYA (Chief Minister).—

About Rs. 130 lakhs.

Rural Communication (Allotment to Hassan District).

Q.—438. Sri K. PANCHAKSHARIAH (Arsikere).—

Will the Government be pleased to state :—

(*a*) the amount provided under the Rural Communication Head for Hassan District during the year 1954-55 ;

(*b*) the amount allotted to each taluk in Hassan District (talukwar information to be furnished) ;

(*c*) out of the said amount, the amount that was set apart by them for the District Board Roads ; and the amount now paid ;

(*d*) the principle on which the amount was allotted for each taluk ?

A.—Sri T. CHANNIAH (Minister for Public Health and Local Self-Government).—

(*a*) Nil.

(*b*), (*c*) and (*d*). Does not arise in view of the reply to clause (*a*).

BUDGET FOR 1956-57.

General Discussion (*continued*)

Mr. SPEAKER.—This is the last day for budget discussion. Therefore all the Hon'ble Members cannot get chances to speak. Necessarily I will have to disappoint some of the Hon'ble Members. Those Members will have chances during the period of Voting of Demands. The Government also have to be given appropriate time to reply because last time they complained that they did not have sufficient time. In view of that, I would request the Hon'ble Members to take some other opportunity to discuss the very same thing.

Sri K. PUTTASWAMY (Srirangapatna).—All through, we have been making a representation to the Speaker that sufficient time must be allotted for discussion of the Budget. Last year and the year before last, I remember four days were allotted. This year, day before yesterday, voting of demands for supplementary grants also took place and there was half a day available for budget discussion that day aod I am told that the Government intend making reply to the debate after 2-30 P.M. today. That means, hardly two days are allowed this time. The Hon'ble Speaker should come to our rescue. This is not the way in which we should be treated. There is a very heavy responsibility when the budget is going to be discussed. If only two days are allotted opinion of this House would be stifled. It would mean legal stifling of public opinion.

AN HON'BLE MEMBER.—I fully endorse what he has said.

Mr. SPEAKER.—I understand your feelings, but all this is superseded by the agreement or understanding arrived at by the House. During the next 12 days also, Hon'ble Members will have opportunity to debate on the budget itself. Therefore, they need not worry over lack of sufficient time for the general discussion. In fact, the discussion on Demands will be on a detailed scale and therefore, there is no reason to feel that members will not have chances. Some members will

(MR. SPEAKER.)

have chances now and the others during the successive days. You know we originally wanted to introduce the present Budget on the 8th March, but by agreement the Hon'ble Members wanted it to be presented on the 12th March. Therefore there is absolutely no time now to spare for the General Discussion. It was settled in the House, not by me. If some Hon'ble Members were not present, I cannot help it.

ಶ್ರೀ ಆರ್. ಅನಂತರಾಮರ್ (ಚಾಮರಾಜಪೇಟೆ).—ಹಿಂದೆ ರಾಜಪ್ರಮುಖರ ಭಾಷಣದ ಮೇಲೆ ಯಾರು ಮಾತನಾಡಿದ್ದಾರೋ ಅವರಿಗೆ ಅವಕಾಶ ಕೊಡಬೇಡಿ, ಇತರರಿಗೆ ಅವಕಾಶ ಕೊಡಿ.

ಶ್ರೀ ವಿ. ವೆಂಕಟಪ್ಪ (ಚೆನ್ನಪಟ್ಟಣ).—12ನೇ ತಾರೀಖಿನ ದಿವಸ ಬಡ್ಜೆಟ್ ಪ್ರೆಸೆಂಟ್ ಮಾಡಬಹುದು ಎಂದು ಹೇಳಿದ ಮಾತ್ರಕ್ಕೆ 30ನೇ ತಾರೀಖಿನ ದಿನವೇ ಪೂರ್ತಿ ಆಗಬೇಕು, ಅಷ್ಟರೊಳಗೆ ಮಾತನಾಡುವುದಕ್ಕೆ ಒಪ್ಪಿಕೊಳ್ಳುತ್ತೇವೆ ಎಂದು ಹೇಳಿದ್ದೆವೆ ?

ಅಧ್ಯಕ್ಷರು.—ಆ ದಿವಸ ತಾವು "12ನೇ ತಾರೀಖು ಬಡ್ಜೆಟ್ ಪ್ರೆಸೆಂಟ್ ಮಾಡಿದರೆ 30ನೇ ತಾರೀಖಿನ ಒಳಗೆಯೇ ಮುಗಿಯಬೇಕು, ಆ ರೀತಿ ತೆಗೆದುಕೊಂಡು ಮುಗಿಸಿಬಿಡಿ" ಎಂದು ಹೇಳಿದಹಾಗೆ ನಾನು ಪ್ರೊಸೀಡಿಂಗ್ಸ್‌ನಲ್ಲಿ ನೋಡಿದೆ. ಆದ್ದರಿಂದ ಆ ದಿವಸವೇ ತಾವು ಇದನ್ನು ಹೇಳಬೇಕಾಗಿತ್ತು.

Sri K. PUTTASWAMY.—I request the Hon'ble Speaker to take votes on this matter.

Mr. SPEAKER.—No, no. The Hon'ble Member being an old parliamentarian knows the procedure.

Sri K. PUTTASWAMY.—I am a little bit flattered. But all the same. . . .

(SRI S. GOPALA GOWDA rose.)

Mr. SPEAKER.—I request the Hon'ble Member not to take more than 15 minutes.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸಭೆಯ ಮುಂದೆ ಮಂಡಿಸಿರತಕ್ಕಂಥ 56-57ನೇ ಇಸವಿ ಅಂದಾಜು ಆಯವ್ಯಯದ ಮೇಲೆ ನನ್ನ ವಿಮರ್ಶೆಗಳನ್ನು ಕೊಡುವುದಕ್ಕೆ ಮುಂಚೆ ನಾನು ತಮ್ಮ ಗಮನವನ್ನ ಒಂದು ವಿಷಯಕ್ಕೆ ಸೆಳೆಯ ಬಯಸುತ್ತೇನೆ. ತಮಗೆ ಈಗಾಗಲೇ ಗೊತ್ತಿರುವ ಹಾಗೆ ಕೇಂದ್ರದ ಅಂದಾಜು ಪಟ್ಟಿ ಲೋಕಸಭೆಯ ಮುಂದೆ ಅದನ್ನು ಇಡುವುದಕ್ಕೆ ಮುಂಚೆಯೇ ಅದು ಬಯಲಾಗಿದ್ದು ಆ ವಿಷಯದಲ್ಲಿ ತನಿಖೆ ನಡೆಯುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಷಯ. ನಮ್ಮ ಸಂಸ್ಥಾನದ ಆಯವ್ಯಯ ಪಟ್ಟಿ ಅಂದಾಜನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಮುಂಚೆ ಮದರಾಸಿನ ಕೆಲವು ಪತ್ರಿಕೆಗಳಿಗೆ ಕಳುಹಿಸಿ ಕೊಡಲಾಗಿತ್ತು ಎಂದು ಹೇಳಿ ಈಗ ಖಚಿತವಾಗಿ ತಿಳಿದುಬಂದಿದೆ. ಪತ್ರಿಕೆಗಳಲ್ಲೂ ಕೂಡ ಈ ವಿಷಯ ಪ್ರಕಟವಾಗಿದೆ. ಹಿಂದೆ ಇದೇ ಹಣಕಾಸಿನ ಮಂತ್ರಿಗಳು ಯಾವುದೋ ಒಂದು ಪತ್ರಿಕೆಗೆ ಮುಂಚಿತವಾಗಿ ಕೊಟ್ಟು ಇಲ್ಲಿ ಆ ಭಾಷಣವನ್ನು ಓದುತ್ತಿರುವ ಕಾಲದಲ್ಲೇ ಆ ಪತ್ರಿಕೆ ತನ್ನ ಲೇಖನದೊಂದಿಗೆ ಪ್ರಕಟಣೆಯಾಗಿ ಹೊರಬಂತು. ಆ ವಿಷಯ ಈ ಸಭೆಯಲ್ಲಿ ಪ್ರಸ್ತಾಪವಾಯಿತು. ಇದು ಸಭೆಗೆ ಒಂದು ರೀತಿಯ ಅಗೌರವ ಮಾಡತಕ್ಕ ಕೆಲಸ ಮಾತ್ರವಲ್ಲ ಅದರಿಂದ ಆರ್ಥಿಕ ವ್ಯವಸ್ಥೆಗೇ ಹಾನಿ ಕೂಡ ಉಂಟಾಗುತ್ತದೆ ಎಂದು ಹೇಳಿ ನಾವು ತಿಳಿದುಕೊಳ್ಳಬಹುದು. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಈ ವಿಷಯದಲ್ಲಿ ಈಗ ಬಂದಿರತಕ್ಕ ವರದಿಯ ಮೇಲೆ ಅವರ ಸ್ಪಷ್ಟ ಹೇಳಿಕೆಯನ್ನು ಕೊಡಬೇಕು. ಆ ರೀತಿ ನಡೆದಿದ್ದರೆ ಅದಕ್ಕೆ ತಾವು ಸೂಕ್ತಕ್ರಮವನ್ನು ಕೈಕೊಳ್ಳಬೇಕು ಎಂದು ಹೇಳಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

Sri H. K. VEERANNA GOWDH (Maddur).—I want to speak for two hours. If we are given only 15 minutes, better that we do not speak at all. If you do not permit me to speak for two hours, I may as well not speak at all.

Mr. SPEAKER.—If the Hon'ble Member had spoken yesterday or the day before yesterday, he would have had a chance to speak for some length of time. But today there is no time. I only appeal to Hon'ble Members.

Sri P. R. RAMAIYA (Basavanagudi).—On a point of information, Sir.

Mr. SPEAKER.—The Member has not yielded.

ಶ್ರೀ ಎಸ್. ಗೋಪಾಲಗೌಡ.—ಈ ವರ್ಷದ ಆಯವ್ಯಯ ಸರ್ಕಾರದವರು ಹೇಳಿರುವ ಪ್ರಕಾರ ಅಗಾಧ ಕೊರತೆಯಿಂದ ಕೂಡಿದೆ ಮತ್ತು ಅನಿವಾರ್ಯದ ಅಂದಾಜು ಎಂದು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇದು ಬರೀ ಅಗಾಧ ಕೊರತೆಯಿಂದ ಕೂಡಿರತಕ್ಕ ಮತ್ತು ಅನಿವಾರ್ಯದ ಆಯವ್ಯಯ ಮಾತ್ರವಲ್ಲ. . . .

Sri P. R. RAMAIYA.—On a point of order, Sir. The Hon'ble Member Sri S. Gopala Gowda referred to some leakage of the Budget. He referred to something that happened last year and he has also referred to something that happened this year. I was not able to hear him exactly, what he implied, whether there was any leakage of the Budget this year in this Assembly or whether he referred to leakage that took place in the Central Assembly. As far as I know, as one who knows the working of a newspaper concern, it is possible. . . .

Mr. SPEAKER.—No, no. There is no point of order. The Member can reply to all these in his speech. Why do you waste the time of the House ?

Sri P. R. RAMAIYA.—The point is whether he referred to the leakage of the Budget this year.

Mr. SPEAKER.—That is no point of order. It is a request for information. Sri Gopala Gowda.

ಶ್ರೀ ಎಸ್. ಗೋಪಾಲಗೌಡ.—ವಾಸ್ತವವಾಗಿ ನೋಡಿದರೆ ಈ ಅಂದಾಜು ಅತಂತ್ರ, ಅಭದ್ರ ಹಾಗೂ ಅಪಾಯಕಾರೀ ಆಯವ್ಯಯವಾಗಿದೆ.

Sri P. R. RAMAIYA.—He has not replied to my point, Sir.

Mr. SPEAKER.—He has stated already.

ಶ್ರೀ ಎಸ್. ಗೋಪಾಲಗೌಡ.—ಇದು ಬರೀ ಮೈಸೂರು ಸಂಸ್ಥಾನದ ಆಯವ್ಯಯದ ಚಿತ್ರ ಮಾತ್ರವಲ್ಲ. ಇಡೀ ಭಾರತದಲ್ಲಿ ಇಂದು ರಾಜ್ಯಭಾರ ನಡೆಸುತ್ತಾ ಇರತಕ್ಕ ಕಾಂಗ್ರೆಸ್ ಸರ್ಕಾರಗಳ ಬಂಡವಾಳ ಕೋರ ನೀತಿಯನ್ನು ಪ್ರತಿಬಿಂಬಿಸುವ ಮತ್ತು ಬಂಡವಾಳ ಶಾಹಿಯನ್ನು ತಬ್ಬಿ ಆಶ್ರಯಿಸಿ ಕೊಂಡಿರುವ ಸುಲಿಗೆ ಮತ್ತು ಶೋಷಣೆಯ ತಳಹದಿಯ ಮೇಲೆ ನಿರ್ಮಿಸಿರುವ ಪ್ರತಿಗಾಮಿ ಆಯವ್ಯಯದ ಅಂದಾಜು ಎಂದು ಹೇಳುವುದರಲ್ಲಿ ಯಾವ ಅನುಮಾನವೂ ಇಲ್ಲ. ಅಥವಾ ಅದು ಸತ್ಯಕ್ಕೆ ದೂರವಾದ ಮಾತೂ ಕೂಡ ಅಲ್ಲ. ಇದನ್ನು ಯಾವ ಆರ್ಥಿಕ ತಜ್ಞರು ಪರೀಕ್ಷೆ ಮಾಡಿದರೂ ಕೂಡ, ವಾಸ್ತವಿಕತೆಯ ದೃಷ್ಟಿಯಿಂದ ನಾನು ಹೇಳಿರತಕ್ಕ ಮಾತು ನೂರಕ್ಕೆ ನೂರು ನಿಜ ಎಂದು ಕಂಡುಕೊಳ್ಳುವುದಕ್ಕೆ ಸಾಧ್ಯ. ಈ ದಿನ ನಮ್ಮ ಮುಂದೆ ಇಟ್ಟಿರತಕ್ಕ ಆಯವ್ಯಯದಲ್ಲಿ ಅದು ಹೇಗೆ ಅತಂತ್ರ ಎಂದು ನೋಡುವುದಾದರೆ ಐದು ಕೋಟಿ ರೂಪಾಯಿ ಹೊರಗಿನ ಸಾಲ, 12 ಕೋಟಿ ರೂಪಾಯಿ ಕೇಂದ್ರದ ಸಾಲ ಇದರಮೇಲೆ ಈ ಅಭಿವೃದ್ಧಿ ಕಾರ್ಯಗಳು ಮತ್ತು ಬಂಡವಾಳದ ಕಾರ್ಯಗಳು ನಡೆಯಬೇಕಾಗಿವೆ.

1 P.M.

ಅವರೇ ಹೇಳಿರುವ ಪ್ರಕಾರ ಮುಂದಿನವರ್ಷ ದ್ವಿತೀಯ ಯೋಜನೆಯ ಕಾರ್ಯಕ್ರಮಗಳ ಪ್ರಗತಿಯು ಕುಂಠಿತವಾಗುವುದು ಅನಿವಾರ್ಯ. ಅಂಥ ಸನ್ನಿವೇಶ ಬರಲಾರದೆಂದು ನನ್ನ ನಿರೀಕ್ಷೆ. ಬರೀ ಒಂದು ಪಯಸ್ ಹೋಪ್ ಇದೆ. ಯಾಕೆಂದರೆ ಕೇಂದ್ರಸರ್ಕಾರಕ್ಕೆ ಆಕಾಶದಿಂದ ಹಣ ಬರುವುದಿಲ್ಲವೆನ್ನುವುದು ಎಲ್ಲರಿಗೂ ಗೊತ್ತಿರತಕ್ಕ ಅಂಶ. ಆದುದರಿಂದ ಕೇಂದ್ರ ಸರ್ಕಾರದವರಿಗಾದರೂ ಪ್ರಾಂತಗಳಲ್ಲಿ ಬಹುತೇಕ ಬಾಳುತ್ತ ಇರತಕ್ಕ ವ್ಯಕ್ತಿಗಳ ಮತ್ತು ಸಂಸ್ಥೆಗಳ ಉತ್ಪಾದನಾ ಶಕ್ತಿಯನ್ನು ಅವಲಂಬಿಸಿ ಅವರ ಆರ್ಥಿಕ ಪದ್ಧತಿ ಮತ್ತು ಅವರ ಬಂಡವಾಳ ರೂಪಿತವಾಗುತ್ತದೆಯೇ ಹೊರತು ಬೇರೆ ಇನ್ನು ಯಾವ ಕಾರ್ಯಕ್ರಮದಿಂದಲೂ ಹಣ ಒದಗುವುದಿಲ್ಲ. ಇಂಥ ಸಂದರ್ಭದಲ್ಲಿ ಈ ಆಯವ್ಯಯವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದರಲ್ಲಿ ಒಂದು ಸಂತೋಷವನ್ನು ಆರ್ಥಿಕ ಮಂತ್ರಿಗಳು ವ್ಯಕ್ತಪಡಿಸಿದರು, ನಾನು ಹೊಸ ತೆರಿಗೆಗಳನ್ನು ಹಾಕುವುದಿಲ್ಲವೆಂದು. ಅವರು ಹೇಳುವ ಪ್ರಕಾರ "ಈ ಸಾರಿ ಯಾವ ತೆರಿಗೆಯನ್ನಾದರೂ ಹೆಚ್ಚಿಸುವ ಸಲಹೆಯನ್ನಾಗಲಿ, ಹೊಸ ತೆರಿಗೆಗಳನ್ನು ವಿಧಿಸುವ ಸಲಹೆಯನ್ನಾಗಲಿ, ತಮ್ಮ ಮುಂದಿಡುವುದಿಲ್ಲ." ಎಂದು ಇದೆ. ಇದರಲ್ಲಿ ಬರೀ ಅಂಕಿಅಂಶಗಳ ವಿಷಯದಲ್ಲಿ ಮಾತ್ರವಲ್ಲ ಇನ್ನೂ ಕೆಲವು ವಿಷಯಗಳಲ್ಲಿ ಅರ್ಥವಾಗದ ರೀತಿಯಲ್ಲಿ ಸತ್ಯಕ್ಕೆ ದೂರವಾದ ಹೇಳಿಕೆಗಳನ್ನು ಕೂಡ ಕೊಡಲಾಗಿದೆ ಎನ್ನುವುದಕ್ಕೆ ಈ ಮಾತು ಸಾಕ್ಷಿ. ಇದರಲ್ಲಿ ಹುಟ್ಟುವಳಿಯು ಹೆಚ್ಚಾಗಿರುವುದಕ್ಕೆ ಕ್ರಮಗಳನ್ನು ಸೂಚಿಸುತ್ತ ಹೇಳಿದ್ದಾರೆ. "ಆದಾಯದ ಹೆಚ್ಚುವರಿಗೆ ಸಹಾಯವಾಗುವ ಅಂಶಗಳೆಂದರೆ : (1) ತಿದ್ದುಪಾಟಾದ ವಿದ್ಯುಚ್ಛಕ್ತಿಯ ದರಗಳನ್ನು ಒಪ್ಪುವುದು." ಇದರಿಂದ ಈಗಿರುವ ವಿದ್ಯುಚ್ಛಕ್ತಿಯ ಮೇಲಿನ ದರಗಳನ್ನು ಹೆಚ್ಚಿಸುತ್ತಾರೆನ್ನುವುದು ಗೊತ್ತಾಗುತ್ತದೆ. "(2) ಆಸ್ತಿಗಳ ಮೇಲಿನ ತೆರಿಗೆಯನ್ನು ವ್ಯವಸಾಯದ ಜಮೀನುಗಳಿಗೂ ಅನ್ವಯಿಸುವುದು, (3) ಹುಟ್ಟುವಳಿಯ ಕೊರತೆಗೆ (Revenue Gap) ಸಂಬಂಧಪಟ್ಟ ಗ್ಯಾರಂಟಿಯಾದ ಹಣವನ್ನು ಕಡಿಮೆಮಾಡದೆ ಇರುವುದು." ಎಂದು ಹೇಳಿದ್ದಾರೆ. ಆದರೆ ಕೊನೆಯಲ್ಲಿ, concluding paragraph ನಲ್ಲಿ ಆ ರೀತಿ ಭಾಷಣವನ್ನು ಮುಕ್ತಾಯಗೊಳಿಸಿದ್ದಾರೆ. ಆದುದರಿಂದ ಒಂದು ಮಾತಿಗೂ ಇನ್ನೊಂದು ಮಾತಿಗೂ, ಒಂದು ಸಂಖ್ಯೆಗೂ ಇನ್ನೊಂದು ಸಂಖ್ಯೆಗೂ ಯಾವ ಸಂಬಂಧವೂ ಇಲ್ಲವೆಂದು ನಾವು ಕಂಡುಕೊಳ್ಳಬಹುದು. ಇದರಲ್ಲಿ ಪಾಂಚವಾರ್ಷಿಕ ಯೋಜನೆಯಲ್ಲಿ ಏನೇನು ಕೆಲಸಗಳು ನಡೆಯಿತು ಎನ್ನುವುದಕ್ಕೆ ಒಂದು ಪಟ್ಟಿಯನ್ನೂ ಕೊಟ್ಟಿದ್ದಾರೆ. ಮತ್ತು ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಏನೇನು ನಡೆಯುತ್ತದೆ ಎನ್ನುವುದರ ಪಟ್ಟಿಯನ್ನೂ ಸಹ ಕೊಟ್ಟಿದ್ದಾರೆ. 'ಈ ತತ್ವ ಬಹಳ ಮಹತ್ತರವಾದ ತತ್ವ. ಆದುದರಿಂದ ನಾವು ಒಂದು ದೊಡ್ಡ ಕೆಲಸವನ್ನು ಈ ವರ್ಷದಿಂದ ಮಾಡುತ್ತಿದ್ದೇವೆ. ಮೊದಲನೆಯ ಪಾಂಚವಾರ್ಷಿಕ ಯೋಜನೆ ಮುಗಿದು ಎರಡನೆ ಪಾಂಚವಾರ್ಷಿಕಯೋಜನೆಗೆ ಕಾಲಿಡುತ್ತಿದ್ದೇವೆ' ಎಂದು ಹೇಳಿದ್ದಾರೆ. ಇದರಲ್ಲಿ ಇನ್ನೊಂದು ವಿಷಯ. ಕಾಂಗ್ರೆಸ್ ತನ್ನ ನೀತಿಯನ್ನೂ ಧ್ಯೇಯವನ್ನೂ ಕ್ರಮವಾಗಿ ಬದಲಿಸಿಕೊಂಡು ಬಂತು. ಮೊದಲು ಸರ್ವೋದಯವೆಂದು ಹೇಳಿ, ಸುಖೀರಾಜ್ಯ (welfare State) ಎಂದು ಹೇಳಿ, Socialistic Pattern of Society ಎಂದು ಇವೊತ್ತು ತನ್ನ ಧ್ಯೇಯವನ್ನು ದೇಶಕ್ಕೆ ಸಾರುತ್ತಿದೆ. ಇದರಲ್ಲಿ ಎಷ್ಟರ ಮಟ್ಟಿಗೆ ಈ ಧ್ಯೇಯವನ್ನು ಅನುಸರಿಸುವುದಕ್ಕೆ ಅಥವಾ ಕಾರ್ಯತಃ ಮುಟ್ಟುವುದಕ್ಕೆ ಸಾಧನ ಸಂಪತ್ತುಗಳೇನು, ಕಾರ್ಯನೀತಿಯೇನು, ಎನ್ನುವುದನ್ನು ನೋಡಿದರೆ, ಈ ಧ್ಯೇಯವನ್ನು ಮುಟ್ಟಲಾರೆವು ಎನ್ನುವುದು ಬಹು ಸ್ಪಷ್ಟವಾಗಿದೆ. ಈ ಯೋಜನೆಗಳು ಯಾವ ರೀತಿ ಕಾರ್ಯಗತ ಮಾಡಲ್ಪಡುತ್ತವೆ ಎಂದು ನೋಡಿದರೆ ಇದು ನಮಗೆ ಚೆನ್ನಾಗಿ ಗೊತ್ತಾಗುತ್ತದೆ. ಇದು ಅಂಥ ಒಂದು ಸುಖೀರಾಜ್ಯದ ಕಡೆಗೆ, ಸಮಾಜವಾದದ ಮಾದರಿ ಸಮಾಜದ ಕಡೆಗೆ ದೇಶವನ್ನು ತೆಗೆದುಕೊಂಡು ಹೋಗುವುದಕ್ಕೆ ಸರ್ವಥಾ ಸಾಧ್ಯವಿಲ್ಲ ಎನ್ನುವ ಮಾತು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದರಲ್ಲಿ ನಮಗೆ ಕಂಡುಬರುವುದು ಏನೆಂದರೆ, ಅಧಿಕಾರಕ್ಕೆ ಅಂಟಿಕೊಳ್ಳಬೇಕು, ಕೈಗೆ ಬಂದಿರತಕ್ಕ ಅಧಿಕಾರವನ್ನು ಕಳೆದುಕೊಳ್ಳಬಾರದು ಎಂಬ ಹೆಬ್ಬಯಕೆ. ಕಾರಣಗಳನ್ನು ಕೊಡುತ್ತೇನೆ. ಇದಕ್ಕಾಗಿ ಇವೊತ್ತು ಯಾರುಯಾರನ್ನು ಆಶ್ರಯಿಸಬೇಕಾಗಿದೆ ಎಂದರೆ ಬಂಡವಾಳಗಾರರನ್ನು ಅಥವಾ ಅವರ ಏಜಂಟರುಗಳನ್ನು; ಮತ್ತು ಅವರ ಎಲ್ಲಸಹಕಾರವನ್ನೂ ಪಡೆಯಲು ಕಾಂಗ್ರೆಸ್ ಆಶ್ರಯಿಸುತ್ತಿದೆ, ಕಾಂಗ್ರೆಸ್ ಸರ್ಕಾರ ಆಶ್ರಯಿಸುತ್ತಿದೆ. ಇದಕ್ಕೆ ಪರಿಹಾರಗಳನ್ನು ನಾವು ನೋಡೋಣ. ಸುಖೀರಾಜ್ಯದ ಕಡೆಗೆ, ಸಮಾಜವಾದದ ಕಡೆಗೆಹೋಗುತ್ತಿರುವ ಪ್ರಯತ್ನ ಧೋರಣೆ, ಕೆಲವು

(ಶ್ರೀ ಎಸ್. ಗೋಪಾಲಗೌಡ.)

ಉದಾಹರಣೆಗಳಿಂದ ನೋಡುವುದಾದರೆ, ನಮಗೆ ಚೆನ್ನಾಗಿ ಅರ್ಥವಾಗುತ್ತದೆ. ಇವೊತ್ತು ರೈತನಿಗೆ ಭೂಮಿಯನ್ನು ಹಂಚತಕ್ಕ ವ್ಯವಸ್ಥೆಯ ಯೋಜನೆಯನ್ನು ಕಾರ್ಯಗತಮಾಡುವುದಕ್ಕೆ ಕಾಂಗ್ರೆಸ್ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಎರಡನೆಯದಾಗಿ ಕಾರ್ಮಿಕರ ಜೀವನವನ್ನ ಉತ್ತಮಪಡಿಸುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಅಷ್ಟು ದೂರ ಹೋಗಬೇಕಾಗಿಲ್ಲ. ಮೈಸೂರು ಒಂದೇ ತೆಗೆದುಕೊಂಡರೆ ಅಗಸನ ಕತ್ತೆಯಂತೆ, ಅಥವಾ ತೆನಾಲಿರಾಮಕೃಷ್ಣನ ಕುದುರೆಯಂತೆ, ಈ ಸರ್ಕಾರಿ ಯಂತ್ರದಲ್ಲಿ ಸಿಕ್ಕಿಹಾಕಿಕೊಂಡಿರತಕ್ಕ 18-20 ರೂಪಾಯಿಗಳು ಪಡೆದು ನರಳುತ್ತಾ ಇರತಕ್ಕ, ಸರ್ಕಾರಿ ನೌಕರರಿಗೆ ಎಷ್ಟು ದಿವಸಗಳಿಂದ ಆಶ್ವಾಸನೆ ಕಾಂಗ್ರೆಸ್ ಸರ್ಕಾರದವರು ಕೊಟ್ಟಿದ್ದಾರೆಂಬುದನ್ನು ಎಲ್ಲರೂ ಚೆನ್ನಾಗಿ ಮನದಟ್ಟು ಮಾಡಿಕೊಳ್ಳಬೇಕು. ಕಳೆದ ಚುನಾವಣೆಗಳಿಗೆ ಮೊದಲು ಹಿಂದಿದ್ದ ಸರ್ಕಾರದವರು 5 ರೂಪಾಯಿಗಳ ಭಕ್ಷೀಸ್ ಕೊಟ್ಟಿದ್ದು ನೆನಪಿದೆ. ಈಗಿನ ಸರ್ಕಾರದವರೂ ಸಹ ಕೆಲವು ತಿಂಗಳ ಹಿಂದೆ ಒಂದು ಸಮಿತಿಯನ್ನು ರಚನೆಮಾಡಿ, ಒಂದು ನಾಟಕವಾಡಿ ಇವೊತ್ತು ಬೇರೆ ಕಾರಣಗಳನ್ನು ಕೊಟ್ಟು ಅವರ ವರದಿಯನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲವೆಂದರೆ ಅದು ಸಮಂಜಸವಾದ ಕಾರಣವಲ್ಲ. ನಮ್ಮ ಸಂಸ್ಥಾನ ಹಿಗ್ಗುತ್ತದೆ, ಬೇರೆ ಪ್ರಾಂತಗಳು ಬಂದು ನಮ್ಮಲ್ಲಿ ಸೇರುತ್ತವೆ ಮತ್ತು ಕೇಂದ್ರದಿಂದ ಈ ರೀತಿಯಾದಯಾವ ಕಾರ್ಯಕ್ರಮವನ್ನೂ ಕೈಗೊಳ್ಳಕೂಡದು ಎಂದು ಬಂಧಿಸಿದೆ ಎಂಬ ನೆಪವನ್ನು ಮುಂದೊಡ್ಡಿ ನೌಕರರಿಗೆ ಅಗಾಧವಾದ ನಿರಾಸೆಯನ್ನು ಉಂಟುಮಾಡಿದ್ದಾರೆ. ನಿರಾಸೆ ಎಂದು ಮಾತ್ರವೇ ಹೇಳುವುದಕ್ಕಾಗುವುದಿಲ್ಲ; ಹುಣ್ಣಿನ ಮೇಲೆ ಬರೆ ಎಳೆದಂತಾಗಿದೆ ಎಂದು ಹೇಳುತ್ತೇನೆ. ಇದು ಕಾಂಗ್ರೆಸ್ ಸರ್ಕಾರದ ನೀತಿ. ಇನ್ನು ಸುಮ್ಮನೆ ಪ್ರಜಾಪ್ರಭುತ್ವ, ಸುಭಿಕ್ಷ ಎಂದು ಹೇಳಿಕೊಂಡು ಅಷ್ಟು ಗೊಬ್ಬರ ಕೊಡುವುದು, ಅಷ್ಟು ಬೀಜಕೊಡುವುದು ಈ ರೀತಿ ಮಾಡಿದಮಾತ್ರಕ್ಕೆ ಸುಭಿಕ್ಷವುಂಟಾಗಿದೆಯೆನು ? ನಮ್ಮದೇಶದಲ್ಲಿ ಇವೊತ್ತು ಎಷ್ಟರಮಟ್ಟಿನ ಸುಭಿಕ್ಷವುಂಟಾಗಿದೆ ಎನ್ನುವುದಕ್ಕೆ ನೂರು ಮನೆಗಳಲ್ಲಿ ವಿಚಾರಮಾಡಿದರೆ ತಾವು ತಿಳಿದುಕೊಳ್ಳಬಹುದು. ಮತ್ತು ಪ್ರಜಾಪ್ರಭುತ್ವದ ರೀತಿ ನೀತಿಗಳನ್ನು ಶ್ರೀಮಾರ್ನ್ ಮರಿಯಪ್ಪನವರು ನಿನ್ನೆ ದಿವಸ ಬಹಳ ಚೆನ್ನಾಗಿ ಹೇಳಿ ತೋರಿಸಿಕೊಟ್ಟರು. ನಮ್ಮ ಮೈಸೂರು ಸಂಸ್ಥಾನದ ವಿಚಾರ ಮಾತ್ರ ಹೇಳುತ್ತೇನೆ ಮುಖ್ಯಮಂತ್ರಿಗಳು ಯಾವ ರೀತಿ ಪ್ರಜಾಪ್ರಭುತ್ವ ತತ್ವಗಳನ್ನು ಪರಿಪಾಲನೆ ಮಾಡಿಕೊಂಡು ಬಂದಿದ್ದಾರೆ ಎನ್ನುವುದಕ್ಕೆ ಅವರು ಒಳ್ಳೆಯ ರೀತಿಯಲ್ಲಿ ತೋರಿಸಿಕೊಟ್ಟರು. ಅದೇ ಮಾತನ್ನು ನಾನೇನಾದರೂ ಆಡಿದ್ದರೆ ಬಹುಶಃ ವಿರೋಧಪಕ್ಷಕ್ಕೆ ಸೇರಿದವನು ಎನ್ನುವ ಕಾರಣಕ್ಕಾಗಿ ಹೀಗೆಲ್ಲ ಮಾತನಾಡುತ್ತಾನೆ ಎಂದು ಬಾಯಿಗೆ ಬೀಗ ಹೊಡೆಯುತ್ತಿದ್ದರು ಎಂದು ನನ್ನ ಹಿಂದಿನ ಅನುಭವದಿಂದ ಗೊತ್ತಾಗುತ್ತದೆ. ಇದು ಪ್ರಜಾಪ್ರಭುತ್ವದ ನೀತಿಯಲ್ಲ. ಯಾಕೆಂದರೆ ನಾನು ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ಮೊನ್ನೆ ಅಪ್ರೋಪ್ರಿಯೇಷನ್ ಬಿಲ್ಲಿನ ಮೇಲೆ ಮಾತನಾಡುವಾಗ ಇಂಡಸ್ಟ್ರಿಯಲ್ ಎಸ್ಟೇಟ್ ಎಂದರೆ ಏನು, ಎಲ್ಲಿ ಆರಂಭ ಮಾಡುತ್ತೀರಿ, ಇದಕ್ಕಾಗಿ ಅಪ್ರೋಪ್ರಿಯೇಷನ್ ಬಿಲ್ಲಿನಲ್ಲಿ ಅಡಿಷನಲ್ ಗ್ರಾಂಟ್‌ನಲ್ಲಿ 10 ಲಕ್ಷರೂಪಾಯಿ ಯಾಕೆ ಸೇರಿಸಿದ್ದೀರಿ, ಈಗ ಬಡ್ಜೆಟ್ ಅಧಿವೇಶನ ನಡೆಯುತ್ತಿರುವುದರಿಂದ ಬಡ್ಜೆಟ್ಟಿನಲ್ಲಿ ಸೇರಿಸಬೇಕಾಗಿತ್ತು, ಅಷ್ಟು ಆತುರವೇನಿತ್ತು ಎಂದು ನಾನು ಟೀಕೆಮಾಡಿದ್ದು ಸತ್ಯವಾದ ಟೀಕೆ. ಎರಡು ವರ್ಷಗಳ ಹಿಂದೆ ಓದಿರತಕ್ಕ ಆಯವ್ಯಯದ ಭಾಷಣವನ್ನು ಕೇಳಿದ್ದೇನೆ. ಸದಸ್ಯರು ಅದನ್ನು ನೆನಪಿಟ್ಟುಕೊಳ್ಳಬೇಕು. ಆ ಸಂದರ್ಭದಲ್ಲಿ ನಾವು ಏನು ಉತ್ತರವನ್ನು ಕೊಡಬೇಕು ಎಂದು ಸಂಬಂಧಪಟ್ಟ, ಜವಾಬ್ದಾರಿ ಹೊತ್ತಿರತಕ್ಕ ಮಂತ್ರಿಗಳು ಉತ್ತರ ಕೊಟ್ಟರಲ್ಲ ಅದು ಯಾವ ಪ್ರಜಾಪ್ರಭುತ್ವ ? ಆ ರೀತಿಯ ಉತ್ತರಗಳನ್ನು ಕೊಡುತ್ತಿದ್ದಾರೆ. ಇನ್ನೂ ನೂರಾರು ಉದಾಹರಣೆಗಳನ್ನು ಕೊಡಬಲ್ಲೆ. ಇವೊತ್ತು ಹೀಗೆ ಪ್ರಜಾಪ್ರಭುತ್ವ ನಡೆದುಕೊಂಡು ಬರುತ್ತಿದೆ. ಇಂಥ ಸಭೆಯಲ್ಲಿ ಒಂದು ಹಕ್ಕನ್ನು (privilege) ವಿಶಿಷ್ಟ ಅಧಿಕಾರವನ್ನು ಹೊಂದಿರುವ ಸದಸ್ಯರಿಗೆ ಹೀಗೆಲ್ಲ ಸರ್ಕಾರದವರು ಉತ್ತರ ಕೊಟ್ಟರೆ ಜನಸಾಮಾನ್ಯರಿಗೆ, ಹೊರಗೆ ಇರತಕ್ಕವರಿಗೆ, ಯಾವ ರೀತಿ ಉತ್ತರ ದೊರೆಯುತ್ತದೆ, ಯಾವ ರೀತಿ ಸರ್ಕಾರ ಅವರ ಬಗ್ಗೆ ವರ್ತಿಸುತ್ತದೆ, ಅವರನ್ನು ಯಾವ ದೃಷ್ಟಿಯಿಂದ ಕಾಣುತ್ತದೆ ಎನ್ನುವುದನ್ನು ಯೋಚಿಸಿದರೆ, ಇದು ಪ್ರಜಾಪ್ರಭುತ್ವವೇ ಅಥವಾ ಇನ್ನೇನಾದರೂ ಪ್ರಭುತ್ವವೇ ಎಂದು ಗೊತ್ತಾಗುತ್ತದೆ. ಆದುದರಿಂದ ಮಾತಿನಲ್ಲಿ ಎಷ್ಟು ಹೇಳುತ್ತಿದ್ದಾರೆಯೋ ಅದನ್ನು ಕಾರ್ಯದಲ್ಲಿ ತರುವುದು ಕಂಡು ಬರಲಿಲ್ಲ. ಇನ್ನು ಕೆಲವು ಮುಖ್ಯವಾದ ವಿಷಯಗಳನ್ನು ಮಾತ್ರ ಪ್ರಸ್ತಾಪಮಾಡಿ ನನ್ನ ಭಾಷಣವನ್ನು ಮುಗಿಸಬೇಕೆಂದಿದ್ದೇನೆ.

ಇದರಲ್ಲಿ, ಬಹುಮಾನ ಸ್ಪರ್ಧೆಗಳಿಗೆ ಸಂಬಂಧ ಪಟ್ಟ ಕಾನೂನನ್ನು ಜಾರಿಗೆ ತಂದಿರುವುದರಿಂದ R.M.D.C. ಸ್ಪರ್ಧೆಗಳನ್ನು ನಿಲ್ಲಿಸಬೇಕಾಗುತ್ತದೆ ಇದರಿಂದ 7 ಲಕ್ಷ ರೂಪಾಯಿಗಳ ಕೊರತೆಯಾಗುತ್ತದೆ ಎಂದು ಹೇಳಿದ್ದಾರೆ. ಮೊನ್ನೆ ನಾನು ಭಾಷಣ ಮಾಡುವಾಗ R.M.D.C. ಯವರು ಸರಿಯಾದ ಲೆಕ್ಕಪತ್ರಗಳನ್ನು ಕೊಟ್ಟರೇ, ಇಲ್ಲವೇ, ಕೊಟ್ಟಿಲ್ಲವೆಂದು ತಿಳಿದುಬಂದಿದೆ ಎಂದು ಹೇಳಿದಾಗ, ಹಾಗೇನೂ ಇಲ್ಲ, ಅದೆಲ್ಲವೂ ಸರಿಯಾಗಿದೆ ಎಂದು ತಿಳಿಸಿದರು. ನನಗೆ ತಿಳಿದಿರುವ ಪ್ರಕಾರ ಹೇಳುತ್ತೇನೆ.

ಅಧ್ಯಕ್ಷರು.—ಅದಿವಸವೇ ಹೇಳಿದ್ದೀರಲ್ಲ.

ಶ್ರೀ ಎಸ್. ಗೋಪಾಲಗೌಡ.—ಆಗ ಮಾತನಾಡುತ್ತ ಒಂದು ಸಮಿತಿಯನ್ನು ರಚನೆ ಮಾಡಬೇಕೆಂದು ಹೇಳಿದೆ. ಅದಕ್ಕೆ ಏನಾದರೂ ಬೆಲೆಯನ್ನು ಕೊಟ್ಟಿದ್ದಾರೆಯೇ ? 'ಟೀಕೆ ಮಾಡುವುದಕ್ಕೆ ಹೇಳುತ್ತಾರೆ; ಅವರ ಟೀಕೆಗೆ ಏನು ಗಮನ ಕೊಡಬೇಕು ?' ಎನ್ನುವ ಭಾವನೆ ಸರ್ಕಾರದವರಲ್ಲಿ ತುಂಬಿದ್ದರೆ ನಾವು ಏನು ಮಾಡುವುದಕ್ಕೆ ಆಗುತ್ತದೆ ? ಪ್ರಜಾಪ್ರಭುತ್ವವೆಂದರೆ ನಾನು ಅವರನ್ನು ಹೊಡೆಯಬಾರದು ಎನ್ನುವುದಕ್ಕೆ ಮಾತ್ರವಲ್ಲ. ಅದು ಎರಡುಕಡೆಯಲ್ಲಿಯೂ reciprocate ಆದರೆ ಮಾತ್ರ ಪ್ರಜಾಪ್ರಭುತ್ವವೆನ್ನಿಸಿಕೊಳ್ಳುತ್ತದೆ. ನಾನು ಮಾತನಾಡುವುದಕ್ಕೆ ಅಧಿಕಾರವಿಲ್ಲ. ಅದೇ ಇನ್ನೊಬ್ಬರಿಗೆ ಹೊಡೆಯುವುದಕ್ಕೆ ಅಧಿಕಾರವಿದೆ. ಇದು ಮಾತ್ರ ಪ್ರಜಾಪ್ರಭುತ್ವವಲ್ಲವೆ ! ಸರ್ಕಾರವನ್ನು ಕಿತ್ತುಹಾಕುವುದಕ್ಕೆ, ಅನ್ಯಾಯಗಳನ್ನು ತಪ್ಪಿಸುವುದಕ್ಕೆ ಅಧಿಕಾರವಿದೆ; ಪ್ರಜೆಗಳಿಗೆ ಹೆಚ್ಚು ಅಧಿಕಾರವಿದೆ. ಪ್ರಜೆಗಳಿಂದ ನಮೂದಾದ ಕೆಲವು ಸಂಸ್ಥೆಗಳಿಗೆ ಒಂದು ವ್ಯಾಪ್ತಿಯಲ್ಲಿ limited authority ಕೊಡುತ್ತಾರೆಯೇ ಹೊರತು ಪ್ರಜೆಗಳನ್ನು ಗಲ್ಲಿಗೆ ಹಾಕುವ ಅಧಿಕಾರವನ್ನಾಗಲಿ, ಇಂತಹ ಇತರ ಅಧಿಕಾರವನ್ನಾಗಲಿ ಯಾರೂ ಕೊಡುವುದಿಲ್ಲ. ಆದುದರಿಂದ ನಾವು ಹೇಳಿದ ಮಾತು ಕ್ಷುಲ್ಲಕವೆಂದೂ ಅದಕ್ಕೆ ಆಧಾರವಿಲ್ಲವೆಂದೂ ಹೇಳಿದರು. ಈ ಸಂದರ್ಭದಲ್ಲಿ ಈ ಸಂಸ್ಥೆಯವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ

ಬರೆದಿರುವ ಉತ್ತರದಲ್ಲಿನ ಕೊನೆ ಪ್ಯಾರಾಗ್ರಾಫ್ ಓದುತ್ತೇನೆ:

> "With reference to your demand for inspection of our accounts, it is brought to our attention that we are not bound to give any for inspection. We are not prepared to give your officer our accounts for inspection as we have been doing until such time as orders are obtained from the High Court."

Mr. SPEAKER.—If it is not correct, it should not be read, because there is nobody to defend that statement.

ಶ್ರೀ ಎಸ್. ಗೋಪಾಲಗೌಡ.—ನನಗೆ ಗೊತ್ತಿರತಕ್ಕದ್ದು ಹೇಳಿದ್ದೇನೆ. ಈ ರೀತಿಯಾಗಿ ಉತ್ತರ ಕೊಟ್ಟಿದ್ದಾರೆಂದು ತಿಳಿದುಬಂದಿದೆ. ಅವರು accounts ಕೊಡುತ್ತಿಲ್ಲವೆಂದು ನನಗೆ ತಿಳಿದು ಬಂದಿರುವುದಾಗಿ ಹೇಳಿದ್ದೇನೆ. ಅದಕ್ಕೋಸ್ಕರ ನಾನು ಹೇಳುವುದು ಏನೆಂದರೆ ತಕ್ಷಣ ಒಂದು ಸಮಿತಿಯನ್ನು ಮಾಡಬೇಕು. ಅವರಿಂದ 7 ಲಕ್ಷ ರೂಪಾಯಿ ಮಾತ್ರವಲ್ಲ ಸುಮಾರು ಒಂದುಕೋಟಿ ರೂಪಾಯಿ ಬರಬೇಕು. ಆದರೆ ಯಾರನ್ನೂ ದೋಚಬೇಕು ಎಂದು ಹೇಳುವುದಿಲ್ಲ. ವ್ಯಾಪಾರ ನಡೆದಿದ್ದೂ, ಲಾಭ ಬಂದಿದ್ದೂ, ಅದನ್ನು ತಗೆದುಕೊಳ್ಳುವುದಕ್ಕೆ ಸರ್ಕಾರದವರಿಗೆ ಏನು ಕಷ್ಟ? ಇವೊತ್ತು ಅವರು ಸಿಲೋನಿಗೆ ಹೋಗಿ ಕುಳಿತುಕೊಂಡರೆ ಏನು ಮಾಡುತ್ತೀರಿ? ಆದುದರಿಂದ ಅಂಥ ವಿಷಯಗಳನ್ನು ಸಭೆಯ ಗಮನಕ್ಕೆ ತಂದಾಗ, ನಾವೂ ಜವಾಬ್ದಾರಿ ಹೊಂದಿರುವವರು, ಯಾರಮೇಲೂ ವೈಯುಕ್ತಿಕವಾಗಿ ಅಪಾದನೆಗಳನ್ನು ಮಾಡುವುದಕ್ಕೆ ಬಂದಿರುವುದಿಲ್ಲವೆಂದು ತಿಳಿಯಬೇಕು. ಈ ವಿಷಯಗಳೆಲ್ಲವನ್ನೂ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಅಂಥ ಹೇಳಿಕೆಗಳಿಗೆ ಎಷ್ಟರಮಟ್ಟಿನ ಗೌರವವನ್ನೂ, ಮಾನ್ಯತೆಯನ್ನೂ ಕೊಡಬೇಕೋ ಅಷ್ಟನ್ನೂ ಕೊಡಲೇಬೇಕಾದದ್ದು ಸರ್ಕಾರದ ಕರ್ತವ್ಯ.

ನಮ್ಮ ದೇಶದಲ್ಲಿ ಹಣಕಾಸಿನ ಪರಿಸ್ಥಿತಿ ಏನಾಗಿದೆ ಎಂದರೆ, ಅಧಿಕಾರದಲ್ಲಿರಬೇಕು ಎನ್ನುವ ಕಾರಣದಿಂದ ಕಾರ್ಮಿಕರಿಗೆ, ಬಡವರಿಗೆ, ಕೂಲಿಗಾರರಿಗೆ, ಮಧ್ಯಮವರ್ಗದವರಿಗೆ, ರೈತರಿಗೆ, ಎಲ್ಲರಿಗೂ ಮುಖಕ್ಕೆ ಧೂಪ ಹಾಕುತ್ತಿದ್ದಾರೆ. ನಿಮಗೆಲ್ಲ ಅನುಕೂಲ ಮಾಡಿಕೊಡುತ್ತೇವೆ, ಮಾಡಿಕೊಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರೆ ಅವರಿಗೆ ಏನೂ ಮಾಡಲಿಲ್ಲ. ವಿದ್ಯುಚ್ಛಕ್ತಿ ಕೆಲಸಗಾರರು ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟರು. ಒಂದು ಸಮಿತಿ ರಚನೆಯಾಯಿತು. ಅದರ ಬಗ್ಗೆ ಅವರಿಗೆ ನ್ಯಾಯವಾಗಿ ಕೊಡಬೇಕಾದ ಬೇಡಿಕೆಗಳನ್ನು ಕೂಡ ಕೊಟ್ಟಿಲ್ಲ. ಅವರು ಸ್ಟ್ರೈಕ್ ಮಾಡಿದಾಗ ಕೊಡಬೇಕಾಗಿದ್ದ ಭತ್ಯವನ್ನೂ ಸಹ ಅವರುಗಳಿಗೆ ಕೊಟ್ಟಿಲ್ಲ. ಇಲ್ಲಿ ಸುಮ್ಮನೆ ಕಾರ್ಮಿಕರಿಗೆ ಹೆಚ್ಚಿನ ಭಾಗವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅವರಿಂದ ಅಗ್ರಿಮೆಂಟ್ ಮೂರುವರ್ಷ ಅಥವಾ ಆರು ವರ್ಷ ಒಳ್ಳೆಯ ಜನರ ಹಾಗೆ ಕೆಲಸ ಮಾಡಿಕೊಂಡು ಹೋಗಬೇಕೆಂದು ಬರೆಸಿಕೊಳ್ಳುತ್ತಾರೆ. ಅಂಥ ಅಗ್ರಿಮೆಂಟುಗಳು ಇಂಡಿಯಾ ಸರ್ಕಾರದ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಆಕ್ಟ್ ಮತ್ತು ಇತರ ಕಾರ್ಮಿಕರಿಗಾಗಿ ಆಗಿರುವ ಕಾನೂನುಗಳಂತೆ ನಡೆಯುತ್ತವೆ. ಆ ಅಗ್ರಿಮೆಂಟುಗಳಿಂದ ಕಾರ್ಮಿಕರಿಗೆ ಕೊಟ್ಟಿರುವ ಹಕ್ಕು ಸಂಪೂರ್ಣವಾಗಿ ಮಾಯವಾಗಿ ಅವರನ್ನು ಗುಲಾಮರಂತೆ ದುಡಿಸಿಕೊಂಡು ವಿಧಾನಸೌಧ ಅಥವಾ ದೇವಸ್ಥಾನ ಕಟ್ಟಿಸುವುದು ಸರ್ಕಾರದ ನೀತಿಯೆ? ಕಾರ್ಮಿಕರ ನೀತಿಯನ್ನು ಉಲ್ಲೇಖಿಸಿರುವುದು ಈ ರೀತಿಯಾಗಿದೆ. ಇದು ಸರಿಯಲ್ಲ.

ಆಮೇಲೆ ಈ ಹೊತ್ತು ತೆರಿಗೆಯನ್ನು ಹಾಕಲಿಲ್ಲವೆಂದು ಹೇಳಿದ್ದಾರೆ. ಯಾರಮೇಲೆ ಹಾಕಲಿಲ್ಲ ಎಂಬ ಪ್ರಶ್ನೆ ಈಗ ಬಂದಿದೆ. ಈ ಭಾಷಣದಲ್ಲಿ ಪ್ರಪಂಚದ ಒಬ್ಬ ದೊಡ್ಡ ವ್ಯಕ್ತಿಯ ಹೆಸರನ್ನು ಉಲ್ಲೇಖಿಸಲಾಗಿದೆ, ಪ್ರಸಿದ್ಧನಾದ ಹೊರದೇಶದ ರಾಜಕಾರಣಿ ಸೂಚಿಸಿರುವ ಅಭಿಪ್ರಾಯವನ್ನು ಕೊಡಲಾಗಿದೆ, ಸ್ವತಂತ್ರ ವಾತಾವರಣದಲ್ಲಿ ಪ್ರಜಾಪ್ರಭುತ್ವದ ನೀತಿಗನುಗುಣವಾಗಿ ಒಂದು ಯೋಜನೆಯನ್ನು ತಯಾರಿಸಿ ನಾವು ಕಾರ್ಯಗತ ಮಾಡುತ್ತಿರುವುದು ಬಹಳ ಪ್ರಶಂಸನೀಯವೆಂದು ಅವರು ಹೇಳಿದ್ದಾರೆ. ಹೊರದೇಶದವರು ನಿಜವಾಗಿಯೂ ಪ್ರಶಂಸೆ ಮಾಡಿರಬಹುದು. ಇದೊಂದು ದೊಡ್ಡ ಪ್ರಯತ್ನವೆಂದು ಒಪ್ಪಿದ್ದರೂ ಕೂಡ ಈ ದಿವಸ ಯೋಜನೆಯನ್ನು ಕಾರ್ಯಗತ ಮಾಡಬೇಕಾದರೆ ಮೂಲಭೂತವಾದ ಕೆಲವು ಕೆಲಸಗಳನ್ನು ಮಾಡಲೇಬೇಕಾಗುತ್ತದೆ. ಆದಷ್ಟು ಬ್ಯಾಂಕಿಂಗ್, ಇನ್ಷ್ಯೂರೆನ್ಸ್ ಇಂಥ ಸಂಸ್ಥೆಗಳನ್ನು ನಾವು ರಾಷ್ಟ್ರೀಕರಣ ಮಾಡಿಕೊಳ್ಳಬೇಕು. ಮೊದಲನೆಯದಾಗಿ ಈ ದಿವಸ ಹೊರದೇಶದ ಬಂಡವಾಳಕ್ಕೂ ದೇಶೀಯ ಬಂಡವಾಳಕ್ಕೂ ಘರ್ಷಣೆಯಿದೆ. ಹೊರದೇಶದ ಬಂಡವಾಳ ಈ ದಿವಸ ದೇಶೀಯ ಬಂಡವಾಳದ ರೂಪತಾಳುತ್ತಿದೆ, ಮುಖ್ಯಮುಖ್ಯವಾದ ಕೈಗಾರಿಕೆಗಳು ಹೊರದೇಶದ ಬಂಡವಾಳದಿಂದ ಸ್ಥಾಪನೆಯಾಗಿವೆ. ಶೇಕಡ 50 ಭಾಗ ಪ್ರಪಂಚದ ಬಂಡವಾಳದಲ್ಲಿ ಈಗಿಲ್ಲ. ಪ್ರತ್ಯೇಕವಾಗಿ ಈ ಕಡೆ ಸ್ಟೇಟ್ ಎಂಟರ್‌ಪ್ರೈಸಸ್ ಮಾಡುತ್ತೀರಿ. ರಾಜ್ಯದ ಕೈಗಾರಿಕೆಯನ್ನು ಊರ್ಜಿತ ಮಾಡಬೇಕೆಂದು ಒಂದು ಬಂಡವಾಳವಿದೆ. ಆದರೆ ಇಂಡಿಯಾದೇಶದ ಮತ್ತು ಹೊರದೇಶದ ಖಾಸಗಿ ಬಂಡವಾಳ ಈ ಎರಡರ ಘರ್ಷಣೆಯಲ್ಲಿ ಈ ದಿವಸ ಕೆಲಸ ಸ್ಥಗಿತವಾಗುವುದಕ್ಕೆ ಕಾರಣವಾಗಿದೆ, ಮುಂದುವರಿಯುವುದಕ್ಕೆ ಅವಕಾಶವಾಗಿಲ್ಲ.

ಇನ್ನೊಂದು ರಾಜಮಹಾರಾಜರುಗಳಿಗೆ, ಈ ದಿವಸ ರಾಜಭಕ್ತಿಗೆ ಕಾಲವಿಲ್ಲ ಎಂದು ಹಣಕಾಸಿನ ಸಚಿವರು ಹೇಳಿದ್ದಾರೆ, ನಿಜ; ರಾಜರ ಬಗ್ಗೆ ಭಕ್ತಿಯನ್ನು ಯಾರೂ ವ್ಯಕ್ತಪಡಿಸುತ್ತಿಲ್ಲ, ಆದರೆ ಈ ದಿವಸ ರಾಜರುಗಳನ್ನು ಅವರ ರಾಜ್ಯದ ಪದವಿಯಿಂದ ತೆಗೆದು ಹಾಕಿದರೂ ಕೂಡ ಕರಾರಿನ ಪ್ರಕಾರ ಅನೇಕ ರಾಜರುಗಳಿಗೆ, ನನಗೆ ಗೊತ್ತಿರುವ ಹಾಗೆ, ರಾಜರಾಗಿದ್ದಾಗ ಬರುವ ವರಮಾನದ ಹತ್ತರಷ್ಟು, ಇಪ್ಪತ್ತರಷ್ಟು, ನೂರರಷ್ಟು ವರಮಾನ ಕೊಡಲೇಬೇಕಾಗುತ್ತದೆಂಬುದನ್ನು ಯಾರೂ ಮರೆಯಬಾರದು. ಇಂಥ ಒಪ್ಪಂದದಿಂದ ಈ ದಿವಸ ಪ್ರತಿಯೊಬ್ಬ ರಾಜಮಹಾರಾಜರುಗಳಿಗೂ ಹೆಚ್ಚುಹೆಚ್ಚಾಗದೆ, ಅವರ ಆರ್ಥಿಕಸ್ಥಿತಿ ಸುಭದ್ರವಾಗಿದೆ ಎಂದು ಹೇಳಬಹುದು. ಇಂಥ ಆರ್ಥಿಕಪರಿಸ್ಥಿತಿಯಿದೆ. ಇನ್ನೂ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಬಹುದು. ಆದರೆ ಈ ಹಣಕಾಸಿನ ಪರಿಸ್ಥಿತಿ ನೋಡಿದರೆ ಅದು ಯಾವುದೇ ರೀತಿಯಲ್ಲೂ ಪ್ರಗತಿಯನ್ನು ಹೆಚ್ಚಿಸುವಂಥದಲ್ಲ. ಇದು ಸುಮ್ಮನೆ ಆಕಾಶದ ಕಡೆ ನೋಡಿ ಪ್ರಾರ್ಥನೆಮಾಡಿ ಮಳೆಬೆಳೆ ಚೆನ್ನಾಗಿಗೆ, ಆಹಾರ

(ಶ್ರೀ ಎಸ್. ಗೋಪಾಲಗೌಡ.)

ಪದಾರ್ಥ ಈಗ ಹೆಚ್ಚಿದೆ ಎಂದು ಹೇಳಿಕೊಳ್ಳುತ್ತಿರುವುದೇ ಹೊರತು ಮತ್ತೆ ಬೇರೆ ಕೆಲಸವಲ್ಲ. ಆದ್ದರಿಂದ ಇಂಥ ಒಂದು ಆರ್ಥಿಕ ಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗುವುದರಿಂದ ದೇಶದಲ್ಲಿ ಬೆಳೆದು ಬರುತ್ತಿರುವ ನಿರುದ್ಯೋಗ ಇನ್ನೂ ಹೆಚ್ಚುವುದಕ್ಕೆ ಕಾರಣವಾಗಿದೆ.

ಈ ಹೊತ್ತು ಕೈಗಾರಿಕೆಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ಒಂದು ಗುರಿಯನ್ನು ಪ್ರತಿಪಾದನೆ ಮಾಡುತ್ತಿದ್ದಾರೆ. ಒಟ್ಟು 80 ಲಕ್ಷ ಜನರಿಗೆ 5 ವರ್ಷಗಳಲ್ಲಿ ಕೆಲಸಕೊಡುತ್ತೇವೆಂದು ಕೇಂದ್ರದವರು ಹೇಳುತ್ತಿದ್ದಾರೆ. ಇಲ್ಲಿ 50 ಸಾವಿರ ಜನರಿಗೆ ನೇರವಾಗಿ ಕೆಲಸ ಕೊಡುತ್ತಾರೆ. ಇಷ್ಟು ಜನರಿಗೆ ಕೆಲಸ ಸಿಕ್ಕಿದರೂ ಕೂಡ ನಮ್ಮ ದೇಶದಲ್ಲಿ ಈ ಹೊತ್ತು ಲಕ್ಷೋಪಲಕ್ಷ ನಿರುದ್ಯೋಗಿಗಳಿದ್ದಾರೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ಈ ದಿನ ಒಂದು ಅಡ್ವರ್ಟೈಸ್‌ಮೆಂಟ್ ಮಾಡಿದರೆ ಸಾವಿರಾರುಜನ ಅರ್ಜಿ ಹಾಕಿಕೊಳ್ಳುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಈ ನೀತಿಯನ್ನನುಸರಿಸಿ ಹಣಕಾಸಿನ ಪರಿಸ್ಥಿತಿಯನ್ನು ಶೋಚನೀಯ ಸ್ಥಿತಿಗೆ ತಂದಿರುತ್ತಾರೆ. ಚುನಾವಣೆ ಸಮೀಪಿಸುತ್ತಿರುವುದರಿಂದ ಓಟು ಪಡೆಯಲು ಅವಕಾಶವಿರಬೇಕೆಂದು ಈಗ ಒಂದು ನೀತಿಯನ್ನನುಸರಿಸಿದ್ದಾರೆ. ಒಂದು ಕಡೆ ಜನರು ದಂಗೆಯೇಳಬಹುದೆಂದು ಸಮಿತಿ ಮಾಡಿದ್ದಾರೆ, ಹಣಬಂದರೆ ಕೊಡುತ್ತೇವೆಂದು ಹೇಳಿ ಕಣ್ಣೊರೆಸುತ್ತಿದ್ದಾರೆ. ಕೆಲವು ಬರೀ ಕಾಗದದ ಯೋಜನೆಗಳು. ಅವು ಕಾರ್ಯಗತವಾಗುವ ರೀತಿ ಹೇಗೆಂದರೆ, ಒಂದು ಬ್ಯೂರೋಕ್ರಾಟಿಕ್ ಮೆಷೀನರಿಯಿದೆ, ಅದರ ಮೂಲಕ ಕಾರ್ಯಗತವಾಗಬೇಕು. ನೇರವಾಗಿ ಹಣ ಖರ್ಚಾಗಲು ಅವಕಾಶವಿಲ್ಲ; ಕೇಂದ್ರದಿಂದ ಸಹಾಯಪಡೆದು ಕಾರ್ಯಗತ ಮಾಡುವ ಅನೇಕ ಯೋಜನೆಗಳಿವೆ, ಇಲ್ಲಿ ನಡೆಯುವ ಯೋಜನೆಗಳಿವೆ. ಇದರಿಂದ ಯಾವ ಒಂದು ಕಾರ್ಯವೂ ಸುಗಮವಾದ ರೀತಿಯಲ್ಲಿ ಈ ದಿವಸ ಆಗುತ್ತಿಲ್ಲ ಮತ್ತು ಸರ್ಕಾರದ ನೀತಿಯಿಂದ ಮತ್ತೆ ತೊಡಕಾಗಿದೆ. ಇದನ್ನು ಪ್ರಜೆ ತಾವಾಗಿಯೇ ಮುಂದೆ ಬಂದು ನಿವಾರಣೆ ಮಾಡಬೇಕೇ ಹೊರತು ಈ ಸರ್ಕಾರ ತಾನಂತೂ ಯೋಜನೆಯನ್ನು ತಯಾರಿಸಿ ಆರ್ಥಿಕಸ್ಥಿತಿಯನ್ನು ಮುಂದುವರಿಸಲಾರದು; ಅದು ಈ ವಿಚಾರದಲ್ಲಿ ಬಹುದೂರ ಹೋಗಲಾರದೆಂದು ನಿರಾಶೆಯಾಗಿದೆ. ಬೆಳೆದು ಬರುತ್ತಿರುವ ಖೋತಾ ಮತ್ತು ತೆರಿಗೆ ಹಾಕದೆ ಕೆಲಸ ಮಾಡುತ್ತೇವೆಂದು ಹೇಳುವುದು ಇವುಗಳನ್ನು ನೋಡಿದರೆ ಹೆಚ್ಚಿನ ಇನ್‌ಫ್ಲೇಷನ್ ಉಂಟಾಗಿ ಹಿಂದಿನಂತೆ ಮತ್ತೆ ಕಂಟ್ರೋಲ್ ಬರಬಹುದು ಎಂದು ಆಶೋಕ ಮೆಹ್ತಾ ಮುಂತಾದ ಮಹನೀಯರು ಅಭಿಪ್ರಾಯ ಪಟ್ಟಿದ್ದಾರೆ. ಚಿಯಾಂಗ್ ಕೈಷೇಕ್ ಸರ್ಕಾರದಂತಾದರೆ ಪ್ರಯೋಜನವಿಲ್ಲ. ಈ ರೀತಿ ಮುಂದುವರಿಯುತ್ತಾ, ಹಣದ ಉಬ್ಬರ ಜಾಸ್ತಿಯಾಗಿ ಉತ್ಪತ್ತಿ ಜಾಸ್ತಿಯಾಗದೆ ಹೋಗಬಹುದು. ಉತ್ಪತ್ತಿ ಹೆಚ್ಚಬೇಕು ಮತ್ತು ಉದ್ಯೋಗ ಬೆಳೆಯಬೇಕು. ಇದರ ಜೊತೆಗೆ ಪರ್‌ಕ್ಯಾಪಿಟಾ ಇನ್‌ಕಂ, ಕೊಳ್ಳುವ ಶಕ್ತಿ ಬೆಳೆಯಬೇಕು. ಇವೆಲ್ಲಾ ಆಗದೆ ಇವುಗಳಲ್ಲಿ ಒಂದನ್ನು ಬಿಟ್ಟು ಒಂದನ್ನು ಮಾಡಿದರೆ ಅದರಿಂದ ಅನುಕೂಲವಾಗುವುದಿಲ್ಲ. ಸಂಪಾದನಾ ಶಕ್ತಿಯನ್ನು ಹೆಚ್ಚಿಸುವುದಲ್ಲದೆ ಅದರ ಜೊತೆಗೆ ಎಲ್ಲರಿಗೂ ಉದ್ಯೋಗ ಕಲ್ಪಿಸಬೇಕು.

ಶೇಕಡ 18ರಷ್ಟು ನ್ಯಾಷನಲ್ ಇನ್‌ಕಂ ಹೆಚ್ಚಾಗಿದೆಯೆಂದು ಹೇಳುತ್ತಾರೆ. ಆದರೆ ಅದಕ್ಕೆ ಒಂದು ಸಮಿತಿ ರಚಿಸಿದ್ದರು. ಆ ಸಮಿತಿಯವರು ಹೆಚ್ಚು ಹೆಚ್ಚಾಗಿ ಅಂಕಿಅಂಶಹಾಕಿ ಹೀಗೆ ತೋರಿಸಿದ್ದಾರೆ, ಶೇಕಡ 18ರಷ್ಟು ಹೆಚ್ಚಿಲ್ಲ ಎಂದು ತೋರಿಸಬಹುದು. ನ್ಯಾಷನಲ್ ಇನ್‌ಕಂ ಜೊತೆಗೆ ಪರ್‌ಕ್ಯಾಪಿಟಾ ಇನ್‌ಕಂ ಹೆಚ್ಚದಿದ್ದರೆ, ಕೊಳ್ಳುವ ಶಕ್ತಿ ಹೆಚ್ಚದಿದ್ದರೆ, ಅದರಿಂದ ಉಪಯೋಗವಾಗುವುದಿಲ್ಲ. ಲೋಪದೋಷಗಳನ್ನು ತಿದ್ದಿಕೊಂಡು ಹಣ ಖರ್ಚಾಗುವ ಕಡೆ, ಮೊದಲನಿಂದ ಹೇಳುವ ಹಾಗೆ, ಗಮನಕೊಟ್ಟ ಹಾಗೆ ಕಾಣುವುದಿಲ್ಲ. ಹಣವನ್ನು ಖರ್ಚುಮಾಡುವಾಗ ಬಹಳ ಹತೋಟಿಯಿರಬೇಕು. ಹಣ ಹೋದಮೇಲೆ ಯಾರ ಕೈಗೆ ಹೋಯಿತೆಂದು ಪ್ರಶ್ನೆಮಾಡುವುದಕ್ಕಾಗುವುದಿಲ್ಲ. ಈ ದಿವಸ ಕೆಲವು ಯೋಜನೆಗಳಿಗಾಗಿ ಹಣ ಖರ್ಚು ಮಾಡುತ್ತಿದ್ದಾರೆ. ಆದರೆ ಅದರಮೇಲೆ ಹತೋಟಿಯಿಲ್ಲ. ಅನೇಕ ಖರ್ಚುಬಾಬುಗಳೂ ಕೂಡ ಈ ದಿವಸ ಹೆಚ್ಚುತ್ತಿವೆ. ಆದ್ದರಿಂದ ಸಂಪೂರ್ಣ ಹತೋಟಿಯನ್ನಿಟ್ಟುಕೊಳ್ಳದೆ ಹಣವನ್ನು ಇದೇ ರೀತಿ ಖರ್ಚುಮಾಡುವುದಾದರೆ, ಯಾವುದಾದರೂ ಒಂದು ಎಸ್ಟಿಮೇಟ್ ಮಾಡಿದರೆ ಅದರಂತೆ ಕೆಲಸ ನಡೆಯದೇ ಹೋದರೆ ಅದರ ಮೇಲೆ ಸಂಪೂರ್ಣ ಹತೋಟಿಯಿದೆಯೇ, ಹೇಗೆ ಎಂಬುದನ್ನು ಯೋಚನೆ ಮಾಡಬಹುದು.

ಇನ್ನು ಶ್ರೀ ಎ. ನಂಜಪ್ಪನವರ ವಿಷಯವನ್ನು ಪ್ರಸ್ತಾಪ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ. ತಮಗೆ ತಿಳಿದಿರುವ ಹಾಗೆ ಶ್ರೀಮಾನ್ ಸಿದ್ದಯ್ಯನವರು ಅಧ್ಯಕ್ಷರಾಗಿದ್ದಾಗ ಈ ವಿಷಯದಲ್ಲಿ ಒಂದು ನಿಲುವಳಿ ಸೂಚನೆಯನ್ನು ಈ ಸಭೆಯಲ್ಲಿ ನಾನು ತಂದೆ. ಆ ನಿಲುವಳಿ ಸೂಚನೆಯನ್ನು ಸಭೆಯ ಮುಂದೆ ಮಂಡಿಸಿ ಎದ್ದುನಿಂತು ಸ್ವಲ್ಪ ವಿವರಣೆ ಕೊಡುವುದಕ್ಕೆ ಮುಂಚೆ ಶ್ರೀ ಸಿದ್ದವೀರಪ್ಪನವರು ಮತ್ತು ಶ್ರೀ ಹನುಮಂತಯ್ಯನವರು—ಅವರು ಈಗ ಇಲ್ಲಿಲ್ಲ, ದಯವಿಟ್ಟು ಕ್ಷಮಿಸುತ್ತಾರೆಂದು ನಂಬುತ್ತೇನೆ—ಇಬ್ಬರೂ ಎದ್ದು ಎರಡು ಉದ್ದವಾದ ಭಾಷಣಗಳನ್ನು ಮಾಡಿದರು. ಅದಾದ ಮೇಲೆ ಕೇಸುಗಳು ಇತ್ಯಾದಿ ಎಲ್ಲ ಆಯಿತು. ಆ ತಪಶೀಲು ಈಗ ಬೇಡ. ಈ ಸಂದರ್ಭದಲ್ಲಿ ನಾನು ಆ ದಿನ ಏನು ಕೇಳಿದೆ, ಅದಕ್ಕೇನು ಉತ್ತರ ಕೊಟ್ಟರು ಎಂಬುದು ಎಲ್ಲರಿಗೂ ಗೊತ್ತಿದೆ. ಅದೊಂದೇ ಒಂದು ಕೇಸು ಕಾಂಗ್ರೆಸ್ಸಿನ ಸ್ವಜನಪಕ್ಷಪಾತ, ಅಧಿಕಾರ ದುರುಪಯೋಗ ಮತ್ತು ಕರಪ್ಷನ್, ಅನೀತಿ ಈ ಮೂರನ್ನೂ ಜಗತ್ತಿಗೆ ಎತ್ತಿ ತೋರಿಸತಕ್ಕದ್ದಾಗಿದೆ ಎಂದು ನಾನು ಆಗ ಹೇಳಿದೆ. ಏನು ತತ್ವ ಇದರಲ್ಲಿ ಅಡಕವಾಗಿದೆಯೆಂಬುದನ್ನು ಚೆನ್ನಾಗಿ ಯೋಚನೆ ಮಾಡಬೇಕು. ಹಣದ ವಿಷಯದಲ್ಲಾಗಲಿ ಅಥವಾ ವ್ಯಕ್ತಿ ವಿಷಯದಲ್ಲಾಗಲಿ ನನಗೆ ಯಾವ ಸಂಬಂಧವೂ ಇಲ್ಲ. ಆ ವ್ಯಕ್ತಿ ಅಗ್ರಿಕಲ್ಚರಲ್ ಇಲಾಖೆಯಲ್ಲಿದ್ದರು. ಆ ಇಲಾಖೆಯಲ್ಲಿ ಕೆಲವು ಲೋಪದೋಷಗಳಿವೆ, ಹಣಕಾಸಿನ ದುರುಪಯೋಗ ನಡೆದಿದೆ ಎಂದು ಕೇಸ್ ಆಯಿತು. ಅನಂತರದಲ್ಲಿ ಅವರು ರಾಜೀನಾಮೆ ಕೊಟ್ಟರು. ಇನ್ನಾರಾದರೂ ಆ ಕೆಲಸ ಮಾಡಿದ್ದರೆ ಅವರನ್ನು ಜೈಲಿಗೆ ಹಾಕುತ್ತಿದ್ದರು. ಸಾಧಾರಣವಾಗಿ every individual is equal before law. ಅದರಲ್ಲಿ ತಾರತಮ್ಯವಿಲ್ಲ, ಎಲ್ಲರೂ ಒಂದೆ. ಅದಾಯಿತು. ಆದಾದಮೇಲೆ ಅವರಿಗೆ ಅಗ್ರಿಕಲ್ಚರಲ್ ಡಿಪ್ಲೊಮಾ ಇದೆ ಎಂದು 50 ಎಕರೆ ಜಮೀನನ್ನು ಈ ಸರ್ಕಾರ ಬಹುಮಾನದ ರೂಪದಲ್ಲೋ ಅಥವಾ ಗ್ರಾಂಟ್ ರೂಪದಲ್ಲೋ ಕೊಟ್ಟರು. ಭಾಷಣ ಹಿಂದೆ ಮಾಡಿರುವುದರಲ್ಲೇ ಇದೆಲ್ಲಾ ಇದೆ, ಶ್ರೀ ಸಿದ್ದವೀರಪ್ಪನವರ ಮತ್ತು ಶ್ರೀ ಹನುಮಂತಯ್ಯನವರ ಭಾಷಣದಲ್ಲೇ ಇದೆ. ಅನಂತರ ಬಂದಿರುವ ಹೇಳಿಕೆಗಳನ್ನು ಮಾತ್ರ

ಗಮನಿಸಿ ಈಗ ಒಂದೆರಡು ವಿಚಾರ ಹೇಳುತ್ತಿದ್ದೇನೆ. ಅವರಿಗೆ ಅಗ್ರಿಕಲ್ಚರಲ್ ಡಿಪ್ಲೊಮಾ ಇದೆ ಎಂದೋ ಅಥವಾ ಅವರು ಡಿಗ್ರಿ ಹೋಲ್ಡರೆಂದೋ ಆ ಒಂದು ಆಧಾರದ ಮೇಲೆ ದೇಶದಲ್ಲಿ ಹೆಚ್ಚು ಆಹಾರದ ಬೆಳವಣಿಗೆಗೆ ಸಹಾಯ ಮಾಡುತ್ತಾರೆಂದು ಅವರಿಗೆ ಜಮೀನನ್ನು ಕೊಟ್ಟರು. ಅಲ್ಲಿ ಮೊದಲು ರೈತರಿದ್ದರು. ಅವರಿಂದ ತಪ್ಪಿಸಿ ಇವರಿಗೆ ಕೊಟ್ಟರು. ಇಪ್ಪತ್ತೈದು ವರ್ಷಗಳಿಂದ ಆ ಜಮೀನು ಗೋಮಾಳಕ್ಕೂ ಆಕ್ವೈಯರ್ ಫಾರೆಸ್ಟಿಗೂ ಸೇರಿತ್ತು. ಅದು ನಡೆದಮೇಲೆ ಈ ಸಭೆಯಲ್ಲಿ ಚರ್ಚೆಯಾಗಿದೆ. ಅದನ್ನು ಈಗ ಪ್ರಸ್ತಾಪ ಮಾಡುವುದಿಲ್ಲ; ಅದು ಅಪ್ರಕೃತ, ಕಣ್ಣಿಗೆ ಕಾಣುವುದು. ಅನಂತರ ಒಂದು ದಿವಸ ಪತ್ರಿಕೆಯಲ್ಲಿ ನೆಹ್ರೂ ಅವರು ಸುಮಾರು 13 ಸಾವಿರ ರೂಪಾಯಿ—subject to correction—ನಂಜಪ್ಪನವರಿಗೆ ಪರಿಹಾರವಾಗಿ ಕೊಡಬೇಕೆಂದು ತಿಳಿಸಿದ್ದಾರೆಂದು ಕಂಡುಬಂತು. ಅದೇಕೆ, ಏನು ಎಂಬ ಪ್ರಶ್ನೆಯಿಲ್ಲ. ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ಅವರಿಗೆ ಹಣ ಕೊಡಬೇಕು.

1-30 P.M.

ನಾನು ಈಗ ಕೇಳುತ್ತಿದ್ದೇನೆ, ನ್ಯಾಯಾಂಗ ಇಲಾಖೆಯವರು ಅಂದರೆ ನ್ಯಾಯಾಧೀಶರು ಇವರಿಗೆ ಒಂದು ಲಕ್ಷ ಚಿಲ್ಲರೆ ರೂಪಾಯಿಗಳನ್ನು ಪರಿಹಾರ ರೂಪವಾಗಿ ಕೊಡಬೇಕೆಂದು ತೀರ್ಮಾನಮಾಡಿದ್ದಾರೆ ಎಂಬುದಾಗಿ. ಇದೇನು ಸ್ವಾಮಿ ಇದು! ಅವರ ಮೇಲೆ ಆ ಆಂಟಿಕರಪ್ಷನ್ ಇಲಾಖೆಯಲ್ಲಿದ್ದ ಕೇಸ್ ಏನಾಯಿತು? ಅದು ಎತ್ತ ಹೋಯಿತು? ಈ ವಿಚಾರಗಳೆಲ್ಲಾ ದೇಶದಲ್ಲಿರತಕ್ಕಂಥ ಜನ ಸಮುದಾಯಕ್ಕೆ ಹೇಗೆ ಗೊತ್ತಾಗುವುದು? ಆ ಜಮೀನನ್ನು ಸರ್ಕಾರದವರು ಅವರಿಗೆ ಯಾವಾಗ ಕೊಟ್ಟರು? ಅದು ಯಾರ ವಶದಲ್ಲಿತ್ತು? ಆ ಜಮೀನು ಇವರ ವಶದಲ್ಲಿ ಎಷ್ಟು ದಿನಗಳಿಂದ ಇತ್ತು? ಅದನ್ನು ಇವರು ಬಿಡಿಸಿಕೊಂಡಿದ್ದು ಯಾವಾಗ? ಆ ಜಮೀನಿನ ಲಕ್ಷಣ ಎಂಥಾದ್ದು? ಅದನ್ನು ಎಷ್ಟು ಬೆಲೆಗೆ ಕೊಡಲಾಗಿತ್ತು? ಇದಕ್ಕೆ ಕಾನೂನು ಪ್ರಕಾರ ಒಂದು ಲಕ್ಷ ರೂಪಾಯಿಗಳನ್ನು ಪರಿಹಾರ ರೂಪವಾಗಿ ಕೊಡಬೇಕೆಂದು ಅವರೇನೋ ಹೇಳಿದ್ದಾರೆ ಆದರೆ ಇದೆಲ್ಲಾ ಸರಿಯಾಗಿದೆಯೋ ಎನ್ನುವುದನ್ನು ತಾವುಗಳೆಲ್ಲರೂ ಆಲೋಚನೆ ಮಾಡಿ ನೋಡಬೇಡವೇ? ಆದರೆ ಈ ಹಿಂದೆ ಆ ಶ್ರೀಮಾನ್ ನಂಜಪ್ಪನವರೂ ಸಹ ನನಗೆ ಸಿಕ್ಕಿದ್ದರು. ಆಗ ಅವರು ಈ ವಿಚಾರದಲ್ಲಿ ಕೋರ್ಟಿನ ತೀರ್ಮಾನಕ್ಕೆ ಕಾದಿರುವುದಾಗಿ ತಿಳಿಸಿದರು. ಆಗ ನಾನು ಅವರಿಗೆ ತಾವೇತಕ್ಕೆ ಕೋರ್ಟಿಗೆ ಹೋದಿರಿ, ಸ್ವಾಮಿ. 'ಇದೆಲ್ಲವನ್ನು ತಾವು ಕೈಬಿಟ್ಟುಬಿಟ್ಟಿದ್ದರೆ ಚೆನ್ನಾಗಿತ್ತಲ್ಲಾ' ಎಂಬುದಾಗಿ ತಿಳಿಸಿದೆನು. ಈ ದುಡ್ಡನ್ನೂ ಸಹ ಬಿಟ್ಟುಬಿಡಿ ಎಂಬುದಾಗಿ ನಾನು ತಿಳಿಸಿದೆನು. ನಾನೀಗ ಅವರನ್ನು ತಪ್ಪಿತಸ್ಥರೆಂದು ಕರೆಯುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಈ ದಿವಸ ಒಂದು ವ್ಯವಸ್ಥೆ ಇದೆ, ಒಂದು ಸಮಾಜವಿದೆ; ಆಡಳಿತವಿದೆ. ಆದರೆ ನಾನು ಶ್ರೀ ಹನುಮಂತಯ್ಯನವರದು ಒಂದು ಸರ್ಕಾರ, ಶ್ರೀ ಮರಿಯಪ್ಪನವರದೊಂದು ಸರ್ಕಾರ ಎಂದು ವಿಭಾಗ ಮಾಡುವುದಕ್ಕೆ ಹೋಗುವುದಿಲ್ಲ. ಆ ರೀತಿ ಒಂದು ವಿಭಾಗವನ್ನೂ ಸಹ ಮಾಡಬಾರದೆಂದು ಹೇಳುತ್ತಿದ್ದಾರೆ. ಹಾಗೆ ಮಾಡಿದರೆ ವ್ಯಾಜ್ಯವಾಗುತ್ತದೆಂದು ಹೇಳುತ್ತಿದ್ದಾರೆ. ಆದುದರಿಂದ ಸರ್ಕಾರದವರು ಈಗ ಈ ಕೇಸಿನ ಬಗ್ಗೆ ಸಂಪೂರ್ಣ ವಿವರಣೆ ಕೊಡಬೇಕಾಗಿದೆ. ಇಂಥ ಒಂದು ಹೇಳಿಕೆಯನ್ನು ಸರ್ಕಾರದವರು ನೀಡಿ ಜನರಿಗೆ ಒಂದು ತೃಪ್ತಿಕರವಾದ ರೀತಿಯಲ್ಲಿ ಸಮಾಧಾನ ಹೊಂದುವಂತೆ ಇದಕ್ಕೊಂದು ಪರಿಹಾರ ನೀಡಬೇಕಾಗಿದೆ. ಈ ರೀತಿಯಾಗಿ ಇವರು ಮಾಡದೆ ಇರುವ ಪಕ್ಷದಲ್ಲಿ ಇವರ ಮೇಲೆ ಎಷ್ಟೇ ದಿನಗಳಾಗಲಿ ಇವರ ಮೇಲೆ ಎಂದಿಗೂ ಅಳಿಸಿ ಹೋಗದಂಥ ಒಂದು ಕಳಂಕ ಅನೀತಿ-ಇತ್ಯಾದಿ ಶಬ್ದಗಳು ಇವರ ಮೇಲೆ ಮುಕುಟಪ್ರಾಯವಾಗಿ ಕುಳಿತುಕೊಳ್ಳಲು ಅವಕಾಶವಾಗುತ್ತದೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು ಬಜೆಟ್ ಭಾಷಣದಲ್ಲಿ ಈ P.S.C. ಮತ್ತು ಎಫಿಷಿಯನ್ಸಿ ವಿಚಾರಗಳ ಬಗ್ಗೆ ಪ್ರಸ್ತಾಪಿಸುತ್ತಾ 'ನಮ್ಮ ದೇಶದಲ್ಲಿ ಈಗಾಗಲೇ ನಡೆಸಿರತಕ್ಕಂಥ ಈ ಪಾಂಚವಾರ್ಷಿಕ ಯೋಜನೆಯನ್ನು ಇಷ್ಟರ ಮಟ್ಟಿಗೆ ಫಲಕಾರಿಯಾಗಿಯೂ ಮತ್ತು ಯಶಸ್ವಿಯಾಗಿಯೂ ನಡೆಸಿಕೊಂಡು ಬಂದಿರುವುದಕ್ಕೆ ಕಾರಣ ನಮ್ಮ ಅಧಿಕಾರಿಗಳು ಈ ಭಾಗದಲ್ಲಿ ಬಹಳ ಸಹಾಯ ಮಾಡಿದ್ದಾರೆ, ಬಹಳ ಚೆನ್ನಾಗಿ ಅವರು ಕೆಲಸ ಮಾಡಿದ್ದಾರೆ, ಎಂಬ ಕೆಲವು ಮೆಚ್ಚಿಕೆಯ ಮಾತುಗಳನ್ನು ಇಲ್ಲಿ ಆಡಿರುತ್ತಾರೆ' ಆದರೆ ನಾನು ಈ ಅಭಿಪ್ರಾಯವನ್ನು ಸಂಪೂರ್ಣವಾಗಿ ಒಪ್ಪುವುದಕ್ಕೆ ಕಷ್ಟವಾಗಿದೆ. ಅನೇಕ ಸಂದರ್ಭಗಳಲ್ಲಿ ನಮ್ಮ ಹಾಗೆ ನಮ್ಮ ಸರ್ಕಾರಿ ಅಧಿಕಾರಿಗಳಿಗೆ ಈ ರಾಷ್ಟ್ರಾಭಿವೃದ್ಧಿ ಕಾರ್ಯಗಳ ಮೇಲೆ ಅಷ್ಟಾಗಿ ಗಮನವಿದ್ದ ಹಾಗೆ ಕಾಣುವುದಿಲ್ಲ. ಆದರೆ ಎಲ್ಲರೂ ಹೀಗೆ ಇದ್ದಾರೆಂದು ನಾನು ಹೇಳುತ್ತಿಲ್ಲ. ಆದರೆ ಅನೇಕ ನೌಕರರಿಗೆ ಈ ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಆಸಕ್ತಿ ಕಡಮೆ. ಆದರೆ ನಾನು ಈ ದೂಷಣೆಯನ್ನೆಲ್ಲಾ ಈ ಅಧಿಕಾರಿವರ್ಗದ ಮೇಲೆ ಹಾಕುವುದರಿಂದ ಅಷ್ಟೇನೂ ಪ್ರಯೋಜನವಿಲ್ಲವೆಂದು ತಿಳಿದುಕೊಂಡಿದ್ದೇನೆ. ಇದಕ್ಕೆ ಸರ್ಕಾರದವರೂ ಕೂಡ ಕೆಲವು ಮಟ್ಟಿಗೆ ಕಾರಣವೆಂದು ನಾನು ಸ್ವಲ್ಪ ವಿಷಾದದಿಂದ ಹೇಳಬೇಕಾಗಿದೆ. ನಮ್ಮ ಸಂಸ್ಥಾನದ ಎಂದರೆ ಮೈಸೂರು ಗೆಜೆಟ್ಟಿನಲ್ಲಿ ಪ್ರತಿ ವಾರವು ಪ್ರತಿಯೊಂದರಲ್ಲೂ ಈ ಮಂತ್ರಿಗಳ ಪ್ರವಾಸ ಕಾಲದಲ್ಲಿ—ಇವರಿಗೆ ಯಾರೂ ಈ ಹಾರ-ತುರಾಯಿ ಇತ್ಯಾದಿಗಳನ್ನು ಹಾಕಬಾರದು, ಚಪ್ಪರ ವಗೈರೆಗಳ ಆಡಂಬರಕ್ಕೆ ಅವಕಾಶ ಕೊಡಬಾರದು ಎಂಬ ನೋಟಿಫಿಕೇಷನ್ ಇದ್ದೇ ಇರುತ್ತದೆ. ಇದನ್ನು ಸರ್ಕಾರಿ ಅಧಿಕಾರಿಗಳ ಮತ್ತು ಸಾರ್ವಜನಿಕರುಗಳ ತಿಳಿವಳಿಕೆಗೋಸ್ಕರವಾಗಿಯೇ ಪಬ್ಲಿಷ್ ಮಾಡಲಾಗುತ್ತದೆ. ಆದರೆ ಈ ವಿಚಾರವನ್ನು ನಾನು ಹಾಗೇ ಆಲೋಚನೆ ಮಾಡಿ ನೋಡಿದಲ್ಲಿ ಹೀಗೆಲ್ಲಾ ಮಾಡಬಾರದೆಂದು ಗೆಜೆಟ್ಟಿನಲ್ಲಿ ಲಿಖಿತ ಮೂಲಕವಾಗಿ ತಿಳಿಸಿದ್ದಾಗ್ಯೂ ಏನು ಈ ಅಧಿಕಾರಿವರ್ಗದವರು ತಾವೇ ಹೀಗೆಲ್ಲಾ ಸ್ವಯಂ ಪ್ರೇರಿತರಾಗಿ ಮಾಡುತ್ತಿದ್ದಾರೋ, ಅಥವಾ ಅವರಿಗೆ ಮಧ್ಯೆ ಮತ್ತೆ ಯಾರಾದರೂ ಸೇರಿಕೊಂಡು ಹೀಗೆಲ್ಲಾ ಮಾಡಬೇಕೆಂದು ಹೇಳಿ ಮಾಡಿಸುತ್ತಿದ್ದಾರೋ ಅಥವಾ ಕೆಲವು ಸಂದರ್ಭಗಳಲ್ಲಿ ಮಂತ್ರಿಗಳೇ ಏನಾದರೂ ಹೀಗೆ ಮಾಡಿಸಿ ಎಂದು ಹೇಳಿ ಮಾಡಿಸಿಕೊಳ್ಳುತ್ತಿದ್ದಾರೋ ಎಂಬ ಇದರ ಮರ್ಮವೇ ನನಗೆ ಗೊತ್ತಾಗುತ್ತಿಲ್ಲ. ಬರವಣಿಗೆಯಲ್ಲಿ ನೋಡಿದರೆ ಹಾಗಿದೆ. ಹೊರಗಡೆ ಆಚರಣೆಯಲ್ಲಿ ನೋಡಿದರೆ ಈ ಹಾರ-ತುರಾಯಿ, ಪೆಂಡಾಲ್ ಎಲ್ಲಾ ಸಿದ್ಧವಾಗಿ ಅವರು ಬರುವ ವೇಳೆಗೆ ತಯಾರಾಗಿರುತ್ತವೆ. ಆದರೆ ಇದರಲ್ಲಿ ಒಂದು ಹೊಸ ವಿಶೇಷವೇನು ಕಂಡುಬರುತ್ತದೆ ಎಂದರೆ—ಮೊದಲನ ಮಾದರಿಯ ಹಾರಗಳನ್ನೆಲ್ಲ ಈಗ ಹಾಕುತ್ತಿರುವುದು. ಈಗ ಹಾಕತಕ್ಕ ಹಾರಗಳ ವಿಚಿತ್ರವೇ ಒಂದು ರೀತಿ. ಹಾರ ಹಾಕಿಸಿಕೊಳ್ಳುವ ವ್ಯಕ್ತಿಗಳು ಎಷ್ಟು ಉದ್ದ

(ಶ್ರೀ ಡಿ. ದೇವರಾಜ ಅರಸ್.)

ವಾಗಿರುತ್ತಾರೋ ಅಷ್ಟು ಉದ್ದವಾದ ಹಾರ ಆಗಿರುವುದೊಂದಲ್ಲದೆ ಆ ಉದ್ದಕ್ಕೆ ತಕ್ಕಹಾಗೆ ಗಾತ್ರ ಕೂಡ ಉಳ್ಳಂಥ ಹಾರಗಳನ್ನು ಹಾಕುತ್ತಿದ್ದಾರೆ. ಹೀಗೆ ಒಂದು ಹೊಸ ರೀತಿಯಲ್ಲಿ ಇದು ನಡೆಯುತ್ತಿದೆ. ಆದರೆ ನಮ್ಮ ಸರ್ಕಾರದವರು ಹೇಳುತ್ತಿರುವುದೇನು ? ನಮ್ಮ ಅಧಿಕಾರಿಗಳು ದೇಶ ಪ್ರೇಮವನ್ನಿಟ್ಟುಕೊಂಡು ಕೆಲಸ ಮಾಡಬೇಕು ಅವರು ಆ ರೀತಿ ಕೆಲಸ ಮಾಡಿ ದೇಶದಲ್ಲಿರತಕ್ಕಂಥ ಜನರ ಪ್ರೇಮ-ಪ್ರೀತಿ-ವಿಶ್ವಾಸಗಳನ್ನು ಗಳಿಸಿಕೊಳ್ಳಬೇಕು ಎಂಬುದಾಗಿ ಅವರಿಗೆ ಬೋಧೆ ಮಾಡುತ್ತಿದ್ದಾರೆ. ಹೀಗೆ ಬೋಧೆ ಮಾಡತಕ್ಕ ಅಧಿಕಾರ ವರ್ಗದವರೇ ಇಂಥ ನಡವಳಿಕೆ ನಡೆಸುತ್ತಿದ್ದಾರೆ ; ಬರವಣಿಗೆಯಲ್ಲಿರುವುದಕ್ಕೆ ವಿರೋಧವಾಗಿ ಕಾರ್ಯಾಚರಣೆ ನಡೆಸಲು ಅವರಿಗೆ ಪ್ರೋತ್ಸಾಹ ನೀಡುತ್ತಾ ಹೋದರೆ ನಾಳೆ ಈ ಅಧಿಕಾರಿಗಳಿಗೂ ಇವರಿಗೂ ಜನರ ಹಾಗೂ ದೇಶದ ಹಿತದೃಷ್ಟಿಯನ್ನು ಗಮನದಲ್ಲಿಟ್ಟು ಕೆಲಸ ನಡೆಸಲು ಸಾಧ್ಯವಾಗುತ್ತದೆಯೇ ಎನ್ನುವುದನ್ನು ನಾವೀಗ ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆ. ಆಗಲೇ ಶ್ರೀ ಮಾಟಿ. ಮರಿಯಪ್ಪನವರು ಹೇಳಿದ ಹಾಗೆ, ಸರ್ಕಾರ ಎಂದೂ ಬೇರೆ ಆಗಿರುವುದಿಲ್ಲ. 1947ರಲ್ಲಿ ಯಾವಾಗ ಈ ಆಡಳಿತಾಧಿಕಾರವನ್ನು ನಮ್ಮ ಕಾಂಗ್ರೆಸ್ ಸಂಸ್ಥೆ ವಹಿಸಿಕೊಂಡಿತೋ ಆ ಕಾಲದಿಂದಲೂ ಆ ಮೊದಲಿನವರು ಹಾಕಿಕೊಟ್ಟಂಥ ಪೀಠಿಕೆಯೇ ಈಗಲೂ ನಡೆದುಕೊಂಡು ಬರುತ್ತಿದೆ.

ಶ್ರೀ ಟಿ. ಮರಿಯಪ್ಪ (ಮೈಸೂರು ಉತ್ತರ). --ಈಗ ಮೊದಲಿಗಿಂತಲೂ ಅದರ ಹತ್ತರಷ್ಟು ಜಾಸ್ತಿಯಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಈಗ ಹತ್ತರಷ್ಟಾಗಿದ್ದರೆ-ಆಗ ಇದರ ಒಂದರಷ್ಟಾದರೂ ಇತ್ತು ಎಂದು ಒಪ್ಪಿಕೊಂಡಹಾಗಾಯಿತು. ಆದ್ದರಿಂದ ಖಂಡಿತವಾಗಿಯೂ ನಾವು ತಿಳಿದುಕೊಂಡಿರುವ ಹಾಗೆ "ಸರ್ವರೂ ಒಂದೇ" ಎಂದು ಹೇಳುವುದು ಸರಿಯಲ್ಲ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ :—"ನಾವು ಹಳೆಯ ಪದ್ಧತಿಗಳನ್ನು ಬಿಡಬೇಕು, ಹಳೇ ರೀತಿಯಲ್ಲಿ ನಾವು ಆಲೋಚನೆ ಮಾಡುವುದನ್ನು ಬಿಡಬೇಕು, ರಾಜರ ಮೇಲಿಟ್ಟಿರತಕ್ಕ ಭಕ್ತಿಯನ್ನು ಬಿಡಬೇಕು" ಎಂಬುದಾಗಿ. ಆದರೆ ಈ ವಿಚಾರಗಳೇನೂ ನಮಗೆ ಹೊಸವಲ್ಲ. ಈ ವಿಚಾರಗಳನ್ನೆಲ್ಲಾ ನಾವು ಬಹಳ ಹಿಂದೆಯೇ ಹೇಳುತ್ತಿದ್ದೆವು. ಈಗಲೂ ನಮಗೆ ಇವೇನೂ ಹೊಸ ವಿಚಾರಗಳಲ್ಲ. ಅವುಗಳನ್ನೆಲ್ಲಾ ಹಾಗೆ ಬಿಟ್ಟುಬಿಡಬೇಕಾದ್ದೂ ಸಹ ನಿಜವೇ ! ಅದೇ ರೀತಿ ನಾವೀಗ ಬಿಡುತ್ತಲೇ ಬಂದಿದ್ದೇವೆ. ಆದರೆ ಬಿಡುತ್ತಿದ್ದೇವೆ ಎಂದರೆ ಅವುಗಳನ್ನು 'ರಿಪ್ಲೇಸ್' ಮಾಡಿಕೊಂಡು ಬರುತ್ತಿದ್ದೇವೆ. ಈ ಹಿಂದೆ ನಾವು ದೊರೆಗಳಿಗೆ ಲಾಯಲ್ಟಿ ತೋರಿಸುತ್ತಿದ್ದೆವು. ಈಗ ಅದು ಅವರಿಗೆ ತಪ್ಪಿಹೋಗಿ-ಆ ಲಾಯಲ್ಟಿಯನ್ನು ನಾವು ಮಂತ್ರಿಗಳಿಗೆ ತೋರಿಸುತ್ತಿದ್ದೇವೆ. ಹಿಂದಿನ ಕಾಲದಲ್ಲಿ ತುಂಬ ಐಶ್ವರ್ಯವಂತರಿಗೂ ಮತ್ತು ಜೋಡಿದಾರರು ಮತ್ತು ಜಹಗೀರ್‌ದಾರರೆಂದು ಯಾರು ಇದ್ದರೋ ಅಂಥವರಿಗೆ ಒಂದು ಹೆಚ್ಚಿನ ಗೌರವ ಸಲ್ಲುತ್ತಿದ್ದಿತು. ಈಗ ಅವರಿಗೆಲ್ಲಾ ಆ ಗೌರವ ರದ್ದಾಗಿಹೋಯಿತು. ಯಾವಾಗ ನಾವು ಆ ಜನರ ಜೋಡಿ-ಜಹಗೀರುಗಳನ್ನೆಲ್ಲಾ ಕಾನೂನು ಮೂಲಕ ರದ್ದುಗೊಳಿಸಿದೆವೋ ಅಂದೇ ಅವರಿಗೆಲ್ಲಾ ಆ ಮರ್ಯಾದೆ ನಿಂತುಹೋಯಿತು. ಈಗ ಆ ಮರ್ಯಾದೆಗೆಲ್ಲಾ ಇನ್ನೊಂದು ಕ್ಲಾಸಿನ ಜನರು ಹುಟ್ಟಿಕೊಂಡಿದ್ದಾರೆ. ಈ ಹೊತ್ತಿನ ಐಶ್ವರ್ಯವಂತರು ಮತ್ತೊಂದು ರೀತಿಯಲ್ಲಿ ಹೊರಗೆ ಬರಲು ಪ್ರಾರಂಭವಾಗಿದೆ. ಈ ಹೊತ್ತು ಈ ಬಿಜನೆಸ್ ಪ್ರಪಂಚದಲ್ಲಿ-ವಾಣಿಜ್ಯ ಪ್ರಪಂಚದಲ್ಲಿ ಲಕ್‌ಪತಿಗಳೆಂದು ಯಾರಿದ್ದಾರೋ ಅಂಥವರಲ್ಲಿ ಯಾರಿಗೆ ಈ ಸರ್ಕಾರದ ಮೇಲೆ ತಮ್ಮ ಪ್ರಭಾವ ಬೀರಲು ಅವಕಾಶವಿರುತ್ತದೆಯೋ ಅಂಥವರಿಗೆ ಈ ದಿವಸ ಮರ್ಯಾದೆ ಸಿಕ್ಕುತ್ತಿದೆ. ಹೀಗೆಲ್ಲಾ ಮಾಡುತ್ತಿರುವುದನ್ನು ನೋಡಿದರೆ ಇದು ನಿಜವಾಗಿಯೂ ಪ್ರಜಾ ಪ್ರಭುತ್ವದ ಮಾರ್ಗದಲ್ಲಿ ಆಡಳಿತ ನಡೆಸತಕ್ಕಂಥ ರೀತಿ ನೀತಿಯೇ ? ಈ ದಿವಸ ನಾವು ಹೇಳುತ್ತಿರುವಂಥ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿಯನ್ನು ಜಾರಿಗೆ ತರತಕ್ಕಂಥ ಮಾರ್ಗ ಇದೇನೇನು ? ಇಂಥ ವಿಚಾರಗಳ ಬಗ್ಗೆ ಸರ್ಕಾರದವರು ಕೇವಲ ಈ ಒಂದು ಬಡ್ಜೆಟ್ ಪುಸ್ತಕದಲ್ಲಿ ಹೀಗೆಲ್ಲಾ ಬರೆದು ಪ್ರಿಂಟ್ ಮಾಡಿಸಿ ಹಂಚಿದಾಕ್ಷಣಕ್ಕೇ ಈ ಕಾರ್ಯಕ್ರಮಗಳೆಲ್ಲಾ ಹೀಗೆ ಮುಂದುವರಿಯುತ್ತವೆಂದು ಹೇಳುವುದಕ್ಕಾಗುವುದಿಲ್ಲ. ಇವುಗಳನ್ನು ಕಾರ್ಯತಃ ನಡೆಸಬೇಕು. ಆದರೆ ಈ ದಿವಸ ಇವುಗಳನ್ನೆಲ್ಲಾ ನಿಷ್ಠೆಯಿಂದ ನಾವು ಕಾರ್ಯತಃ ನಡೆಸಿಕೊಂಡು ಬರುತ್ತಿದ್ದೇವೆಂದು ಹೇಳುತ್ತಿರುವ ಸರ್ಕಾರದವರೇ ಹೋದಕಡೆಗಳಲ್ಲೆಲ್ಲಾ ದೊಡ್ಡ ದೊಡ್ಡ ಚಪ್ಪರ ಭಾಜಾ-ಭಜಂತ್ರಿಗಳನ್ನು ಹೊಡೆಸಿಕೊಂಡು ಮೆರವಣಿಗೆ ಮಾಡಿಸಿಕೊಳ್ಳುತ್ತಿದ್ದರೆ ಇಂಥವರು ಇತರರಿಗೆ ಹೇಗೆ ಮಾರ್ಗದರ್ಶಕರಾಗಬಲ್ಲರು ಎಂದು ಕೇಳುತ್ತೇನೆ. ಈ ದಿವಸ ಪ್ರಜಾ ಪ್ರಭುತ್ವ ತತ್ವಗಳಿಗನುಸಾರವಾಗಿ ಆಡಳಿತ ನಡೆಸುವಾಗ ಇಂಥ ಆಡಂಬರಗಳಿಗೆಲ್ಲಾ ಕಾಲವಲ್ಲ. ಸರ್ಕಾರದವರು ಮೇಲ್ಮಟ್ಟದಲ್ಲಿ ಹೆಜ್ಜೆ ಹಾಕುತ್ತಾ ಇತರರಿಗೆ ಮಾರ್ಗದರ್ಶಕರಾಗಿರಬೇಕೆಂದು ಈ ಸಂದರ್ಭದಲ್ಲಿ ಈ ಸೂಚನೆಯನ್ನು ಮಾಡಲು ಇಷ್ಟಪಡುತ್ತೇನೆ.

ಇನ್ನು ಈ ದಿವಸ ಸರ್ಕಾರದಲ್ಲಿ ಕೇಂದ್ರೀಕೃತವಾಗಿರತಕ್ಕ ಅಧಿಕಾರವನ್ನು ವಿಕೇಂದ್ರೀಕೃತ ಮಾಡಬೇಕೆಂದು ನಾವೆಲ್ಲರೂ ಪ್ರಯತ್ನ ಮಾಡುತ್ತಿದ್ದೇವೆ. ಇದರಿಂದ ಸರ್ಕಾರದ ಕಾರ್ಯ ಕಲಾಪಗಳು ಜಾಗ್ರತೆ ನಡೆಸುವ ಹಾಗೆ ಮಾಡಬೇಕೆಂದು ಆಲೋಚನೆ ಮಾಡಲಾಗಿದ್ದಿತು. ಇದನ್ನು ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತರಬೇಕೆಂದು ಈ ಮಾನ್ಯ ಸಭೆಯವರು ಆಗಿಂದಾಗ್ಗೆ ಒತ್ತಾಯಪಡಿಸುತ್ತಲೇ ಬಂದಿದ್ದಾರೆ. ಈ ಸಂಬಂಧವಾಗಿಯೇ ಈ ಹಿಂದೆ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ತಾಲ್ಲೂಕ್ ಅಮಲ್ದಾರರುಗಳಿಗೆಲ್ಲಾ ಯಾರಾರಿಗೆ ಜಮೀನಿಲ್ಲವೋ ಅಂಥವರಿಗೆಲ್ಲಾ ಜಮೀನು ಕೊಡಲು ಒಂದು ಅಧಿಕಾರವನ್ನು ಅವರಿಗೆ ಕೊಡಲಾಗಿತ್ತು. ಹಾಗೆ ಮಾಡಿದ್ದರಿಂದ ಸಾರ್ವಜನಿಕರಿಗೆಲ್ಲಾ ಬಹಳ ಅನುಕೂಲವಾಯಿತು. ಆ ರೀತಿ ಮಾಡಿದ್ದರಿಂದ ಸರ್ಕಾರದ ಕೆಲಸ ಕಾರ್ಯಗಳೂ ಸಹ ಸರಾಗವಾಗಿ ನಡೆಯಲು ಒಂದು ಅವಕಾಶವಾಯಿತು. ಅದೇ ರೀತಿಯಾಗಿ ಒಂದು ವ್ಯವಸ್ಥೆಯನ್ನು ಈ ಇಂಜನಿಯರಿಂಗ್ ಇಲಾಖೆಯಲ್ಲೂ ನಡೆಸುವುದು ಅಗತ್ಯವಾಗಿದೆಯೆಂದೂ, ಆ ಬಾಬಿನಲ್ಲಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕೆಂದೂ ಈ ಹಿಂದೆ ನಾನು ಆ ಎಸ್ಟಿಮೇಟ್ ಕಮಿಟಿಯಲ್ಲಿದ್ದಾಗ ಒಂದು ಸಲಹೆಯನ್ನು ಮಾಡಿದ್ದೆವು. ಆ ನಮ್ಮ ಸಲಹೆಗಳೊಂದೂ ಈವರೆಗೆ ಜಾರಿಗೆ ಬಂದಿಲ್ಲ. ಈಗ ಸೂಪರಿಂಟೆಂಡೆಂಟ್ ಇಂಜನಿಯರಿಗೂ ಮತ್ತು ಎಗ್ಸಿಕ್ಯುಟೀವ್ ಇಂಜನಿಯರಿಗೂ ಎಸ್ಟಿಮೇಟ್ಸ್ ಬಗ್ಗೆ ಮಂಜೂರು ಮಾಡಲು ಇರತಕ್ಕಂಥ ಅಧಿಕಾರವನ್ನು ಇತ್ತೀಚೆಗೆ ಜಾಸ್ತಿ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಆ ಅಧಿಕಾರದ ವಿಕೇಂದ್ರೀ

ಕರಣವಿನ್ನೂ ಈ ಇಲಾಖೆಯಲ್ಲಿ ಹೆಚ್ಚಾಗಿ ಜಾರಿಗೆ ಬಂದಿಲ್ಲ.

ಇನ್ನು ಈ ರೂರಲ್ ಇಂಡಸ್ಟ್ರಿಯಲ್ ಸೊಸೈಟಿಗಳೆಂದು ಏನಿರುತ್ತವೆಯೋ ಇವುಗಳಲ್ಲಿ ಯಾರಾದರೂ ಕೇವಲ 50-100 ರೂಪಾಯಿಗಳಿಗೆ ಸಾಲಕ್ಕೆ ಅರ್ಜಿ ಹಾಕಿದರೆ ಆ ಸಾಲದ ಅರ್ಜಿಗಳು ತಮ್ಮ ಮಂಜೂರಾತಿಗಾಗಿ ಹೆಡ್ ಆಫೀಸಿಗೆ ಡೈರೆಕ್ಟರವರ ಹತ್ತಿರಕ್ಕೇ ಬರಬೇಕಾಗಿರುವುದರಿಂದ ಯಾರಿಗೂ ಈ ಸೊಸೈಟಿಗಳಲ್ಲಿ ಸಕಾಲಕ್ಕೆ ಸಾಲ ಪಡೆಯಲು ಸಾಧ್ಯವಾಗುತ್ತಿಲ್ಲ. ವರ್ಷಾನುಗಟ್ಟಲೆ ನಿಧಾನವಾಗುತ್ತಿದೆ. ಈ ಇಲಾಖೆಯಲ್ಲೂ ಹೀಗೆ ಅಧಿಕಾರ ಒಂದೇ ಕಡೆ ಕೇಂದ್ರೀಕೃತವಾಗಿರುವುದರಿಂದ ನಾವು ಈ ಸಂಸ್ಥೆಗಳಿಂದ ಎಷ್ಟರಮಟ್ಟಿಗೆ ಸಹಾಯವನ್ನು ನಿರೀಕ್ಷಿಸಿದ್ದೇವೋ ಅಷ್ಟು ಆಗುತ್ತಿಲ್ಲ. ಆದಕಾರಣ ಸರ್ಕಾರದವರು ತಕ್ಷಣ ಈ ಅಧಿಕಾರವನ್ನು ವಿಕೇಂದ್ರೀಕೃತ ಮಾಡಲು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸುತ್ತೇನೆ.

ಸ್ವಾಮಿ, ಇನ್ನು ಈ ವಿದ್ಯಾನಿಲಯಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈ ದಿವಸ ನಮ್ಮ ಸರ್ಕಾರ ನಮ್ಮ ನೂತನ ಸಮಾಜಕ್ಕನುಗುಣವಾದಂಥ ಏನೊಂದು ವಿದ್ಯಾ ಪದ್ಧತಿಯನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದಾರೋ ಅದಕ್ಕೆ ಅನುಗುಣವಾಗಿ ಈ casteless and classless ಸೊಸೈಟಿಯನ್ನು ಸ್ಥಾಪನೆ ಮಾಡತಕ್ಕಂಥ ಮಾರ್ಗದಲ್ಲಿ ಅವರು ಮುಂದುವರಿಯುತ್ತಿದ್ದೇವೆ ಎಂದು ಹೇಳಿದ್ದಾರೆ. ಅಂಥ ಧ್ಯೇಯಗಳನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಈ ಮಾರ್ಗ ಸಾಧನೆಯ ಹಾದಿಯಲ್ಲೇನೋ ಕೆಲವು ಅನುಕೂಲವಾದ ಹೆಜ್ಜೆಗಳನ್ನು ನಮ್ಮ ಸರ್ಕಾರದವರು ಇಟ್ಟಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ನಾನು ನಿರೀಕ್ಷಣೆ ಮಾಡಿದ್ದಷ್ಟು ಕೆಲಸ ಈ ಬಾಬಿನಲ್ಲೂ ಸಹ ನಡೆದಿರುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಇಂಥ ಸಂದರ್ಭದಲ್ಲಿ ನಾವು ಹೆಮ್ಮೆಪಡತಕ್ಕಂಥ ಒಂದು ವಿಚಾರವೇನೆಂದರೆ ನಮ್ಮ ಸರ್ಕಾರದವರು ಈಗಾಗಲೇ ದೇಶದಲ್ಲಿ 14 ಜನರಲ್ ಹಾಸ್ಟಲುಗಳನ್ನು ತೆರೆದಿದ್ದಾರೆ ಎನ್ನುವುದೇ ಆಗಿದೆ. ಇದು ನಮ್ಮೆಲ್ಲರಿಗೂ ಬಹಳ ಸಂತೋಷದ ವಿಚಾರ. ದೇಶದಲ್ಲಿ ಎಲ್ಲಿಯೂ ಈ ಕಮ್ಯೂನಲ್ ಹಾಸ್ಟಲುಗಳೇ ಇರಬಾರದು. ಆದರೆ ಈಗ ಎಲ್ಲೆಲ್ಲಿ ಈ ಕಮ್ಯೂನಲ್ ಹಾಸ್ಟಲ್‌ಗಳು ಇರುತ್ತವೆಯೋ ಅಂಥ ಹಾಸ್ಟಲುಗಳಿಗೆ ಸರ್ಕಾರದವರು ಗ್ರಾಂಟು ಇತ್ಯಾದಿ ಏನನ್ನಾದರೂ ಕೊಡುತ್ತಿದ್ದರೆ ಇನ್ನು ಮುಂದಕ್ಕೆ ಅಂಥ ಹಾಸ್ಟಲುಗಳು ಶೇಕಡ ಇಪ್ಪತ್ತರಷ್ಟು ಇತರ ಕೋಮಿನವರನ್ನು ಅದಕ್ಕೆ ಸೇರಿಸಿಕೊಳ್ಳದಿದ್ದ ಪಕ್ಷದಲ್ಲಿ ಅದಕ್ಕೆ ಸರ್ಕಾರದ ಸಹಾಯ ದೊರೆಯಲಾರದೆಂದು ಹುಕುಂ ಮಾಡಿದ್ದಾರೆಂದು ಕೇಳಿದೆನು. ಆದರೆ ನನ್ನ ಅಭಿಪ್ರಾಯದಲ್ಲಿ ಇದೂ ಕೂಡ ಸರಿಯಲ್ಲ. Casteless society ನಿರ್ಮಾಣ ಮಾಡಬೇಕಾದರೂ ಕೂಡ ಎಲ್ಲಿ ಮೂಲಭೂತವಾಗಿ ನಮ್ಮ ಮುಂದಿನ ಜನರು, ಮುಂದಿನ ದೇಶದ ಪ್ರಜೆಗಳು ತರಪೇತು ಹೊಂದಬೇಕೋ ಅಂಥ ಸ್ಥಳದಲ್ಲಿಯಾದರೂ ಕೂಡ ಈ ಜಾತೀಯ ಮನೋಭಾವ ಬೆಳೆಯದ ರೀತಿಯಲ್ಲಿ ನಾವು ಒಂದು ಸನ್ನಿವೇಶವನ್ನು ಕಲ್ಪಿಸದೇ ಹೋದ ಪಕ್ಷದಲ್ಲಿ ನಮ್ಮ ಗುರಿಯನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ಜನರಲ್ ಹಾಸ್ಟೆಲುಗಳನ್ನು ಹೆಚ್ಚು ಮಾಡಬೇಕು. ಕಮ್ಯೂನಲ್ ಹಾಸ್ಟಲು ಯಾವುದೇ ಆಗಲೀ ಅದಕ್ಕೆ ಸರ್ಕಾರದಿಂದ ಯಾವ ವಿಧದಲ್ಲೂ ಕೂಡ ಸಹಾಯ ದೊರೆಯಬಾರದು ಎಂದು ನಾನು ಖಚಿತವಾಗಿ ಅಭಿಪ್ರಾಯವುಳ್ಳವನಾಗಿದ್ದೇನೆ.

ಸ್ವಾಮಿ, ನಮ್ಮ ದೇಶದಲ್ಲಿ ಈ ನಿರುದ್ಯೋಗ ಸಮಸ್ಯೆಯನ್ನು ಆಗಿಂದಾಗ್ಗೆ ಪ್ರಸ್ತಾಪ ಮಾಡುತ್ತಾ ಇದ್ದೇವೆ. ನಿರುದ್ಯೋಗ ಹೆಚ್ಚುತ್ತಾ ಇದೆ ಎಂಬುದಾಗಿ ಅನೇಕರು ಅಭಿಪ್ರಾಯಪಟ್ಟರು. ಈಗಿನ ವಿದ್ಯಾಭ್ಯಾಸ ಪದ್ಧತಿಗೂ ಈ ನಿರುದ್ಯೋಗ ಸಮಸ್ಯೆಗೂ ಒಂದು ವಿಧವಾದ ನಿಕಟ ಸಂಬಂಧವಿದೆ. ಹೇಗೆ ಸಂಬಂಧವಿದೆ ಎಂದರೆ, ನಮ್ಮ ದೇಶದಲ್ಲಿ ಬಹುಭಾಗ ನಿರುದ್ಯೋಗ ಸಮಸ್ಯೆಯಿಂದ ಒದ್ದಾಡುತ್ತಾ ಇರತಕ್ಕ ಜನರೆಲ್ಲರೂ ಕೂಡ ವಿದ್ಯಾವಂತರು. ಯಾರು ಎಸ್.ಎಸ್.ಎಲ್.ಸಿ. ಪರೀಕ್ಷೆ ಪಾಸ್ ಮಾಡಿರುತ್ತಾರೆಯೋ ಅಥವಾ ಇನ್ನೂ ಹೆಚ್ಚಿನ ಮಟ್ಟದ ವಿದ್ಯಾಭ್ಯಾಸವನ್ನು ಪಡೆದಿರುತ್ತಾರೆಯೋ ಅವರೆಲ್ಲರೂ ಕೂಡ ತಮಗೆ ಯಾವುದೊಂದು ಕೆಲಸವೂ ದೊರೆಯಲಿಲ್ಲವಲ್ಲ ಎಂದು ಸದಾ ಅಲೆಯುತ್ತಿರುವುದು ಈ ನಿರುದ್ಯೋಗ ಸಮಸ್ಯೆಯ ಒಂದು ಮುಖ. ನನ್ನ ಅಭಿಪ್ರಾಯದಲ್ಲಿ ರೂಢಮೂಲವಾಗಿ ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಪ್ರತಿಯೊಬ್ಬ ಮನುಷ್ಯನೂ ಕೂಡ ಯಾವುದಾದರೂ ಒಂದೇ ಒಂದು ಕಸಬನ್ನು ಮಾಡುವುದಕ್ಕೆ ಆತನಿಗೆ ಅವಕಾಶವಿರಬೇಕು ಎನ್ನುವ ರೀತಿಯಲ್ಲಿ ಒಂದು ಕಾನೂನು ಮಾಡಿದರೆ ಒಳ್ಳೆಯದೋ ಏನೋ ಎಂದು ನಾನು ಯೋಚಿಸುತ್ತೇನೆ. ಅದು ಹೇಗೆಂದರೆ ಒಬ್ಬ ಮನುಷ್ಯನಿಗೆ ಜಮೀನಿದ್ದರೂ ಕೂಡ ಆ ಮನುಷ್ಯ ವಿದ್ಯಾವಂತನಾದ ಕೂಡಲೇ ತನ್ನ ವ್ಯವಸಾಯದ ಕಸಬನ್ನು ಬಿಟ್ಟು ಬೇರೆ ಕೆಲಸದಲ್ಲಿ ತೊಡಗಿದ್ದರೆ ಅಂಥವನ ಜಮೀನನ್ನು ಕಸಿದುಕೊಳ್ಳಬೇಕು ಎಂದು ನನ್ನ ವಾದ. ಇದೇ ರೀತಿ ವ್ಯವಸಾಯವಲ್ಲದೆ ಇನ್ನಾವುದಾದರೂ ಬೇರೊಂದು ಕಸಬನ್ನು ಮಾಡತಕ್ಕ ಮನುಷ್ಯನಿಗೆ ಒಂದು ಎಕರೆಯಷ್ಟು ಜಮೀನೂ ಕೂಡ ಇರಬಾರದು. ಹೀಗೆ ಯಾವ ಒಬ್ಬ ಮನುಷ್ಯನಿಗೇ ಆಗಲಿ ಒಂದೇ ಒಂದು ಕಸಬು ಇರಬೇಕೇ ವಿನಾ ಆತನು ಎಲ್ಲ ಕಸಬಿನಲ್ಲೂ ಕೈಹಾಕುವುದಕ್ಕೆ ಅವಕಾಶವಿರಬಾರದು. ಹಾಲಿ ಪರಿಸ್ಥಿತಿ ಹೇಗಿದೆಯೆಂದರೆ ಯಾವ ವಿಧವಾದ ಕಸಬೂ ಇಲ್ಲದೆ ನರಳುತ್ತಿರುವ ಜನ ಒಂದು ಕಡೆ, ಎಲ್ಲಾ ಕಸುಬಿನಲ್ಲೂ ಪ್ರವೇಶಿಸಿ ಎಲ್ಲಾ ಫಾಯ್ದೆಯನ್ನು ಪಡೆಯುತ್ತಿರುವ ಜನ ಇನ್ನೊಂದು ಕಡೆ ಇರುವುದನ್ನು ನಾವು ಇಂದು ನೋಡುತ್ತಾ ಇದ್ದೇವೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಕೆಲವರಿಗೆ ರಾಜಕೀಯವೇ ಒಂದು ಕೆಲಸವಾಗಿದೆಯಲ್ಲಾ, ಅಂಥವರ ವಿಷಯ ಏನು ಹೇಳುತ್ತೀರಿ !

ಶ್ರೀ ಡಿ. ದೇವರಾಜ ಅರಸ್.—ನಮ್ಮ ದೇಶದಲ್ಲಿ ಈ ರಾಜಕೀಯ ಎನ್ನುವುದನ್ನು ಇನ್ನೂ ಒಂದು ಸಂಪೂರ್ಣವಾದ ಪ್ರೊಫೆಷನ್ ಆಗಿ ಮಾಡಿಕೊಂಡಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಶ್ರೀ ಸೋಲೂರು ಸಿದ್ದಪ್ಪನವರು ಹೇಳುವ ಹಾಗೆ ರಾಜಕೀಯ ಒಂದು ಪ್ರೊಫೆಷನ್ ಆಗಿದೆ. ಅಲ್ಲಿರತಕ್ಕ ವಾತಾವರಣ ಇಲ್ಲಿ ಇಲ್ಲ.

ಸಂಸ್ಕೃತಿ ಪ್ರಚಾರ ಮತ್ತು ವಿದ್ಯಾಭ್ಯಾಸದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಹೇಳಬೇಕಾಗಿರುವುದೇನೆಂದರೆ ಈಗತಾನೆ ಕೆಲವು ದಿವಸಗಳ ಹಿಂದೆ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಪ್ರೈಮರಿ ಅಥವಾ ಮಿಡ್ಲ್ ಸ್ಕೂಲುಗಳನ್ನು ಕಟ್ಟಿಸಬೇಕಾದರೆ ಇನ್ನು ಮುಂದೆ ಸಂಪೂರ್ಣವಾಗಿ ಸರ್ಕಾರದವರೇ ದುಡ್ಡು ಹಾಕುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಎಲ್ಲಿ ಜನರು ತಾವಾಗಿಯೇ ಮುಂದೆ ಬರುತ್ತಾರೆಯೋ ಅವರಿಗೆ ಪ್ರೈಮರಿ ಸ್ಕೂಲ್ ಕಟ್ಟಡಕ್ಕೆ 500

(ಶ್ರೀ ಡಿ. ದೇವರಾಜ ಅರಸ್).

ರೂಪಾಯಿಗಳ ಸಹಾಯ ದ್ರವ್ಯ ಕೊಡುತ್ತೇವೆ ಎಂದು ಹೇಳುತ್ತಾರೆ. ಸರ್ಕಾರದವರು ಅವುಗಳನ್ನು ಯಾವರೀತಿ ಕಟ್ಟಿಸಬೇಕೆಂಬುದಕ್ಕೆ ಸ್ಪೆಸಿಫಿಕೇಷನ್ ಹಾಕಿದ್ದಾರೆ. ಏನೆಂದರೆ ಒಂಬತ್ತು ಇಂಚಿನ ಇಟ್ಟಿಗೆ ಗೋಡೆ ಹಾಕಬೇಕು ಮತ್ತು ಮೇಲ್‌ಚ್ಛಾವಣಿಗೆ ಆಸ್‌ಬೆಸ್ಟಾಸ್ ಷೀಟು ಹಾಕಬೇಕು. ಇದು ಬಹಳ ಸುಲಭವಾಗಿ ಆಗುತ್ತದೆ, ನಾವು 500 ರೂಪಾಯಿ ಕೊಡುತ್ತೇವೆ ಎಂದು ಹೇಳುತ್ತಾರೆ. ಬಹುಶಃ ಒಟ್ಟು ಅಂದಾಜು ಸಾವಿರದ ಐನೂರು ಅಥವಾ ಎಂಟುನೂರು ಆಗುತ್ತದೆ. ಸರಿಯಾಗಿ ಜ್ಞಾಪಕವಿಲ್ಲ.

ಅಧ್ಯಕ್ಷರು.—ಒಂದು ರೂಮಿಗೆ ಐನೂರು ರೂಪಾಯಿ ಆಗುತ್ತದೆ.

Sri D. DEVARAJ URS.—Total cost of the room comes to nearly Rs. 1,200 or 1,500, I do not know exactly. ಈ ರೂಮಿನ ಚೌಕಟ್ಟು ಎಷ್ಟು ಎಂದರೆ 15-20 ಅಡಿ. ಈ ರೀತಿ ಅನೇಕ ಕಡೆ ಜನರಿಗೆ ಹಿಡಿಸುತ್ತಾ ಇಲ್ಲ. ಕಾರಣ ಇಷ್ಟೆ. ಒಂಬತ್ತು ಇಂಚಿನ ಗೋಡೆ ಹಾಕಿದರೆ ಅನೇಕರು ಅಭಿಪ್ರಾಯಪಟ್ಟರು ಬಲವಾಗಿ ಒಂದು ಸಾರಿ ಒದ್ದರೆ ಬೀಳುತ್ತದೆ ಎಂದು, ಇದು ಒಂದನೆಯದು. ಎರಡನೆಯದು ಮೇಲ್‌ಚಾವಣಿಗೆ ಆಸ್‌ಬೆಸ್ಟಾಸ್‌ಷೀಟು ಹಾಕುತ್ತಾರೆ. ಮಕ್ಕಳು ಆಟವಾಡುತ್ತಾ ಕಲ್ಲು ಹೊಡೆದರೆ ಅದರಲ್ಲಿ ತೂತು ಬೀಳುತ್ತದೆ. ಅದು ಸುಮಾರು 10'x3' ಇರುತ್ತದೆ, ಎಲ್ಲೋ ಒಂದುಕಡೆ ಮೂರು ಕಾಸಿನಷ್ಟಗಲ ತೂತಾದರೆ ಇಡೀ 10'x3' ಇರತಕ್ಕ ಷೀಟನ್ನು ಬದಲಾಯಿಸಬೇಕಾದ ಪ್ರಮೇಯ ಬರುತ್ತದೆ. ಇದು ಜನರಿಗೆ ಹಿಡಿಸುತ್ತಾ ಇಲ್ಲ. ಇದಕ್ಕೆ ನನ್ನ ಸಲಹೆ ಏನೆಂದರೆ ಸ್ಕೂಲು ಕಟ್ಟಡದ ಅವಶ್ಯಕತೆ ನಮಗೆ ದೇಶಾದ್ಯಂತ ಇದೆ. ಸರ್ಕಾರದವರು ಕರ್ಪೊರೇಷನಲ್ಲಾಗಿ ಒಂದು ಚೌಕಟ್ಟು ಹಾಕಿಕೊಂಡು ಬಂದಿರುತ್ತಾರೆ. ಪಿ.ಡಬ್ಲ್ಯು.ಡಿ. ನವರು 15'x20' ಸ್ಕೂಲು ಕಟ್ಟಡ ಕಟ್ಟಬೇಕಾದರೆ ಮಂಗಳೂರು ಹೆಂಚಿನ ಮೇಲ್‌ಚಾವಣಿಗೆ 2½—3 ಸಾವಿರ ಅಂದಾಜು ಹಾಕಿರುತ್ತಾರೆ. ಅದು ನಮಗೆ ಬಹಳ ದುಬಾರಿ ಆಗುತ್ತದೆ. 500 ರೂಪಾಯಿ ಸಹಾಯ ಕೊಡುತ್ತೇವೆ ಎಂದು ತಾವು ಹೇಳುತ್ತೀರಿ. ಹಾಗಿರುವಾಗ, ಮತ್ತೆ ಕಟ್ಟಡ ಕಟ್ಟುವುದಕ್ಕೆ ಊರಿನವರಮೇಲೆ ಜವಾಬ್ದಾರಿ ಹೊರಿಸಿರುವ ಸಂದರ್ಭದಲ್ಲಿ, ನಿಮ್ಮ ಸ್ಪೆಸಿಫಿಕೇಷನ್ ಏಕೆ ಹಾಕುತ್ತೀರಿ! ದೇವರು ಕೊಟ್ಟ ಮಣ್ಣು ಇದೆ. ಅನೇಕರು ಮಣ್ಣು ಗೋಡೆ ಹಾಕಿಕೊಂಡು ವಾಸಮಾಡುತ್ತಿಲ್ಲವೇ? 50 100-200 ವರ್ಷಗಳಿಂದ ಇರುವ ಆ ಮಣ್ಣಿನ ಗೋಡೆಗಳು ಏನಾಗಿವೆ? ಅದನ್ನು ಯೋಚನೆಮಾಡಿ ಅದಕ್ಕೆ ಏಕೆ ಪ್ರೋತ್ಸಾಹ ಕೊಡಬಾರದು ಎಂದು ಕೇಳುತ್ತೇನೆ. ಅದಕ್ಕೆ ಅವಕಾಶ ಕೊಡಿ ಮತ್ತು ಮೇಲ್‌ಚಾವಣಿಗೆ ಹಳ್ಳಿಗಳಲ್ಲಿ ತಯಾರು ಮಾಡಿದ ನಾಡು ಹೆಂಚುಗಳನ್ನು ಹಾಕುವುದಕ್ಕೆ ಏಕೆ ಅವಕಾಶ ಕೊಡಬಾರದು? ಅದಕ್ಕೆ ಮೈದಾನ ಪ್ರದೇಶದಲ್ಲಿ ಗಳುಗಳ ಅಭಾವವಿದೆ ಎಂಬ ಯೋಚನೆ ಮಾಡಬಹುದು. ನನ್ನ ಸಲಹೆ ಏನೆಂದರೆ, ನಮ್ಮ ಮೈಸೂರು ದೇಶದಲ್ಲಿ! ಫಾರೆಸ್ಟ್ ಪ್ರದೇಶ ಸುಮಾರು 1/5 ಭಾಗ ಇದೆ ಎಂದು ಇಟ್ಟುಕೊಳ್ಳೋಣ. ಕಾಡಿನಲ್ಲಿರತಕ್ಕ ಗಳುಗಳೆಲ್ಲವನ್ನೂ ಸಂಪೂರ್ಣವಾಗಿ ಉಪಯೋಗಿಸುತ್ತಾ ಇಲ್ಲ. ವರ್ಷೇ ವರ್ಷೇ ಬೇಸಿಗೆ ಕಾಲದಲ್ಲಿ ಬೆಂಕಿಬಿದ್ದು ಎಷ್ಟೋ ಗಳುಗಳು ನಾಶವಾಗುತ್ತಾ ಇವೆ. ನಮ್ಮ ಫಾರೆಸ್ಟ್ ಇಲಾಖೆಯವರಿಗೆ ನಾನು ಒಂದು ಸಲಹೆ ಮಾಡುತ್ತೇನೆ. ಈ ಗಳುಗಳನ್ನು ಎಲ್ಲಾ ಕಡೆಯಲ್ಲೂ ಹಂಚಿಕೆಯಾಗುವ ವ್ಯವಸ್ಥೆಯನ್ನು ಮಾಡಬೇಕು. ಅದಕ್ಕೆ ಆಗತಕ್ಕಮಜೂರಿ ಮುಂತಾದುವುಗಳನ್ನು ವಸೂಲು ಮಾಡಬಹುದು. ನಮ್ಮ ಮಲೆನಾಡು ಪ್ರದೇಶದಲ್ಲಿ ಮನೆ ಕಟ್ಟುವ ಅನೇಕ ಜನರು ಕಾಡು ಮರಗಳನ್ನು ಪಯೋಗಿಸಿ ಮನೆಗಳನ್ನು ಕಟ್ಟುತ್ತಾರೆ. ಮೈದಾನ ಪ್ರದೇಶದಲ್ಲಿ ಮರಗಳ ಅಭಾವ, ಗಳುಗಳ ಅಭಾವ ಇರುವುದರಿಂದ, ಅನೇಕ ಮನೆಗಳನ್ನು ಒಂದುಚೂರು ಮರವನ್ನು ಹಾಕದೇ ಮಣ್ಣು, ಕಲ್ಲು ಬಂಡೆಗಳನ್ನು ಪಯೋಗಿಸಿ ಕಟ್ಟಿರತಕ್ಕ ಸನ್ನಿವೇಶವನ್ನು ಕೂಡ ತಾವು ನೋಡಬಹುದು. ಆದ್ದರಿಂದ ಯಾವ ವಸ್ತು ಸುಲಭವಾಗಿ ಒದಗುತ್ತದೆಯೋ ಅದನ್ನು ಸರ್ಕಾರದವರು ಒದಗಿಸುವುದಕ್ಕೆ ತಕ್ಕ ಏರ್ಪಾಡು ಮಾಡಬಹುದು. ಹೀಗೆ ತಮ್ಮ ನೀತಿಯನ್ನು ಬದಲಾವಣೆ ಮಾಡಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

ಸಂಸ್ಕೃತಿ ಪ್ರಚಾರದ ವಿಷಯದಲ್ಲಿ ಹೇಳುವುದಾದರೆ ಈ ಒಂದು ಯೋಜನೆಯನ್ನು ಸರ್ಕಾರದವರು ಘನ ಉದ್ದೇಶದಿಂದಲೇ ಹಾಕಿ ಇದಕ್ಕೆ ಹಣವನ್ನು ಖರ್ಚು ಮಾಡುತ್ತಾ ಇದ್ದೀರಿ ಎಂದು ನಾವು ಇಟ್ಟುಕೊಳ್ಳೋಣ. ಕಾರ್ಯತಃ ಇದು ಹೇಗೆ ನಡೆಯುತ್ತಾ ಇದೆ ಎಂಬುದನ್ನು ನಾವು ಸ್ವಲ್ಪ ಕೂಲಂಕಷವಾಗಿ ವಿಚಾರ ಮಾಡುತ್ತಾ ಹೋದರೆ, ಇಷ್ಟೊಂದು ಹಣವನ್ನು ಇದಕ್ಕೆ ವ್ಯಯಮಾಡುವುದರಿಂದ ನಿರೀಕ್ಷಣೆ ಮಾಡತಕ್ಕ ಗೊತ್ತಾದ ಒಂದು ಪ್ರತಿಫಲ ಬರದೇ, ಈ ಖರ್ಚು ಬಹಳ ತಪ್ಪಾದೀತೋ ಏನೋ ಎಂದು ನಾನು ಭಾವಿಸುತ್ತೇನೆ. ಈಗ ಈ ಪ್ರಚಾರ ಹೇಗೆ ನಡೆಯುತ್ತಾ ಇದೆ ಎಂಬುದನ್ನು ತೆಗೆದುಕೊಂಡರ ಇದರಿಂದ ಏನೂ ಲಾಭವಿಲ್ಲ ಎಂದು ಅರ್ಥವಾಗುತ್ತದೆ. ಸರ್ಕಾರದವರು ಪ್ರಚಾರಕರ ಒಂದು ದೊಡ್ಡ ಪಟ್ಟಿ ಮಾಡಿಬಿಟ್ಟಿದ್ದಾರೆ. ಇಷ್ಟೇ ಜನರು ಸಂಸ್ಕೃತಿ ಪ್ರಚಾರ ಮಾಡುವುದಕ್ಕೆ ಲಾಯಕ್ಕಾದವರು ಎಂದು ಒಂದು ಪಟ್ಟಿ ಇದೆ. ಜೊತೆಗೆ ಪ್ರತಿ ತಾಲ್ಲೂಕಿನಲ್ಲೂ ಕೂಡ ತಿಂಗಳಿಗೆ ಮೂರು ಪ್ರಚಾರ ಸಭೆಗಳಿಗೆ ಕಡಿಮೆ ಇಲ್ಲದಂತೆ ಮಾಡಬೇಕೆಂದು ಅಮಲ್ದಾರರುಗಳಿಗೆ ಸರ್ಕ್ಯುಲರ್ ಕಳುಹಿಸಿದ್ದೀರಿ. ಅಮಲ್ದಾರರು ಮೂರು ಪ್ರಚಾರ ಸಭೆಗಳನ್ನು ಮಾಡಲೇಬೇಕು. ಸರ್ಕಾರದ ಆಜ್ಞೆಗೆ ವಿರುದ್ಧವಾಗಿ ಹೋದರೆ ಡೆಪ್ಯುಟಿ ಕಮೀಷನರವರ ಗಮನಕ್ಕೆ ಬಂದು ಅವರು ಏನುಮಾಡುತ್ತಾರೋ ಎಂಬ ಭಯ. ಇದರಿಂದಾಗಿ ಅವರಿಗೆ ಏನೇ ಕೆಲಸ ಕಾರ್ಯಗಳಿದ್ದರೂ ಬಿಟ್ಟು ಈ ಸಭೆ ನಡೆಸುವುದಕ್ಕೆ ಏರ್ಪಾಡು ಮಾಡುತ್ತಾರೆ. ಈ ಸಭೆ ನಡೆಸುವುದಕ್ಕೆ ಲಿಸ್ಟ್‌ನಲ್ಲಿರತಕ್ಕ ಯಾರೋ ಒಬ್ಬರನ್ನು ಕರೆಸುತ್ತಾರೆ. ನಾನು ಅನೇಕ ಸಭೆಗಳಲ್ಲಿ ನೋಡಿದ್ದೇನೆ, ಸಂಸ್ಕೃತಿ ಪ್ರಚಾರದ ಅಂಗವಾಗಿ ಭಾರತ ಪಠಣ, ಕಾವ್ಯವಾಚನ ಅಥವಾ ಇನ್ನಾವುದಾದರೂ ಒಂದು ಭಾಷಣ ನಡೆಯುತ್ತದೆ. ನಮ್ಮ ಉದ್ದೇಶ ಏನೆಂದರೆ ನಮ್ಮಲ್ಲಿ ಸಂಸ್ಕೃತಿ ಎಂದರೆ ನಾಗರಿಕತೆ ಬೆಳೆಯಬೇಕು ಅದಕ್ಕೆ ನಮ್ಮ ಜನರಲ್ಲಿ ಪ್ರಚಾರವಾಗಬೇಕು. ಯಾವತರಹ ನಾಗರಿಕತೆ ಬೆಳೆಸಬೇಕೆಂದರೆ, ಹಿಂದಿನ ಕಾಲದಿಂದ ಬಂದ ನಾಗರಿಕತೆಯನ್ನು ಬೆಳೆಸಬೇಕೇ ಅಥವಾ ಈಗ ಸಮಾಜವಾದ ಎಂದು ಏನು ಹೇಳುತ್ತೇವೆ, ಮೇಲು, ಕೀಳು ಎಂಬ ಭಾವನೆ ಹೋಗಬೇಕು, ನಮ್ಮಲ್ಲಿರತಕ್ಕ ಜಾತಿ ಭಾವನೆ ಹೋಗಬೇಕು, ನಮ್ಮಲ್ಲಿರತಕ್ಕ ಐಶ್ವರ್ಯವಂತರಿಗೂ, ಬಡವರಿಗೂ ಇರತಕ್ಕ ತಾರತಮ್ಯ ಹೋಗಬೇಕು ಎಂಬ ಧ್ಯೇಯವನ್ನು ರಾಜ್ಯಾಂಗದಲ್ಲೂ ಕೂಡ ಅಳವಡಿಸಿ ಸರ್ಕಾರ ನಡೆಸಿಕೊಂಡು ಹೋಗಬೇಕೆಂದು ಏನು ಹೇಳುತ್ತಾ ಇದ್ದೇವೋ, ಆ ಧ್ಯೇಯಗಳ ಸಾಧನೆಗೆ

ಸಂಸ್ಕೃತಿ ಪ್ರಚಾರ ನಡೆಸಬೇಕೇ ಅಥವಾ ಹಿಂದೆ ಇದ್ದ ಹಾಗೆ ಪುರಾಣ, ಇತಿಹಾಸದ ಕಥೆ ತೆಗೆದುಕೊಂಡು, ಅದರಲ್ಲಿ ಆಳಿಗೂ, ಅರಸನಿಗೂ ಇರಬೇಕಾದ ಒಂದು ಸಂಬಂಧದ ವಿಚಾರದಲ್ಲಿ ಒಂದು ದೊಡ್ಡ ಪ್ರಸ್ತಾಪ ಮಾಡಬೇಕೇ ಅದನ್ನೆಲ್ಲಾ ಪ್ರಸ್ತಾಪ ಮಾಡುವುದು ನಮಗೆ ಇಷ್ಟವೇ? ಎಂದರೆ ನಮ್ಮ ಅಭಿಪ್ರಾಯ ಅದಲ್ಲ. ನಮ್ಮ ಅಭಿಪ್ರಾಯದಲ್ಲಿ ಸಮಾಜವಾದವನ್ನು ಬೆಳೆಸಬೇಕು ಎನ್ನುವುದೇ ಹೊರತು ಅರಸ ಹೇಗಿರಬೇಕು, ಆಳು ಹೇಗಿರಬೇಕು, ಐಶ್ವರ್ಯವಂತ ಹೇಗಿರಬೇಕು, ಬಡವ ಹೇಗಿರಬೇಕು ಎಂದಲ್ಲ. ಐಶ್ವರ್ಯವಂತರ ವಿಚಾರ ಹೋಗಲಿ—every Indian wants to be a wealthy fellow. ಈ ರೀತಿ ಪ್ರಚಾರದಿಂದ ಆ ಹಳೆಯ ಮನೋಭಾವವೇ ಮುಂದುವರಿದ ಹಾಗಾಗುತ್ತದೆ. ಅಥವಾ ಬಡವನಾಗಿರತಕ್ಕವನಿಗೆ 'ಬಡವನಾಗಿರತಕ್ಕದ್ದೇ ನಿನ್ನ ಪೂರ್ವ ಜನ್ಮದ ಪುಣ್ಯ. ನೀನು ಹಿಂದೆ ಮಾಡಿದ ಕರ್ಮ' ಎಂದು ಹೇಳುತ್ತಾ ಹೋದರೆ ಜನತೆಯಲ್ಲಿ ಬಡತನ ಹೋಗಲಾಡಿಸುವುದಕ್ಕೆ ಸಾಧ್ಯವಿಲ್ಲ. 'ಇದೆಲ್ಲಾ ಕರ್ಮ ಕಣಯ್ಯ, ಬಡವನಾಗಿದ್ದೀ, ನಿನ್ನ ಕರ್ಮ ಆದ್ದರಿಂದ ಬಡತನಕ್ಕೆ ಔಷಧಿ ಕೊಡುವುದಕ್ಕಾಗುವುದಿಲ್ಲ' ಎಂದು ಪ್ರಚಾರ ಮಾಡಿದ ಹಾಗಾಗುತ್ತದೆ. ವಾಸ್ತವಾಂಶ ಹಾಗಲ್ಲ. ನಾವೆಲ್ಲಾ ತಿಳಿದಿರುವುದೇನೆಂದರೆ ಸಾಮೂಹಿಕವಾಗಿ ಯೋಚಿಸಿದ್ದೇ ಆದರೆ, ಸಾಮೂಹಿಕವಾಗಿ ಕೆಲಸ ಮಾಡಿದ್ದೇ ಆದರೆ, ಸಮಾಜದಲ್ಲಿ ಉತ್ಪನ್ನವಾದ ಪದಾರ್ಥಗಳನ್ನೂ ಐಶ್ವರ್ಯವನ್ನೂ ಮತ್ತು ಉತ್ಪನ್ನ ಮಾಡತಕ್ಕ ಮೂಲಗಳನ್ನೂ (Means of Production) ಎಲ್ಲರೂ ಸಮಾನವಾಗಿ ಹಂಚಿಕೊಳ್ಳುವ ಒಂದು ವ್ಯವಸ್ಥೆಯನ್ನು ಮಾಡಿದ್ದೇ ಆದರೆ ನಮ್ಮ ಬಡತನವನ್ನು ಹೋಗಲಾಡಿಸುವುದಕ್ಕೆ ಸಾಧ್ಯ ಎಂಬ ಒಂದು ಸಿದ್ಧಾಂತವನ್ನು ಇಟ್ಟುಕೊಂಡಿದ್ದೇವೆ. ಆದರೆ ಈ ಸಂಸ್ಕೃತಿ ಪ್ರಚಾರದಲ್ಲಿ ಅದನ್ನು ಹೇಳುತ್ತಾ ಇಲ್ಲ.

2 P.M.

ಇದಕ್ಕಾಗಿ ಬಹಳ ಹಣ ವ್ಯಯವಾಗುತ್ತಿದೆ. ಇದಕ್ಕೆ ನನ್ನ ಸಲಹೆ ಏನೆಂದರೆ, ಇದನ್ನು ಮುಂದುವರಿಸಬೇಕಾದರೆ ಈ ರೀತಿಯಾಗಿ ಒಂದು risk ಮಾಡಿ ಯಾವುದೋ ಒಂದು ಅಡಗೂಲಜ್ಜಿ ಕತೆ ಹೇಳುವ, ದಾಸರ ಪುರಾಣ ಹೇಳುವ ಜನರನ್ನೆಲ್ಲ ಸಂಸ್ಕೃತಿ ಪ್ರಚಾರಕ್ಕೆ ಕಳುಹಿಸಿದ್ದೇ ಆದರೆ ನಮ್ಮ ಉದ್ದೇಶ ಖಂಡಿತವಾಗಿಯೂ ಸಾಧನೆಯಾಗುವುದಿಲ್ಲ. ಅದಕ್ಕೋಸ್ಕರವಾಗಿ ವಿಷಯವನ್ನು ತಿಳಿದುಕೊಂಡು ಪುರಾಣ ಇತಿಹಾಸಗಳನ್ನು ಸರಿಯಾಗಿ interpret ಮಾಡತಕ್ಕ ಜನರಿದ್ದರೆ ಅಂಥವರನ್ನು ನಾವು ಈ ಸಂಸ್ಕೃತಿ ಪ್ರಚಾರಕ್ಕೆ ಕಳುಹಿಸಿದರೆ ಸಾಧ್ಯ. ಅದಿಲ್ಲದಿದ್ದರೆ ಇದನ್ನು ಕ್ಲೋಸ್ ಮಾಡಿದರೂ ತಪ್ಪಾಗುವುದಿಲ್ಲವೆಂದು ನನ್ನ ಭಾವನೆ. ಇಷ್ಟು ಮಾತ್ರ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ಈ ಆಯವ್ಯಯದ ಸಂಬಂಧವಾಗಿ ನಾಲ್ಕು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ಮೊದಲು ತಮ್ಮನ್ನು ವಂದಿಸುತ್ತೇನೆ. ಈ ಆಯವ್ಯಯದ ವಿಚಾರದಲ್ಲಿ ಮಾತನಾಡುವುದಕ್ಕೆ ಮೊದಲು ಈ ಅಧಿವೇಶನದ ಕಾರ್ಯಕ್ರಮದ ವಿಚಾರದಲ್ಲಿ ಒಂದೆರಡು ಮಾತು ಹೇಳುವುದು ಅಗತ್ಯವೆಂದು ಕಾಣುತ್ತದೆ.

ನಾವೆಲ್ಲ ಊರಿನಲ್ಲಿದ್ದ ಕಾಲದಲ್ಲಿ ನಮಗೆ ಒಂದು ಕಾರ್ಯಕ್ರಮದ ಪಟ್ಟಿ ಬಂತು. ಆ ಪ್ರಕಾರ ಇಲ್ಲಿಂದ ಇಲ್ಲಿಯವರೆಗೆ ಇಂಥಿಂಥ ಕೆಲಸ ನಡೆಯುತ್ತದೆ ಎಂದು ಕಾರ್ಯಕ್ರಮ ಹಾಕಿ ಕಳುಹಿಸಿದ್ದರು. ಅದರಲ್ಲಿ ಒಂದು ಮುಖ್ಯವಾದ ಅಂಶವೆಂದರೆ ಈ ವರ್ಷದ ಅಂತ್ಯದಲ್ಲಿ ಬಡ್ಜೆಟ್ಟಿನ ಮೇಲೆ ಸಾಮಾನ್ಯ ಚರ್ಚೆ ಮಾತ್ರ ಮಾಡಿ, 31ನೆ ತಾರೀಖಿಗೆ Vote on account ಮೇಲೆ ಎಂದರೆ ಮುಂದೆ ಸಮಜಾಯಿಷಿ ಕೊಡುವುದಾಗಿ ಹೇಳಿ ಆಯವ್ಯಯವನ್ನು ಮಂಜೂರು ಮಾಡಿಸಿಕೊಂಡು, ಒಂದೊಂದು ಇಲಾಖೆಗೂ ಬೇಕಾದ ಮೊಬಲಗನ್ನು (ಡಿಮ್ಯಾಂಡ್‌ಗಳನ್ನು) ನಿಧಾನವಾಗಿ ವಿವರವಾಗಿ ಮಾರ್ಚಿ ತಿಂಗಳು ಮುಗಿದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವಿತ್ತು. ಈ ಪದ್ಧತಿ ಪಾರ್ಲಿಮೆಂಟ್‌ನಲ್ಲಿ ಆಚರಣೆಯಲ್ಲಿ ಇದೆಯೆಂದೂ ಇಲ್ಲಿಯೂ ಹಿಂದೆಯೇ ಹೀಗೆ ಆಗಬೇಕಾಗಿತ್ತೆಂದೂ ಈ ಸಾರಿ ಅದನ್ನು ಆಚರಣೆಗೆ ತರಲು ಪ್ರಯತ್ನ ಮಾಡುವುದು ಒಳ್ಳೆಯದು ಎಂದೂ ಅನೇಕರು ಭಾವಿಸಿದ್ದರು. ಆ ಮೇಲೆ ಇಲ್ಲಿಗೆ ಬಂದ ಮೇಲೆ ಈಗಾಗಲೇ ಮೂರು ನಾಲ್ಕು ಕಾರ್ಯಕ್ರಮಗಳ ಪಟ್ಟಿಗಳು ನಮ್ಮ ಮುಂದೆ ಬಂದು, ಕಡೆಗೆ ಎಲ್ಲಿಗೆ ಬಂತು ಎಂದರೆ ಭಾನುವಾರವೂ ಕುಳಿತುಕೊಳ್ಳಬೇಕು ಎಂದಾಯಿತು. ದಿನ ಒಂದಕ್ಕೆ ಹದಿನೈದು ರೂಪಾಯಿ ಕೊಡುತ್ತಾರಲ್ಲ, ಭಾನುವಾರವೂ ಕುಳಿತುಕೊಳ್ಳೋಣವೆಂದರೆ 5 ಘಂಟೆಯ ಮೇಲೂ ಕುಳಿತುಕೊಳ್ಳಬೇಕು ಎಂದರು. 5 ಘಂಟೆಯ ಮೇಲೆ ಕುಳಿತುಕೊಂಡು ಯಾವುದೋ ಒಂದು ಬಿಲ್ಲು ಬರುತ್ತದೆ ಅದರ ಮೇಲೆ ನಾನು ಮಾತನಾಡಬೇಕು ಆ ದಿನ ಎಂದು ಓಡೋಡಿ ಬಂದರೆ ಇಲ್ಲಿ ಬಾಗಿಲು ಹಾಕಿತ್ತು. ಹೀಗೆ ಘಳಿಗೆಗೊಂದು ಘಂಟೆಗೊಂದು ಕಾರ್ಯಕ್ರಮವನ್ನು ನಿರ್ಧರಮಾಡಿ ನಮ್ಮ ಮುಂದೆ ಇಡುತ್ತಿರುವುದು ಈ ಸಭೆಯ ಅಥವಾ ಸದಸ್ಯರ ಸ್ಥಾನ ಮಾನಕ್ಕೆ ಕುಂದು ತಂದಂತಾಗುವುದೆಂದು ನಾನು ಭಾವಿಸುತ್ತೇನೆ. ಈ ರೀತಿ ಇದ್ದಕ್ಕಿದ್ದಹಾಗೆ ಕಾರ್ಯಕ್ರಮವನ್ನು ಬದಲಾಯಿಸುವುದರಿಂದ ನಮಗೆ ಏನು ತೊಂದರೆ ಎಂಬುದನ್ನು ಹೇಳಬೇಕು. ನಾವು ಮೊದಲು ಬಂದ ಕಾರ್ಯಕ್ರಮದ ಪಟ್ಟಿಯನ್ನು ನೋಡಿಕೊಂಡು ನಮ್ಮ ಕೆಲಸ ಕಾರ್ಯಗಳನ್ನು ಅದಕ್ಕೆ ಹೊಂದಿಸಿಕೊಂಡು ವ್ಯವಸ್ಥೆ ಮಾಡಿಕೊಂಡು ಬಂದಿರುತ್ತೇವೆ. ಶನಿವಾರ ಮಧ್ಯಾಹ್ನದ ಮೇಲೆ, ಭಾನುವಾರ ಪೂರ್ತಿ ಸೋಮವಾರ ಮಧ್ಯಾಹ್ನದ ವರೆಗೂ ಅವಕಾಶವಿರುತ್ತದೆ ಎಂದು ಸಾಮಾನ್ಯವಾಗಿ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿರುತ್ತೇವೆ ಮತ್ತು ಕಾರ್ಯಕ್ರಮದ ಪಟ್ಟಿಯಲ್ಲಿ ನಮೂದಿಸಿರುವಂತೆ ಇಲ್ಲಿ ಕುಳಿತುಕೊಂಡು ಕೆಲಸ ಮಾಡೋಣವೆಂದಿರುತ್ತೇವೆ. ಆದರೆ ಇದ್ದಕ್ಕಿದ್ದಹಾಗೆ ಕಾರ್ಯಕ್ರಮ ಬದಲಾಯಿಸಲು ಅಂಥ ಪ್ರಾಣ ಹೋಗತಕ್ಕ ವಿಚಾರವೇನಿದೆಯೋ ನಮಗೆ ಗೊತ್ತಾಗುವುದಿಲ್ಲ. ಪ್ರಾಯಶಃ ಅದಕ್ಕಿಂತ ಹೆಚ್ಚಾಗಿರಬಹುದೇನೋ! ಯಾಕೆ ಇಂತಹ ದಬಾದುಬೀ ಕೆಲಸ! ಈ ತಿಂಗಳು ಒಂದನೆ ತಾರೀಖಿನಿಂದ 11ನೆಯ ತಾರೀಖಿನ ವರೆಗೂ ವಿರಾಮ ಕೊಟ್ಟರು. ಯಾಕೆ ಹೀಗೆ ಮಾಡಬೇಕಾಗಿತ್ತು! ಅಷ್ಟು ದಿನಗಳು ಆಯವ್ಯಯದ ಪಟ್ಟಿಯನ್ನು ನಿಧಾನವಾಗಿ ಪರಿಶೀಲಿಸಬಹುದಾಗಿತ್ತು. ಹೀಗೆ ಮಾಡದೆ ಈಗ ಒಬ್ಬೊಬ್ಬರು 10 ನಿಮಿಷ ಮಾತನಾಡಿ, 15 ನಿಮಿಷ ಮಾತನಾಡಿ, ನಿಮ್ಮ ಕಾಲ ಪೂರೈಸಿತು ಭಾಷಣ ಬೇಗ ಮುಗಿಸಿ ಎಂದು ತಾವು ಅಪ್ಪಣೆ ಕೊಡಿಸುವುದೆಲ್ಲ ನಮಗೆ ಬಿಕ್ಕಟ್ಟಿನ ಪ್ರಸಂಗವೆನಿಸುತ್ತದೆ. ಸರ್ಕಾರದವರು ಆಯವ್ಯಯದ ಪಟ್ಟಿಯನ್ನು ತಯಾರು ಮಾಡದೆ ಇದ್ದರೆ, ಆರ್ಥಿಕ ಸಚಿವರಿಗೆ ಅವರ ಭಾಷಣ ಒದಗದೆ ಇದ್ದರೆ ಅದು ನಮ್ಮ ತಪ್ಪೇ! ಅಧಿವೇಶನಕ್ಕೆ ಬನ್ನಿ ಎಂದು ಕರೆಯುವುದು, ನಮಗಿರ

(ಶ್ರೀ ಹೆಚ್. ಕೆ. ವೀರಣ್ಣಗೌಡ.)

ತಕ್ಕ ಕೆಲಸಗಳನ್ನೆಲ್ಲ ಬಿಟ್ಟು ಇಲ್ಲಿ ಬಹಳ ಕೆಲಸ ನಡೆಯತ್ತದೆ ಎಂದು ನಾವು ಬರುವುದು, ಇದ್ದಕ್ಕಿದಂತೆ ನಾಳೆಯಿಂದ ಸಭೆಯಿಲ್ಲ ಎಲ್ಲರೂ ಊರಿಗೆ ಹೋಗಬಹುದೆಂದು ಹಿಂದಿನ ಸಾಯಂಕಾಲ 5 ಘಂಟೆಗೆ ಹೇಳುವುದು ಇದೆಲ್ಲ ನಗೆಗೀಡಾದ ಕಾರ್ಯವೆಂದು ನನಗನ್ನಿಸುತ್ತದೆ. ಇದನ್ನೆಲ್ಲ ನೋಡಿದರೆ ಸರ್ಕಾರದವರಿಗೆ, ಆಡಳಿತ ನಡೆಸುವವರಿಗೆ, ಅರ್ಹತೆ ಇಲ್ಲವೆನ್ನುವುದು ಚೆನ್ನಾಗಿ ಗೊತ್ತಾಗುತ್ತದೆ. ಇದನ್ನು ಬಹಳ ಮನಸ್ಸು ನೊಂದು ಹೇಳುತ್ತಿದ್ದೇನೆ. ನಮಗೆ ಅನೇಕ ಕಾರ್ಯಕ್ರಮಗಳಿರುತ್ತವೆ. ನಾವೆಲ್ಲರೂ ದೊಡ್ಡ ಲಕ್ಷಾಧಿಪತಿಗಳಲ್ಲದಿದ್ದರೂ, ದೇಶದ ಆಡಳಿತವನ್ನೆಲ್ಲ ಕೈಯಲ್ಲಿಟ್ಟುಕೊಂಡು ನಡೆಸುತ್ತಿರುವ ಮಂತ್ರಿಗಳಲ್ಲದೆ ಇದ್ದರೂ, ನಮ್ಮ ನಮ್ಮ ಮಟ್ಟಿಗೆ, ನಮ್ಮ ನಮ್ಮ ಕಾರ್ಯಗಳು ಇದ್ದೇ ಇವೆ. ಒಂದು ಹದ ಕಬ್ಬಿಗೆ ನೀರು ಹಾಯಿಸದೆ ಹೋದರೆ ಸಾವಿರಾರು ರೂಪಾಯಿಗಳ ನಷ್ಟಪಡಬೇಕಾಗುತ್ತದೆ. ಅದನ್ನು ಸರಿದೂಗಿಸಿಕೊಳ್ಳಬೇಕಾದರೆ ಅನೇಕ ವರ್ಷ ಕಷ್ಟಪಡಬೇಕು. ಅದು ನಮಗೆ ಭಾರಿ ಕೆಲಸ. ಸದಸ್ಯರ ಸ್ವಂತ ಕಾರ್ಯಗಳಿಗೆ ಧಕ್ಕೆ ತರುವಂತೆ ಈ ಅಸೆಂಬ್ಲಿಯ ಕಾರ್ಯಕ್ರಮವನ್ನು ಆಗಾಗ್ಗೆ ಬದಲಾವಣೆ ಮಾಡತಕ್ಕದ್ದು ಬಹಳ ವಿಷಾದಕರ. ಮತ್ತು ಈ ಮಾಹೆ 29ನೆ ತಾರೀಖಿನೊಳಗಾಗಿ ಡಿಮ್ಯಾಂಡುಗಳನ್ನು ಮುಗಿಸಲು ಭಾನುವಾರ ಸಹ ಕುಳಿತುಕೊಳ್ಳಬೇಕು ಎಂದು ಹೇಳುವುದು ನಿಜವಾಗಿಯೂ ಒಪ್ಪತಕ್ಕ ಮಾತಲ್ಲ. ಈ ಸಭೆಯ ನಾಯಕರು ತಮ್ಮೊಡನೆ ಸಮಾಲೋಚನೆ ನಡೆಸಿ ಒಂದು ಕಾರ್ಯಕ್ರಮವನ್ನು ನಿರ್ಧಾರಮಾಡಿದ ಮೇಲೆ ನಡೆದುಕೊಳ್ಳಬೇಕು. ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಎಂದರೆ ಒಂದೂವರೆ ತಿಂಗಳ ಕೆಲಸವಾದುದರಿಂದ ಮಧ್ಯೆ ಅಲ್ಪ ಸ್ವಲ್ಪ ವ್ಯತ್ಯಾಸ ಮಾಡಬೇಕಾದ ಸಂದರ್ಭ ಬರಬಹುದು. ಆದರೆ ಯದ್ವಾ ತದ್ವಾ ಬದಲಾವಣೆ ಮಾಡುವುದೂ, ಭಾನುವಾರ ಕುಳಿತುಕೊಂಡು ಕೆಲಸ ಮಾಡಬೇಕು, ಐದು ಘಂಟೆಯ ಮೇಲೆ ಬಲ್ ತೆಗೆದುಕೊಳ್ಳುತ್ತೇವೆ ಆಗಲೂ ಇರಬೇಕು ಎನ್ನುವುದೂ ಸರಿಯಿಲ್ಲವೆಂದು ಮಾತ್ರ ಹೇಳುತ್ತೇನೆ.

ಈ ಆಯುವ್ಯಯದ ವಿಚಾರದಲ್ಲಿ ಮಾತನಾಡತಕ್ಕದ್ದು ಏನೂ ಇಲ್ಲ ಎನ್ನಿಸುತ್ತದೆ. ನೀರು ಇರತಕ್ಕ ಒಂದು ಲೋಟಕ್ಕೆ ಬೆರಳುಹಾಕಿ ಚೀಪಿನೋಡಿದರೆ ಎಷ್ಟುಮಟ್ಟಿಗೆ ರುಚಿಕರವಾಗಿರುತ್ತದೆಯೋ, ಈ ಆಯುವ್ಯಯದ ಪಟ್ಟಿ ಮತ್ತು ಅದರ ಮೇಲೆ ಮಾಡಿದ ಮುಖ್ಯ ಮಂತ್ರಿಗಳ ಭಾಷಣ ಅಷ್ಟೇ ಹಿತಕರವಾಗಿರುತ್ತದೆ, ರುಚಿಕರವಾಗಿರುತ್ತದೆ ಆಯುವ್ಯಯದ ಅಂದಾಜಿನಲ್ಲಿ ಏನೋ ಮಾಮೂಲಾಗಿ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಇದರೊಳಗೆ ಸಾಲಸೋಲ, ಪಾಂಚವಾರ್ಷಿಕ ಯೋಜನೆ, ಆಯಾ ಇಲಾಖೆಯ ಆದಾಯ ಖರ್ಚು ಎಲ್ಲವನ್ನೂ ಒಳಗೊಂಡು ಒಂದು ಅಂದಾಜನ್ನು ತಯಾರಿಸಿ ನಮ್ಮ ಮುಂದೆ ಇಟ್ಟಿದ್ದಾರೆ. 20-30 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುವಾಗ 20-30 ಪುಟಗಳ ಭಾಷಣವನ್ನು ಬರೆಯುವುದಕ್ಕೆ ಏನು ಕಷ್ಟ? ಇಲಾಖೆಗಳಿವೆ; ಕೆಲಸ ಮಾಡುತ್ತವೆ; ಇಂಥಿಂಥ ಇಲಾಖೆಯಲ್ಲಿ ಇಂಥಿಂಥ ಕೆಲಸ ಕಾರ್ಯಗಳು ನಡೆದಿವೆ ಎಂದು ವರದಿಗಳು ಬರುತ್ತವೆ. ಇವುಗಳ ಅಂದಾಜಿನ ಮೇಲೆ ಮುಂದಿನ ವರ್ಷದ ಆದಾಯ ವ್ಯಯಗಳನ್ನು ಊಹಿಸಬಹುದು. ಆದುದರಿಂದ ಈ ಅಂದಾಜಿನಲ್ಲಿ ಅಂಥ ಮಹತ್ತರವಾದ ವಿಷಯ ಕಾಣುವುದಿಲ್ಲ. 30 ಕೋಟಿ ರೂಪಾಯಿ ಖರ್ಚು ಮಾಡಿರುವುದರಲ್ಲಿ 20-30 ಪುಟಗಳನ್ನು ತುಂಬ ಬರೆಯಬಹುದು. ಮುಂದಕ್ಕೆ ಇಂಥದು ಮಾಡುತ್ತೇವೆ ಎಂದು ಹೇಳಬಹುದು. ಕೇಂದ್ರ ಸರ್ಕಾರದ ನಿರ್ದಿಷ್ಟ ಭರವಸೆ ಮೂರು ಕೋಟಿ ರೂಪಾಯಿ ಮಾತ್ರ. ಈ ಸರ್ಕಾರದವರೇನೋ 12 ಕೋಟಿ ಕೇಳುತ್ತಾರೆ. ತಾವು ಕೇಳಿದಷ್ಟು ಹಣ ಬರುತ್ತದೆಂದು ಅಂದಾಜು ಮಾಡಿ ಆಕಾಶದಲ್ಲಿ ಮನೆಯನ್ನು ಕಟ್ಟುತ್ತಾರೆ. ಆಯವ್ಯಯಗಳ ವಿಚಾರದಲ್ಲಿ sanctity, ಅದರಲ್ಲಿ ನಂಬಿಕೆ ಹೋಯಿತು. ಇದರಲ್ಲಿ 10 ಲಕ್ಷ, 25 ಲಕ್ಷವಲ್ಲ, ಕೋಟಿಗಟ್ಟಲೆ ವ್ಯತ್ಯಾಸವಾಗುತ್ತದೆ. ಆದುದರಿಂದ ಈ ಆಯವ್ಯಯಗಳ ವಿಚಾರದಲ್ಲಿ ಯಾವ ಭರವಸೆಯಿಂದಾಗಲಿ ನಿರ್ದಿಷ್ಟವಾಗಿಯಾಗಲಿ ಯಾವ ಮಾತನ್ನೂ ಹೇಳುವುದಕ್ಕೆ ಆಗುವುದಿಲ್ಲ ಎನ್ನಿಸುತ್ತದೆ.

ಆದುದರಿಂದ ಈ ಸಂದರ್ಭದಲ್ಲಿ ಆಡಳಿತ ವಿಚಾರದಲ್ಲಿ ಕೆಲವು ಮಾತುಗಳನ್ನು ಆಡಬೇಕೆಂಬುದು ನನ್ನ ಉದ್ದೇಶ. ಅನೇಕವೇಳೆ ಮಂತ್ರಿಗಳು ಪ್ರಯಾಣ (tour) ಮಾಡುವುದು ತಮಗೆ ಇಷ್ಟವಿಲ್ಲವೆಂದೂ ಆದರೆ ಜನರು ತಮ್ಮನ್ನು ಕರೆಯುತ್ತಾರಾದ್ದರಿಂದ ಯತ್ನವಿಲ್ಲದೆ ಪ್ರಯಾಣ ಮಾಡಬೇಕಾಗಿದೆ ಎಂದೂ ಮುಖ್ಯ ಮಂತ್ರಿಯವರು ಹೇಳಿದರು. ಈ ಮಾತು ಸತ್ಯಕ್ಕೆ ದೂರವಾಗಿದೆಯೆಂದು ಅತ್ಯಂತ ವ್ಯಸನದಿಂದ ಹೇಳುತ್ತೇನೆ. ನೀವು ನಿಮ್ಮ ಊರಿನ ಕಡೆ ನಮ್ಮನ್ನು ಕರೆಯಿಸಿ, ನಿಮ್ಮ ಸ್ಕೂಲು ಕಟ್ಟಲಿಲ್ಲವೋ ಎಂದು ಮುಂತಾಗಿ ಪರೋಕ್ಷವಾಗಿ ಸಲಹೆ ಕೊಟ್ಟು ನಮ್ಮನ್ನು ಕರೆಯಿರಿ ಎಂದು ಮಂತ್ರಿಗಳು ಹೇಳುತ್ತಾರೆ ಎಂಬುದು ನನಗೆ ಗೊತ್ತಿದೆ. ಅಂಥ ಪ್ರಯತ್ನಗಳು ನನಗೆ ಸಂಬಂಧಪಟ್ಟ ಕ್ಷೇತ್ರದಲ್ಲಿ ಒಂದೆರಡು ಸಲ ನಡೆದು ವಿಫಲವಾಗಿವೆ. ಇನ್ನೂ ಅದೇ ಪ್ರಯತ್ನ ನಡೆಯುತ್ತಿದೆ. ಜನರು ನಮ್ಮನ್ನು ಕರೆಯುತ್ತಾರೆ, ನಾವು ಹೋಗುತ್ತೇವೆ ಎಂದು ಹೇಳುವುದು ಬೂಟಾಟಿಕೆ ಮಾತು, ಒಣ ಜಂಭದ ಮಾತು ಎಂದು ಹೇಳಬೇಕಾಗಿದೆ. ಇದಕ್ಕೋಸ್ಕರ ಬಹಳ ಹಣ ಖರ್ಚಾಗುವುದು ನಷ್ಟವಲ್ಲವೇ? ಈ ಸಂದರ್ಭದಲ್ಲಿ ಇನ್ನೊಂದು ಮಾತು ಹೇಳುತ್ತೇನೆ. ನಿನ್ನೆಯ ದಿನ ಚರ್ಚೆಯಾಗುವಾಗ ನಾನು ಇರಲಿಲ್ಲ. ತಾವು ದೆಹಲಿಯ ಹೋಟಲು ಒಂದರಲ್ಲಿ ದಿನಕ್ಕೆ 200 ರೂಪಾಯಿ ಖರ್ಚು ಮಾಡಿರುವುದನ್ನು ಅಂದರೆ 4 ದಿನಗಳಿಗೆ ಆದ 800 ರೂಪಾಯಿಗಳನ್ನು ಸರ್ಕಾರಕ್ಕೆ ಕೊಟ್ಟುಬಿಡುವುದಾಗಿ ಹೇಳಿದರಂತೆ. ಇಷ್ಟೆಲ್ಲ ಚರ್ಚೆ ನಡೆದು ಅವಾಂತರವಾದ ಮೇಲೆ ದುಂದು ವೆಚ್ಚ ಮಾಡಿದ ಹಣವನ್ನು ಹಿಂದಕ್ಕೆ ಕೊಡುವುದಕ್ಕೆ ಬದಲು ಮೊದಲೇ ತೆಗೆದುಕೊಳ್ಳದಿದ್ದರೆ ಚೆನ್ನಾಗಿತ್ತು. ಈಗಲಾದರೂ ಕೊಡುವುದು ತಾನೇ. 800 ರೂಪಾಯಿಗಳನ್ನು ಕೊಟ್ಟರೆ ಏನು, ಕೈಯಲ್ಲಿ ಎಂಟು ಲಕ್ಷ ರೂಪಾಯಿಗಳ ಆಡಳಿತ ನಡೆಸುವ ಅಧಿಕಾರ ಇದ್ದೇ ಇದೆ ಎಂಬ ಮನೋಭಾವನೆಯಿಂದ ಕೂಡಿ ಮಾತಾಡಿದ್ದಾರೆ. ತಾವು ಯದ್ವಾತದ್ವಾ ಖರ್ಚುಮಾಡಿದ್ದೂ ಅಲ್ಲದೆ ಈಗ ತಮ್ಮನ್ನು ನಿಷ್ಠೂರ ಮಾಡಿದ ಹಾಗಾಯಿತಂತೆ! ಬಿಸಾಕಿ ಬಿಡುತ್ತೇನೆಂದರೆ ಏನು ಅರ್ಥ! ಸರ್ಕಾರವನ್ನು ನಡೆಸುವವರು ಅನ್ನುವ ಮಾತೇ ಇದು! ಯಾತಕ್ಕೆ ಇಂಥ ಮಾತುಗಳನ್ನು ಆಡಬೇಕು! ಹಣವನ್ನು ಖರ್ಚು ಮಾಡುವಾಗ ಇದು ನನ್ನ ಹಣವಲ್ಲ ಜನಗಳ ಹಣ ಎಂಬ ಪರಿಜ್ಞಾನ ಆ ಹೊತ್ತು ಅವರಿಗೆ ಇರಲಿಲ್ಲವೇ! ಈ ಸಭೆಯಲ್ಲಿ ಚರ್ಚೆ ಮಾಡತಕ್ಕ ವಿಚಾರವಲ್ಲ ಇದು. ಎಂದು ತಿಳಿದುಕೊಳ್ಳಬೇಕಾಗಿತ್ತು ಮತ್ತು ಆ ರೀತಿ ಆಗದ ಹಾಗೆ ಮಾಡಬೇಕಾಗಿತ್ತು.

ಆಡಳಿತದ ಬೇರೆ ಬೇರೆ ಇಲಾಖೆಗಳನ್ನು ತೆಗೆದುಕೊಂಡು ಅವುಗಳ ವಿಚಾರದಲ್ಲಿ ಹೆಚ್ಚು ಬೆಳೆಸುವುದಕ್ಕೆ ಇಷ್ಟವಿಲ್ಲ. ಪೋಲೀಸು ಇಲಾಖೆಯ ವಿಷಯ ಸ್ವಲ್ಪ ಹೇಳುತ್ತೇನೆ. ಒಬ್ಬರು ಪಾರ್ಲಿಮೆಂಟ್ ಮೆಂಬರು

ಇಬ್ಬರು ಅಸೆಂಬ್ಲಿ ಮೆಂಬರುಗಳು ರಾಮನಗರ ತಾಲ್ಲೂಕಿನಲ್ಲಿ ಸಭೆ ನಡೆಸಲು ಹೋದಾಗ ಕೆಲವು ಗೂಂಡಾ ಜನರು ಅವರನ್ನು ದಾರಿಯಲ್ಲಿ ತಡೆದು, ಮುಂದೆ ಕಾಲಿಟ್ಟರೆ ಕಲ್ಲಿನಿಂದ ಹೊಡೆಯುತ್ತೇವೆ, ಜೋಡಿನಿಂದ ಹೊಡೆಯುತ್ತೇವೆ ಮುಂತಾಗಿ ಬಯ್ಯುವುದು, ಹೆದರಿಸುವುದು ನಡೆದರೂ ಪೋಲೀಸ್ ರಕ್ಷಣೆ ಇರಲಿಲ್ಲ. ಪೋಲೀಸಿನವರು ಬಂದರೆ ಏನು ಮಾಡುತ್ತಾರೆ ಎನ್ನುವ ಮಟ್ಟಿಗೆ ಬಂದಿದೆ ಆ ಪ್ರಾಂತದ ಪರಿಸ್ಥಿತಿ! ಇದೇ ರೀತಿಯಲ್ಲೇ,ಸ್ವಾಮಿ, ಆಡಳಿತ ನಡೆಸುವುದು ಸರ್ಕಾರ? ಸಭೆ ನಡೆಸಲು ಅಡ್ಡಿ ಮಾಡಿದವರು ರೈಲ್ವೆ ಗೇಟನ್ನು ಹಾಕಿಸಿದ್ದು, ಅದನ್ನು ತೆಗೆಸಲು ಪೋಲೀಸಿನವರೂ ನಿಸ್ಸಹಾಯಕರಾದಂಥ ಪರಿಸ್ಥಿತಿ ಆಯಿತು ಎಂದರೆ ಹೇಗೆ! ಆಡಳಿತವೆಂದರೆ ಹೀಗೇನೇ ಮಾಡುವುದು? ಸಜ್ಜನರಿಗೆ ಪೋಲೀಸರಿಂದ ರಕ್ಷಣೆ ಹೀಗೇನೇ ದೊರಕುವುದು? ಸ್ವಾಮಿ, ಇತ್ತೀಚೆಗೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಜಾತ್ರೆ 8 ದಿವಸಗಳು ನಡೆಯುತ್ತದೆ. ಲಕ್ಷಾಂತರ ರಾಸುಗಳು ಆ ಸಂದರ್ಭದಲ್ಲಿ ಸೇರುತ್ತವೆ. ಉತ್ತಮವಾದ ರಾಸುಗಳಿಗೆ ಬಹುಮಾನ ಕೊಡುತ್ತಾರೆ. ಈ ವರ್ಷ ಜಾತ್ರೆ ಮುಗಿದು ನೆರೆದಿದ್ದ ಜನರೆಲ್ಲರೂ ಹೊರಟು ಹೋಗಿ 200-300 ಜನ ಮಾತ್ರವಿದ್ದಾಗ ಉತ್ತಮ ರಾಸುಗಳಿಗೆ ಮುಖ್ಯ ಮಂತ್ರಿಯವರು ಬಹುಮಾನ ಕೊಡುವ ಏರ್ಪಾಡಾಗಿತ್ತು. ಈ ಸಮಾರಂಭಕ್ಕೆ 200-300 ಜನ ಪೋಲೀಸಿನವರ ರಕ್ಷಣೆಯನ್ನು ಒದಗಿಸಲಾಗಿತ್ತು. ಒಬ್ಬ ವ್ಯಕ್ತಿಯ ನೆರವಿಗಾಗಿ ಮೂರು ವ್ಯಾನುಗಳ ತುಂಬ ಬೆಂಗಳೂರು, ಮಂಡ್ಯ, ಮೈಸೂರು ಹೀಗೆ ಜಿಲ್ಲೆ ಜಿಲ್ಲೆಯಿಂದಲೂ ಪೋಲೀಸಿನವರನ್ನು ಕರೆಸುವುದರ ಅಗತ್ಯವೇನಿತ್ತು? ಅಲ್ಲಿ ಪೋಲೀಸಿನವರ ಓಡಾಟವೇ ಓಡಾಟ, ಅವರ ಜಬರದಸ್ತು ಹೇಳಲು ಶಕ್ಯವಿಲ್ಲ. ಒಬ್ಬ ಪಾರ್ಲಿಮೆಂಟ್ ಸದಸ್ಯರು, ಇಬ್ಬರು ಅಸೆಂಬ್ಲಿ ಸದಸ್ಯರುಗಳು ಕಾರಿನಲ್ಲಿ ಹೋದಾಗ ಜೋಡಿನಿಂದ ಹೊಡೆಯುತ್ತೇವೆ, ಕಾರಿನ ಗಾಜನ್ನು ಒಡೆಯುತ್ತೇವೆ, ಕಾರನ್ನು ಪುಡಿಪುಡಿ ಮಾಡುತ್ತೇವೆಂದು ಹೆದರಿಸುವಾಗ ಪೋಲೀಸಿನವರ ರಕ್ಷಣೆಯ ಮಾತೇ ಇಲ್ಲ! ಮಾನ್ಯ ಸದಸ್ಯರಿಗೆ ಪೋಲೀಸ್ ರಕ್ಷಣೆಗೆ ಒದಗಿಸುವುದು ಅಗತ್ಯವಲ್ಲವೆ? ಮುಖ್ಯ ಮಂತ್ರಿಗಳೆಂದ ಮಾತ್ರಕ್ಕೆ, ಯಾವ ಭಯಕ್ಕೂ ಕಾರಣವಿಲ್ಲದಿದ್ದರೂ ಅಗತ್ಯವಿಲ್ಲದಿದ್ದರೂ ಎಷ್ಟೊಂದು ವ್ಯಾನ್, ಎಷ್ಟೊಂದು ಜೀಪುಗಳು, ಈ ಆಡಂಬರ, ಈ ಒಣಜಂಭ, ಈ ಒಂದು ಮೆರವಣಿಗೆ ಇವೆಲ್ಲ ಬೇಕು! ಇದು ನ್ಯಾಯವೇ? ಒಬ್ಬ ವ್ಯಕ್ತಿಗೆ ಮಾತ್ರ ಇಷ್ಟೊಂದು ರಕ್ಷಣೆಬೇಕು; ಬಾಕಿಯವರಿಗೆ ಪ್ರಾಣ ಹೋದರೂ ಚಿಂತೆ ಇಲ್ಲ; ಮಾನ ಹೋದರೂ ಚಿಂತೆ ಇಲ್ಲ; ಪೋಲೀಸಿನವರೂ ಸಹಾಯಕ್ಕೆ ಬರುವಂತೆ ಇಲ್ಲ! ಹೀಗೆ ಇವರಿಗೆ ಇತರರ ಹಿತರಕ್ಷಣೆ ಮಾಡುವ ಉದ್ದೇಶವೂ ಇಲ್ಲ. ಪೋಲೀಸ್ ಆಡಳಿತದ ವೈಖರಿ ಹೀಗೆ ಇದೆ! ಈ ಸರ್ಕಾರದವರು ಇಂಥ ಆಡಳಿತವನ್ನು ನಡೆಸುತ್ತಿದ್ದಾರೆ.

ಕೈಗಾರಿಕೆಯ ಅಭಿವೃದ್ಧಿಗಾಗಿ ಬೇಕಾದಷ್ಟು ಗ್ರಾಂಟ್ ಕೊಡುತ್ತಿದ್ದಾರೆ. ಕೇಂದ್ರದಿಂದಲೂ ಗ್ರಾಂಟ್ ಕೊಡುತ್ತಾರೆ. ಇದರ ವಿತರಣೆ ಯದ್ವಾತದ್ವಾ ನಡೆಯುತ್ತಿದೆ. ವಿಶ್ವೇಶ್ವರಯ್ಯ ಸ್ಕೀಂ ಎರಡು ಜಿಲ್ಲೆಗಳಲ್ಲಿ ಬಹಳ ಯಶಸ್ವಿಯಾಗಿ ನಡೆದುದರಿಂದ ಉಳಿದ ಎಂಟು ಜಿಲ್ಲೆಗಳಲ್ಲೂ ಅದನ್ನು ಆಚರಣೆಗೆ ತಂದಿದ್ದೇವೆ ಎಂದು ಹೇಳಿದ್ದಾರೆ. ಸರ್ಕಾರದ ಆಡಳಿತದಲ್ಲಿ ಎಂದು ನೀತಿ, ಒಂದು ಧರ್ಮ ಇಲ್ಲದೆ ಇರುವುದರಿಂದ ಇಲಾಖೆಗಳಲ್ಲಿ ಕೆಲಸ ಸರಿಯಾಗಿ ನಡೆಯದೆ ಇದೆ. ಗ್ರಾಮಾಂತರ ಕೈಗಾರಿಕೆಗಳ ಅಭಿವೃದ್ಧಿಗಾಗಿ ಹೋಬಳಿಗೊಂದರಂತೆ ಒಂದೊಂದು ಸೊಸೈಟಿಯನ್ನು ಮಾಡಿದ್ದಾರೆ. ಅದಕ್ಕೆ ಸರ್ಕಾರದವರು ಸದಸ್ಯರನ್ನು ನಾಮಕರಣ ಮಾಡಿರುತ್ತಾರೆ. ಆ ಸದಸ್ಯರು ಯಾರೋ ಏನೋ ನನಗೆ ಗೊತ್ತಿಲ್ಲ. ನಾವು ಈ ಸಭೆಯ ಸದಸ್ಯರಾಗಿದ್ದುಕೊಂಡು ನಮ್ಮ ನಮ್ಮ ಕ್ಷೇತ್ರಗಳಲ್ಲಿ ನಡೆಯುವ ವಿಷಯಗಳು ನಮಗೇ ತಿಳಿಯುವುದಿಲ್ಲ. ನನ್ನ ಕ್ಷೇತ್ರದಲ್ಲಿ ಇಂಥ ಮೂರು-ನಾಲ್ಕು ಸೊಸೈಟಿಗಳಿವೆ. ಇವಕ್ಕೆ ಯಾರಾರು ಮೆಂಬರುಗಳಿದ್ದಾರೆ, ಅವರು ಏನು ಕೆಲಸ ಮಾಡುತ್ತಾರೆ ಇವೆಲ್ಲವೂ ನನಗಂತೂ ಗೊತ್ತಿಲ್ಲ. ಈ ಸೊಸೈಟಿಗಳ ಕಾರ್ಯಗಳೆಲ್ಲ ನನ್ನ ತಿಳಿವಳಿಕೆ ಇಲ್ಲದೆಯೇ ನಡೆಯುತ್ತಿವೆ. ಇಲ್ಲಿರುವ ಅಂಶವೇನೆಂದರೆ ಎಲ್ಲವೂ ಪಕ್ಷಪಾತ ದೃಷ್ಟಿಯಿಂದ ನಡೆಯುತ್ತಿವೆ. ಸರ್ಕಾರಕ್ಕೆ ಬೇಕಿಲ್ಲದ ಸದಸ್ಯರ ವಿರುದ್ಧ ಜನರನ್ನು ಎತ್ತಿಕಟ್ಟುವ ಉದ್ದೇಶದಿಂದ ಈ ಗ್ರಾಮಾಂತರ ಕೈಗಾರಿಕೆಗಳ ಅಭಿವೃದ್ಧಿಗಾಗಿ ಏರ್ಪಾಡಾಗಿರುವ ಸೊಸೈಟಿಗಳಿಗೆ 10 ಸಾವಿರ, 20 ಸಾವಿರ ರೂಪಾಯಿ ಕೊಟ್ಟು ಆ ಪ್ರದೇಶದಲ್ಲಿರುವ ಜನರಿಗೆ, ಅಂದರೆ, ಕುಂಬಾರರಿಗೆ, ಇತರ ಗೃಹ ಕೈಗಾರಿಕೆಗಳವರಿಗೆಲ್ಲ ಈ ಹಣ ಕೊಟ್ಟು, ಜನರು ಅವರ ದಾಕ್ಷಿಣ್ಯಕ್ಕೆ ಒಳಗಾಗುವಂತೆ ಮಾಡಿ, ನಮ್ಮಂಥವರ ಪ್ರಭಾವ ಅಲ್ಲಿ ಕಡಿಮೆಯಾಗಬೇಕು ಎಂಬ ದೃಷ್ಟಿಯಿಂದ ಕೆಲಸಮಾಡುತ್ತಿದ್ದಾರೆ. ಇದು ಸರ್ಕಾರ ನಡೆಸತಕ್ಕವರು ಮಾಡುವ ಕಾರ್ಯವಲ್ಲ; ಇದು ಅವರಿಗೆ ಒಪ್ಪತಕ್ಕದ್ದಲ್ಲ. ವ್ಯವಸಾಯಕ್ಕೆ ಎಲ್ಲೆಲ್ಲಿ ನೀರಿನ ಸೌಕರ್ಯ ಕಡಿಮೆಯಾಗಿದೆಯೋ ಅಲ್ಲೆಲ್ಲ ನೀರಿನ ಸೌಕರ್ಯದ ವ್ಯವಸ್ಥೆಮಾಡುವುದಕ್ಕಾಗಿ ಎಷ್ಟು ಬೇಕೋ ಅಷ್ಟನ್ನು ಮಾಡಿದ್ದರೆ ಜನರಿಗೆ ಬಹಳ ಉಪಯೋಗವಾಗುತ್ತಿತ್ತು. ನನ್ನ ಕ್ಷೇತ್ರದಲ್ಲಿರುವ ಒಂದು ಕಡೆ ಒಂದು ಲಕ್ಷ ರೂಪಾಯಿಗಳನ್ನು ಈ ಕಾರ್ಯಕ್ಕೆ ಖರ್ಚು ಮಾಡಿದರೆ ನೂರು ಸಂಸಾರಗಳಿರತಕ್ಕ ಎರಡು, ಮೂರು ಗ್ರಾಮ ಗಳಲ್ಲಿರುವ ಜನರಿಗೆ ಅನುಕೂಲವಾಗುವುದು ಎಂದು ಸಂಬಂಧಪಟ್ಟ ಮಂತ್ರಿಗಳಿಗೆಲ್ಲ ನಾನು ಎಷ್ಟು ಸಾರಿ ಹೇಳಿದರೂ ಉಪಯೋಗವಾಗಿಲ್ಲ. ನಾವು ಇವರುಗಳ ಹತ್ತಿರ ಹೋಗಿ ಭಿಕ್ಷೆ ಬೇಡಬೇಕೇ? ಈ ಮಾನ್ಯ ಸಭೆಯ ಒಬ್ಬ ಸದಸ್ಯರು ಬರೆದ ಕಾಗದಕ್ಕೆ ನಿಗಾ ಕೊಡದೆ ಇದ್ದಮೇಲೆ ಅಂಥ ಸರ್ಕಾರ ಯಾಕೆ ಇರಬೇಕು? ಅವರ ಕ್ಷೇತ್ರದಲ್ಲಿ ಈ ಕಾರ್ಯ ಮಾಡಿದರೆ ಅವರಿಗೆ ಒಳ್ಳೆ ಹೆಸರು ಬರುತ್ತದೆ, ಅದಕ್ಕೆ ಯಾಕೆ ಅವಕಾಶ ಕೊಡಬೇಕು ಎಂದು ಬಯಸಿದರೋ ಏನೋ ಎನ್ನಿಸುತ್ತದೆ. ನನ್ನಂತಹವನ ಕ್ಷೇತ್ರದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ನೂರಾರು ಸಂಸಾರಗಳಿಗೆ ಜೀವನವಾಗತಕ್ಕ ಕೆಲಸವನ್ನು ಮಾಡುವುದಿಲ್ಲ. ಅದೇ ಕೆಂಗೇರಿ ಕೆರೆ ಕೆಳಗೆ 40 ಎಕರೆ ಜಮೀನಿರಬಹುದು—ಶ್ರೀಮಾನ್ ವೆಂಕಟಪ್ಪನವರು 20 ಎಕರೆಗಳಿಗೆ ಮೇಲ್ಪಟ್ಟು ಇಲ್ಲವೆಂದು ಹೇಳುತ್ತಾರೆ—ಇದಕ್ಕೆ ಎಷ್ಟು ಲಕ್ಷ ರೂಪಾಯಿಗಳ ಖರ್ಚು! ಹೋಗಲಿ ಆ ಕೆರೆ ಕೆಳಗೆ ತರೀ ವ್ಯವಸಾಯದ ಬಡಾವಣೆಗೆ ಅವಕಾಶವಿದೆಯೇ ಎಂದರೆ ಆ ಅಚ್ಚುಕಟ್ಟಿನ ಬಡಾವಣೆಗೆ ಅವಕಾಶವೇ ಇಲ್ಲ. ಏಕೆಂದರೆ ಸುತ್ತಲೂ ಹಳ್ಳವಿದೆ. ಇಂಥ ಕಡೆ, 20-25 ಎಕರೆಗಳಿಗೆ ಎಷ್ಟು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ವ್ಯವಸಾಯಕ್ಕೆ ಅನುಕೂಲ ಮಾಡುತ್ತಿದ್ದಾರೆ! ಪಕ್ಷಪಾತ ಇದರಲ್ಲಿ ಇಲ್ಲವೇ? ಎಲ್ಲ ಕಡೆಯೂ ಸಾರ್ವಜನಿಕವಾಗಿ, ಸಾರ್ವತ್ರಿಕವಾಗಿ ಕೆಲಸಗಳನ್ನು ಮಾಡುತ್ತೇವೆಂದು ಬಾಯಲ್ಲಿ ಹೇಳುತ್ತ ಕಾರ್ಯತಃ ನೋಡಿದರೆ ಪಕ್ಷಪಾತದಿಂದ ನಡೆಯುತ್ತಿದ್ದಾರೆ. ಊರಿನ ಮಧ್ಯೆ high road ಹೋಗುವ ಕಡೆಗಳಲ್ಲೆಲ್ಲ ಸಿಮೆಂಟ್ ಕಾಂಕ್ರೀಟ್ ಮಾಡುತ್ತೇವೆ ಎನ್ನುವುದೂ,

(ಶ್ರೀ ಎಚ್. ಕೆ. ವೀರಣ್ಣಗೌಡ.)

ತಮಗೆ ಬೇಕಿಲ್ಲದ ಸದಸ್ಯರ ಕ್ಷೇತ್ರಗಳಲ್ಲಿ ಮೂರು ವರ್ಷಗಳಾದರೂ ಅದಕ್ಕೆ ಗಮನಕೊಡದೆ ಇರುವುದೂ ಪಕ್ಷಪಾತವಲ್ಲವೇ ? ಹೀಗೆ ಆಡಳಿತ ನಡೆಸಿದಮೇಲೆ ಏನಾಗುತ್ತದೆ ಎಂದರೆ ಅಧಿಕಾರಿಗಳು ನೋಡುತ್ತಾರೆ, ಯಾವ ಕಡೆಗೆ ಗಾಳಿ ಬೀಸುತ್ತಿದೆ ಎಂದು. ಸರ್ಕಾರದವರು ಯಾವುದಾದರೂ ಸದಸ್ಯರ ವಿಚಾರದಲ್ಲಿ ಉದಾಸೀನದಿಂದ ಕೂಡಿದ್ದರೆ, ನಮಗೆ ಯಾಕಪ್ಪ, ಎಲ್ಲಾದರೂ ಹಾಳಾಗಿ ಹೋಗಲಿ, ನಾವೂ ಉದಾಸೀನದಿಂದ ಇದ್ದರೆ ಆಯಿತು ಎಂದು ಇರುತ್ತಾರೆ. ಅಧಿಕಾರಿಗಳು ಪಕ್ಷಪಾತ ನೀತಿಯಿಂದ ವರ್ತಿಸುವುದಕ್ಕೆ ಪರೋಕ್ಷವಾಗಿ ಸರ್ಕಾರ ನಡೆಸುವವರು ಅನುಸರಿಸುವ ನೀತಿಯೇ ಕಾರಣ. ಅದರಿಂದಲೇ ಹೀಗಾಗುತ್ತದೆ. ಇಂಥ ಆಡಳಿತ, ಇಂಥ ಕೆಲಸ, ಬಹಳ ವ್ಯಸನದಿಂದ ಹೇಳುತ್ತೇನೆ, ದೇಶಕ್ಕೆ ಒಳ್ಳೆಯದಲ್ಲ, ಇದು ಇರಬಾರದು. ವಿಧಾನಸೌಧದ ಉದಾಹರಣೆ ತೆಗೆದುಕೊಂಡರೆ ಅದಕ್ಕೆ 50 ಲಕ್ಷದ ಮೇಲೆ ಖರ್ಚಾಗುವುದಿಲ್ಲ ಎಂದು ಮೊದಲು ಹೇಳಿದ್ದರು, ಆ ಮೇಲೆ 60 ಲಕ್ಷವಾಯಿತು, ಈ ದಿವಸ 130 ಲಕ್ಷ ರೂಪಾಯಿ ಬೇಕು ಎಂದು ಹೇಳುತ್ತಾರೆ ಹೀಗೆ ಮನಸ್ಸಿಗೆ ಬಂದ ಹಾಗೆಲ್ಲಾ ಆಗಾಗ್ಗೆ ಬದಲಾವಣೆ ಮಾಡುತ್ತಾ ಹೋದರೆ ಸರ್ಕಾರದ ಮಾತಿಗೆ ಏನಾದರೂ ಬೆಲೆಯಿದೆಯೆ ? ಮೂರು-ನಾಲ್ಕು ವರ್ಷಗಳ ಹಿಂದೆ ಹೇಳಿದ್ದಕ್ಕೂ ಈಗ ಹೇಳುವುದಕ್ಕೂ ಒಂದಕ್ಕೊಂದಕ್ಕೆ ಸಂಬಂಧವಿಲ್ಲ. ಈಗ ನನಗೊಂದು ವರ್ತಮಾನ ಬಂದಿದೆ, ಅದು ನಿಜವೋ, ಅಲ್ಲವೋ ತಿಳಿಯದು. ಈಗ ಕಟ್ಟುತ್ತಿರುವ ವಿಧಾನಸೌಧದ ಕಟ್ಟಡ ಪೂರೈಸಿದಮೇಲೆ ಈಗ ಈ ಸಭೆ ನಡೆಯುತ್ತಿರುವ ಕಟ್ಟಡವನ್ನು ಒಡೆಸಿ ಹೊಸ ಕಟ್ಟಡದ ನೋಟ ಬಹುದೂರ ಕಾಣುವಂತೆ ಮಾಡಬೇಕೆಂದಿದ್ದಾರಂತೆ ! ಇವೇನು ಮಹಮುದ್ ಬಿನ್ ತೊಗಲಕ್‌ನ ದರ್ಬಾರೋ ಏನೋ ತಿಳಿಯದು. ಈ ಕಟ್ಟಡವನ್ನು ಒಡೆಸುವುದರಲ್ಲಿ ಸರಕಾರದ ಮನೋಭಾವ ಯಾವ ರೀತಿಯಿದೆಯೆಂಬುದನ್ನು ಇದು ಚೆನ್ನಾಗಿ ತೋರಿಸುತ್ತದೆ. ನಾನು ಮಾಡಿದ್ದೇ ಕೆಲಸ ಎಂಬ ಒಂದು ಪ್ರತಿಷ್ಠೆಯಿರುವುದನ್ನು ತೋರಿಸುತ್ತದೆ. ಹಾಗೆ ಮಾಡುವುದರಿಂದ ಸರ್ಕಾರದ ಹೆಸರಿಗೆ ಕುಂದುಂಟಾಗುತ್ತದೆ. ಒಬ್ಬರು ಹೀಗೆ ಮಾಡುವುದರಿಂದ ಅದು ಇಡೀ ದೇಶಕ್ಕೇ, ಸರ್ಕಾರ ಎಂಬ ಹೆಸರಿಗೇ, ಅಪಕೀರ್ತಿ ತರುತ್ತದೆ.

ಸ್ವಲ್ಪ ಹೊತ್ತಿಗೆ ಮುಂಚೆ ಶ್ರೀ ಗೋಪಾಲಗೌಡರು ಮಟ್ಟೆದೊಡ್ಡಿ ಪ್ರಕರಣವನ್ನು ಕುರಿತು ಪ್ರಸ್ತಾಪಮಾಡಿದರು. ಅದಕ್ಕಿಂತ ಅನ್ಯಾಯ ಯಾವುದೂ ಇಲ್ಲವೆಂದರೆ ನಾನೇನೂ ಉತ್ಪ್ರೇಕ್ಷೆಮಾಡಿ ಹೇಳುತ್ತಿಲ್ಲ. ಈ ಬಗ್ಗೆ ನಮ್ಮ ಕಾಂಗ್ರೆಸ್ ಪಕ್ಷದ ಪರವಾಗಿ ಮೂರು ಜನರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿದ್ದರು. ಈ ಸಭೆಯ ಸದಸ್ಯರಾಗಿರುವ ಶ್ರೀ ಎಸ್. ಕರಿಯಪ್ಪನವರೂ ಶ್ರೀ ವೆಂಕಟಪ್ಪನವರೂ ನಾನೂ ಅದರಲ್ಲಿದ್ದೆವು. ಎಕರೆಗೆ 20 ರೂಪಾಯಿಗಳಂತೆ ಶ್ರೀ ನಂಜಪ್ಪನವರಿಗೆ ಅಲ್ಲಿ ಜಮೀನು ಕೊಟ್ಟಿದ್ದಾರೆ; ಆ ಜಮೀನು ಕಾಡುಮೇಡು, ಹಳ್ಳಕೊಳ್ಳ, ಕಲ್ಲು, ಬಂಡೆ ಇರುವುದರಿಂದ ಒಟ್ಟು ನೂರು ಎಕರೆಯವರೆಗೆ ಶ್ರೀ ನಂಜಪ್ಪನವರಿಗೆ ಜಮೀನು ಕೊಟ್ಟಿದ್ದಾರೆ. ಆ ಜಮೀನನ್ನೆಲ್ಲ ಸುತ್ತಿ ನೋಡಿಕೊಂಡು ಬರಲು ನಮಗೆ ಮೂರು ಗಂಟೆ ಕಾಲ ಬೇಕಾಯಿತು. ಆ ಜಮೀನನ್ನು ಎಕರೆಗೆ 20 ರೂಪಾಯಿಗಳಂತೆ ಸರ್ಕಾರದವರು ಕೊಟ್ಟರು. ಅಂದರೆ 50 ಎಕರೆಗೆ ಒಂದು ಸಾವಿರ ರೂಪಾಯಿ ಆಯಿತು. ಆ ಜಮೀನಿನಲ್ಲಿ ಮೂರು ಕಾಸಿನ ಕೆಲಸವೂ ಸಹ ಆಗಿಲ್ಲ, 120 ರೂಪಾಯೋ ಏನೋ ಬುಲ್‌ಡೋಜರಿಗಾಗಿ ಮುಂಗಡ ಕೊಟ್ಟಿದ್ದರು. ಆ ಬಗ್ಗೆ 700-800 ರೂಪಾಯಿ ಬಾಕಿ ಇತ್ತು. ಹದ್ದುಬಸ್ತು ತೋರಿಸಲು ಕಲ್ಲು ನೆಡಸುವುದು, ಅಲ್ಲಿದ್ದ ಹಳ್ಳಕ್ಕೆ ಅಡ್ಡ ಕಟ್ಟೆ ಹಾಕಿಸುವುದಕ್ಕೆ ಮುಂತಾಗಿ ಒಂದು ಸಾವಿರ ರೂಪಾಯಿ ಖರ್ಚು ಮಾಡಿರಬಹುದು. ಒಟ್ಟಿನಲ್ಲಿ ಎರಡು ಸಾವಿರದ ಮೇಲೆ ಖರ್ಚಾಗಿಲ್ಲ. ಅಂಥಾದ್ದಕ್ಕೆ 13½ ಸಾವಿರ ರೂಪಾಯಿ ಪರಿಹಾರ ಕೊಡಿ ಎಂದು ದೆಹಲಿಯಿಂದ ತಿಳಿಸಿದ್ದರು. ಈ ಪರಿಹಾರ ಸಾಲದೆಂದು ಶ್ರೀ ನಂಜಪ್ಪನವರು ಕೋರ್ಟಿಗೆ ಹೋದರು. ನನ್ನ ಮಾತು ಕೇಳುವುದಿಲ್ಲ, ಏನು ಮಾಡುವುದು ಎಂದು. ಶ್ರೀ ನಂಜಪ್ಪನವರ ಅಣ್ಣನವರಾಗಿರುವ ಮುಖ್ಯಮಂತ್ರಿಯವರು ಹೇಳುತ್ತಾರೆ. ಒಂದು ಲಕ್ಷ ಐದು ಸಾವಿರ ರೂಪಾಯಿಗಳನ್ನು ಕೊಡಬೇಕು, ಅದನ್ನು ಕೊಡುವವರೆಗೆ ತಿಂಗಳಿಗೆ 350 ರೂಪಾಯಿ ಬಡ್ಡಿ ಕೊಡಬೇಕು ಎಂದು ಕೋರ್ಟಿನಲ್ಲಿ ತೀರ್ಮಾನವಾಗಿದೆಯಂತೆ. ಮುಖ್ಯಮಂತ್ರಿಯವರು ಶ್ರೀ ನಂಜಪ್ಪನವರಿಗೆ ಸಂಬಂಧಪಟ್ಟವರಾಗಿದ್ದರೂ ನಾನೇನು ಮಾಡಲಿ ಎಂದು ಹೇಳಿ, ಬರುವ ಹಣದಲ್ಲಿ ನನಗೂ ಒಂದು ಪಾಲು ಬರಲಿ ಎಂದೋ ಏನೋ, ಅಲಕ್ ನಿರಂಜನ್ ಎಂದು ಸುಮ್ಮನಿದ್ದಾರೆ. ನನಗೂ ಅದಕ್ಕೂ ಸಂಬಂಧವಿಲ್ಲವೆಂದು ಮಾತ್ರ ಮೇಲೆ ಹೇಳುತ್ತಾರೆ. ನಾಲ್ಕು ವರ್ಷಗಳಿಂದ ಸರ್ಕಾರ ಮಾಡುತ್ತಿರುವುದನ್ನು ನೋಡಿ ಮನಸ್ಸು ನೊಂದು ಇದನ್ನೆಲ್ಲಾ ಹೇಳಬೇಕಾಗಿದೆ. ಸರ್ಕಾರದವರು ತಮ್ಮ ಆಡಳಿತ ನೀತಿಯಲ್ಲಿ ಏನಾದರೂ ಬದಲಾಯಿಸುತ್ತಾರೆಯೆ ಎಂದು ನೋಡಿ, ದಿನೇ ದಿನೇ ಹೀನಸ್ಥಿತಿಗೆ ಬರುತ್ತಿರುವುದನ್ನೂ, ಯಾವ ಮನೋವೃತ್ತಿಯುಳ್ಳವರಾಗಿದ್ದಾರೆಂಬುದನ್ನೂ ತಿಳಿದು, ಸ್ವಜನರ ಪಕ್ಷಪಾತದಿಂದ ಬೇಕಾದವರಿಗೆ ಅನುಕೂಲವಾಗಲಿ ಮಿಕ್ಕವರಿಗೆ ಅಷ್ಮರ ಪಾಡು ಅವರಿಗೆ ಎಂದು ತೋರಿಸುತ್ತಿರುವ ಮನೋಭಾವವನ್ನೂ ನೋಡಿ, ಇದು ಖಂಡನೀಯ, ಇಂಥ ಸರ್ಕಾರವು ಬಹು ದಿವಸ ಇರಬಾರದು ಎಂದು ಹೇಳಬೇಕಾಗಿದೆ. ಭಾಷಣದಲ್ಲಿ ಮತ್ತು ವರದಿಗಳಲ್ಲಿ ಮಾತ್ರ ಎಲ್ಲಾ ಜನರಿಗೂ ಅನುಕೂಲವಾಗಬೇಕೆಂದು ಹೇಳುತ್ತಾರೆಯೇ ವಿನಾ ಕಾರ್ಯತಃ ಆ ರೀತಿ ನಡೆದುಕೊಳ್ಳುತ್ತಿಲ್ಲ. ಉದಾಹರಣೆಗೆ ಚನ್ನಪಟ್ಟಣದ ಸ್ಪನ್ ಸಿಲ್ಕ್ ಮಿಲ್ಲನ್ನು ತೆಗೆದುಕೊಳ್ಳಬಹುದು. ಅಲ್ಲಿ ಕೂಲಿಗಾರರ ವಿವಾದ ನಡೆದು ಅದನ್ನು ಇತ್ಯರ್ಥ ಮಾಡಲು ಟ್ರಿಬ್ಯೂನಲ್ ನೇಮಕ ಮಾಡಿದರು. ಟ್ರಿಬ್ಯೂನಲ್‌ನವರು ಅವಾರ್ಡ್ ಕೊಟ್ಟು ಒಂದು ವರ್ಷದ ಮೇಲಾಯಿತು. ಆದರೆ ಸರ್ಕಾರದವರು ಆ ಅವಾರ್ಡನ್ನು ಇನ್ನೂ ಜಾರಿಗೆ ಕೊಟ್ಟಿಲ್ಲ. ಹೇಳುವುದು ಮಾತ್ರ ಕೂಲಿಗಾರರಿಗೆ ಎಷ್ಟೋ ಸಹಾಯ ಮಾಡುತ್ತೇವೆಂದು, ಅವರನ್ನು ಕಾರ್ಯಸಹಿತ ಕೈಲಾಸಕ್ಕೆ ಕಳುಹಿಸುತ್ತೇವೆಂದು. ಆದರೆ ಮಾಡುವುದು ಮಾತ್ರ ತದ್ವಿರುದ್ಧ. ಈ ಸ್ಪನ್ ಸಿಲ್ಕ್ ಕೈಗಾರಿಕೆ ಈಗ ಹಾಳಾಗಿದೆ. ಅದಕ್ಕೆ ಮುಖ್ಯ ಕಾರಣ ಆಡಳಿತಗಾರರು ಸರಿಯಾದ ರೀತಿಯಲ್ಲಿ ನಡೆದುಕೊಳ್ಳದಿರುವುದು. ಕೆ.ಜಿ.ಎಫ್. ಗಣಿ ನ್ಯಾಷನಲೈಸ್ ಮಾಡಬೇಕು, ಎಲ್ಲಾ ಕೈಗಾರಿಕೆಗಳನ್ನೂ ರಾಷ್ಟ್ರೀಕರಣ ಮಾಡಬೇಕು, ಮೈಸೂರು ಬ್ಯಾಂಕ್ ನ್ಯಾಷನಲೈಸ್ ಮಾಡಬೇಕು ಎಂದು ಹೇಳುವಾಗ ಚನ್ನಪಟ್ಟಣದ ಮಿಲ್ ಮಾತ್ರ ಅಧೋಗತಿಗೆ ಹೋಗಬೇಕೆ ? ಆ ಕಡೆ ತಿರುಗಿ ನೋಡಬೇಡವೆ ? ದಕ್ಷತೆಯಿದ್ದರೆ ಸರ್ಕಾರ ಅದನ್ನು ತಮ್ಮ ಕೈಗೇಕೆ ತೆಗೆದುಕೊಳ್ಳಬಾರದು ? ಕೊಯಮತ್ತೂರಿನಲ್ಲಿ ಯಾರಿಗೋ ಅದನ್ನು ಮಾರಾಟ ಮಾಡಲು ಏರ್ಪಾಡಾಗುತ್ತಿದೆ ಎಂಬ ವರ್ತಮಾನವಿದೆ. ಹೇಳುವುದೊಂದು ಮಾಡುವುದೊಂದು,

ಆದರೆ ಸರ್ಕಾರದ ಹೇಳಿಕೆಯಲ್ಲಿ, ಮಾತಿನಲ್ಲಿ ಸ್ವಲ್ಪವಾದರೂ ಭರವಸೆಯಿರುತ್ತದೆಯೆ ? ಸರ್ಕಾರ ತಾನು ಹೇಳಿದಂತೆ ನಡೆಯದಿದ್ದರೆ ಜನರಿಗೆ ಹಿತವಾಗುವುದು ಹೇಗೆ ? ಅನುಕೂಲವಾಗುವುದು ಹೇಗೆ ?

ಮುಖ್ಯ ಮಂತ್ರಿಗಳು ಈ ವರ್ಷ ತೆರಿಗೆ ಯಾವುದೂ ಹಾಕುವುದಿಲ್ಲ, ಸಂತೋಷವಾತಾವರಣದಲ್ಲಿ ಭಾಷಣ ಮುಗಿಸುತ್ತೇನೆ ಎಂದು ಹೇಳಿದರು. ಹೊಸ ತೆರಿಗೆ ಹಾಕಿ ನೋಡಬೇಕಾಗಿತ್ತು. ಹೊಸ ಕಂದಾಯ, ತೆರಿಗೆ ಹಾಕುವುದಕ್ಕೆ ಒಂದು ನೈತಿಕ ಶಕ್ತಿ, ಧೈರ್ಯ ಸರ್ಕಾರಕ್ಕೆ ಬರಬೇಕು. ಈ ದೇಶದಲ್ಲಿ ಆ ಶಕ್ತಿ ಆ ಧೈರ್ಯವನ್ನು ಸರ್ಕಾರ ಕಳೆದುಕೊಂಡಿದೆ. ಏನೋ ಒಂದು ಕಾನೂನಿಗನುಸಾರವಾಗಿ ಪಾರ್ಟಿ ಶಿಸ್ತಿನ ಮೇಲೆ ಈ ಸರ್ಕಾರ ಈ ದಿವಸ ಅಸ್ತಿತ್ವದಲ್ಲಿದೆ. ಮುಖ್ಯವಾಗಿ ಅದಿಲ್ಲದಿದ್ದರೆ ಎಂದೋ ಗಾಳಿಪಟದ ಹಾಗೆ ಹಾರಿ ಹೋಗುತ್ತಿತ್ತು.

ವಿಶ್ವೇಶ್ವರಯ್ಯನಾಲೆ ಪ್ರದೇಶದಲ್ಲಿ ಸಕ್ಕರೆ ಕಂಪನಿ ಒಂದು ಟನ್ ಕಬ್ಬು ಅರೆವರೆ ಆರು ರೂಪಾಯಿ ತೆರಿಗೆ ಕೊಡುತ್ತಾರೆ. ಷುಗರ್‌ಕೇನ್‌ಸೆಸ್ಸನ್ನು ಅನೇಕರು ತಪ್ಪಾಗಿ ಅರ್ಥ ಮಾಡಿಕೊಳ್ಳುತ್ತಾರೆ. ರೈತರಿಗೆ ಕೊಡುವ ಕಬ್ಬಿನ ದರದಲ್ಲಿ ಟನ್ ಒಂದಕ್ಕೆ ಆರು ರೂಪಾಯಿ ಹಿಡಿದುಕೊಂಡು ಕೊಡುತ್ತಿದ್ದಾರೆಂದು ಕೆಲವರು ತಪ್ಪು ತಿಳಿದಿದ್ದಾರೆ. ಅದು ಹಾಗಲ್ಲ. ಕಬ್ಬಿನ ದರವನ್ನು ಇಂಡಿಯಾ ಸರ್ಕಾರ ನಿಗದಿಮಾಡುತ್ತಾರೆ. ಅದರಂತೆ ಕಂಪೆನಿ ರೈತರಿಗೆ ಕೊಡುತ್ತಾರೆ. ಅಲ್ಲದೆ ಕಂಪೆನಿಯವರು ಅರೆಯುವ ಒಂದು ಟನ್‌ಗೆ ಆರು ರೂಪಾಯಿ ಸೆಸ್ಸನ್ನು ಸರ್ಕಾರಕ್ಕೆ ಕೊಡುತ್ತಾರೆ. ಈ ಸೆಸ್ ಕೊಡುವುದು ವರ್ಷಕ್ಕೆ 20 ಲಕ್ಷ ರೂಪಾಯಿಗಳಾಗುತ್ತದೆ. ಹಿಂದೆ ಈ ಸೆಸ್ ಹಾಕಬಾರದೆಂದು ನ್ಯಾಯವಿಧಾಯಕ ಸಭೆಯಲ್ಲಿ ಸದಸ್ಯರು ಹೇಳಿದಾಗ ಆ ಹಣವನ್ನು ಒಂದು ಫಂಡನ್ನಾಗಿ ಮಾಡುತ್ತೇವೆಂದು ಸರ್ಕಾರದವರು ಭರವಸೆ ಕೊಟ್ಟರು ; ಹಾಗೆ ನಿಧಿ ಏರ್ಪಾಡು ಮಾಡುವುದಲ್ಲದೆ ಅದರ ಆಡಳಿತವನ್ನು ಒಂದು ಸಮಿತಿಗೆ ಒಪ್ಪಿಸಿ ಅದಕ್ಕೆ ವಿಶೇಷ ರೀತಿಯ ಏರ್ಪಾಡುಮಾಡಿ ಆ ಪ್ರಾಂತದ ಅಭಿವೃದ್ಧಿಗೆ ಮಾತ್ರ ಆ ಹಣವನ್ನು ಉಪಯೋಗಿಸುತ್ತೇವೆಂದು ಹೇಳಿದರು. ರಸ್ತೆ, ಆಸ್ಪತ್ರೆ, ವೈದ್ಯಕೀಯ ಸಹಾಯ ಮುಂತಾದುವನ್ನು ಅಲ್ಲಿ ಅಭಿವೃದ್ಧಿಪಡಿಸುತ್ತೇವೆಂದು ಹೇಳಿದರು, ಮತ್ತು ಕಬ್ಬಿನ ಬೆಳೆಗೆ ಬರುವ ರೋಗ ರುಜಿನಗಳನ್ನು ನಿವಾರಣೆ ಮಾಡಲು ಪರೀಕ್ಷಾ ಕ್ಷೇತ್ರವನ್ನು ಏರ್ಪಡಿಸುತ್ತೇವೆಂದರು. ಹೀಗೆ ಅನೇಕ ವಿಧದಲ್ಲಿ ಆ ಪ್ರಾಂತವನ್ನು ಅಭಿವೃದ್ಧಿಮಾಡುವುದಕ್ಕೆ ಆ ಪ್ರಾಂತದ ಬೆಳೆಗೂ ಜನರಿಗೂ ಸೌಕರ್ಯ ಮಾಡುವುದಕ್ಕೆ, ಈ ಸೆಸ್ ಹಾಕುತ್ತೇವೆ ಎಂದು ಹೇಳಿದರು. ಆ ಪ್ರಾಂತದ ಕೆಲಸಕಾರ್ಯಗಳಿಗಾಗಿ ಆಯಾ ಕಾಲಕ್ಕೆ ತಕ್ಕಂತೆ ಅನೇಕ ಸಮಿತಿಗಳು ನೇಮಕವಾಗಿದ್ದುವು. ರೋಡ್ ಡೆವಲಪ್‌ಮೆಂಟ್ ಕಮಿಟಿ, ವಿಶ್ವೇಶ್ವರಯ್ಯ ನಾಲಾ ಕಮಿಟಿ, ಕೆ.ಆರ್.ಎಸ್. ವರ್ಕ್ಸ್ ಕಮಿಟಿ, ಹೆಲ್ತ್ ಕಮಿಟಿ ಎಂದು ಹೀಗೆ ಏಳೆಂಟು ಸಮಿತಿಗಳಿದ್ದುವು! ಹೀಗಾಗಿ ಅವುಗಳ ಕಾರ್ಯಗಳು ಓವರ್ ಲ್ಯಾಪ್ ಆಗುತ್ತಿದ್ದುವು. ಆದ್ದರಿಂದ ಒಂದು ನಿರ್ದಿಷ್ಟವಾದ ಕಾರ್ಯಕ್ರಮ ಮಾಡುವುದು ಸೂಕ್ತವೆಂದು ಹೇಳಿದ ಮೇಲೆ, ಒಂದು ಅಧಿಕಾರಯುತವಾದ ಸಮಿತಿಯಿರಬೇಕೆಂದು ಸಲಹೆ ಮಾಡಿದ ಮೇಲೆ ಹಿಂದಿನ ಸರ್ಕಾರ ಒಂದು ಸಮಿತಿ ನೇಮಿಸಿ ಅದಕ್ಕೆ ರೆವೆನ್ಯೂ ಕಮೀಷನರನ್ನು ಛೇರ್ಮನ್ನರನ್ನಾಗಿ ಮಾಡಿ ಆ ಸಮಿತಿಯವರು ಒಂದು ವರದಿಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟರು. ಒಂದು ಕಾನೂನು ಮಾಡಿ ಕಾನೂನುದತ್ತವಾದ ಅಧಿಕಾರವುಳ್ಳ ಒಂದು ಸಮಿತಿಯೋ ಅಥವಾ ಒಂದು ಬೋರ್ಡೋ ನೇಮಕವಾಗಿ ಆ ಹಣವನ್ನು ಖರ್ಚು ಮಾಡುವುದಕ್ಕೆ ಅಂಥ ಸಂಸ್ಥೆಗೆ ಅವಕಾಶವಿರಬೇಕೆಂದು ಆ ವರದಿಯಲ್ಲಿ ಶಿಫಾರಸ್ಸು ಮಾಡಿದ್ದರು. ಈ ಸರ್ಕಾರದವರು ವಿನಾಯಕನನ್ನು ಮಾಡಿ ಎಂದರೆ ವಿನಾಯಕನೇಕೆ ಅವರ ಅಪ್ಪನನ್ನು ಮಾಡುತ್ತೇವೆನ್ನುವಂತೆ ಒಂದು ಬೋರ್ಡು ನೇಮಕ ಮಾಡಿದರು. ಮೊದಲಿದ್ದ ಸಮಿತಿಯಲ್ಲಿ ಮೂರು ವರ್ಷ ನಾನೇ ಅಧ್ಯಕ್ಷನಾಗಿದ್ದೆ. ನಾನು ಮಾಡಿದ ಕಾರ್ಯವನ್ನು ಮುಂದುವರಿಸಿಲ್ಲ. ಏಕೆಂದರೆ, ಎಲ್ಲವೂ ಅವ್ಯವಸ್ಥೆಯಾಯಿತು. ಮೊದಲು ಹಿಂದಿನ ಸರ್ಕಾರದವರು ಒಬ್ಬ ಎಗ್ಸಿಕ್ಯುಟಿವ್ ಇಂಜನಿಯರು, 3 ಅಸಿಸ್ಟೆಂಟ್ ಇಂಜನಿಯರು ವಗೈರೆ ಇರುವ ಒಂದು ಸ್ಪೆಷಲ್ ಡಿವಿಜನ್ ಏರ್ಪಾಡು ಮಾಡಿದರು ; ಈ ಸರ್ಕಾರದವರು ಆ ಸ್ಪೆಷಲ್ ಡಿವಿಜನ್ನನ್ನು ವಜಾಮಾಡಿದರು. ಎಲ್ಲ ಕಾರ್ಯವೂ ನಿಂತು ಹೋಯಿತು. ಮೂರುವರ್ಷಗಳಾದ ಮೇಲೆ ಸ್ಪೆಷಲ್ ಡಿವಿಜನ್ ಆವಶ್ಯಕವೆಂದು ಈಗ ಪುನರುಜ್ಜೀವನ ಮಾಡಿದ್ದಾರೆ. ಅದು ಇನ್ನೂ ಷೇಪ್ ತೆಗೆದುಕೊಳ್ಳುತ್ತಿದೆ. ಹೀಗೆ ನಾಲ್ಕು ವರ್ಷ ಕಳೆದುಹೋಯಿತು. ಹೀಗಾಗಿ, ಹಿಂದಿನ ಕಾರ್ಯವನ್ನು ಮುಂದುವರಿಸಿ ಅಭಿವೃದ್ಧಿಮಾಡಬೇಕೆಂಬ ಪರಿಜ್ಞಾನ, ಅನುಭವ ಇಲ್ಲದೆ ಕೈಗೆ ಅಧಿಕಾರ ಸಿಕ್ಕಿದೆಯೆಂದು ಯದ್ವಾತದ್ವಾ ಹುಕ್ಕುಂ ಮಾಡಿ ಹಿಂದೆ ಮಾಡಿರುವುದೂ ಹಾಳಾಗಿ ಮುಂದೆ ಮಾಡುವುದಕ್ಕೂ ಗೊತ್ತಿಲ್ಲದೆ ಇರುವ ಅನೇಕ ಸಂದರ್ಭಗಳಿವೆ. ಇಂತಹ ಆಡಳಿತದ ಪರಿಣಾಮವಾಗಿ ದೇಶದ ಜನ ನಷ್ಟ ಪಡಬೇಕಾಯಿತು, ದೇಶದ ಹಣ ಪೋಲಾಯಿತು. ಮೂರು ನಾಲ್ಕು ವರ್ಷಗಳಿಂದ ಒಂದು ಕಂಟಿನ್ಯೂಡ್ ಪ್ರೋಗ್ರಾಂ ಆಫ್ ವರ್ಕ್ಸ್, ಒಂದು ನೀತಿ ಹಾಕಿದ್ದನ್ನು ಮುಂದುವರಿಸುವುದು ಇದೆಲ್ಲಾ ಇದ್ದರೆ ದೇಶಕ್ಕೆ ತುಂಬ ಅನುಕೂಲವಾಗುತ್ತಿತ್ತು. ಈ ಸರ್ಕಾರ ಆ ಕೆಲಸಮಾಡಿಲ್ಲ. ಪ್ರತಿಯೊಂದನ್ನೂ ನಮ್ಮ ಕಾಲದಲ್ಲಿ ಆದುದು, ನಿಮ್ಮ ಕಾಲದಲ್ಲಿ ಆದುದು, ಈ ಸರ್ಕಾರ ಮಾಡಿದ್ದು, ಆ ಸರ್ಕಾರ ಮಾಡಿದ್ದು, 1952ನೆಯ ಇಸವಿಯ ಈಚೆಗೆ ಮಾಡಿದ್ದು, ಅದಕ್ಕೆ ಹಿಂದೆ ಮಾಡಿದ್ದು ಎಂದು ತನ್ನದೇ ಆದ ಒಂದು ಪ್ರತಿಷ್ಠೆ ತೋರಿಸಿಕೊಂಡು ಕಾರ್ಯ ಮಾಡಿ ದೇಶ ಹಾಳುಮಾಡುವುದು ಧರ್ಮವಲ್ಲ, ನ್ಯಾಯವಲ್ಲ. ಹೀಗೆ ಈ ಸರ್ಕಾರ ಎಲ್ಲವನ್ನೂ ಹೀನಸ್ಥಿತಿಗೆ ತಂದಿತಲ್ಲಾ ಎಂದು ಪರಿತಾಪಪಡುವವರಲ್ಲಿ ನಾನೊಬ್ಬ. ಇಂಥ ಸರ್ಕಾರವಿರಬಾರದೆಂದು ಅದನ್ನು ಬದಲಾಯಿಸುವುದಕ್ಕೆ ಕೈಲಾದ ಪ್ರಯತ್ನ ಮಾಡಿದೆ, ಸಾಧ್ಯವಾಗಲಿಲ್ಲ. ಸ್ವಾರ್ಥರಹಿತವಾಗಿ ದಕ್ಷತೆಯಿಂದ, ನಿಷ್ಠೆಯಿಂದ, ಸ್ವಜನ ಪಕ್ಷಪಾತವಿಲ್ಲದೆ, ದೇಶದ ಆಡಳಿತವನ್ನು ಜನರಿಗೆ ಹಿತವಾಗುವಂತೆ ನಿರ್ವಹಣೆ ಮಾಡುವ ಜನರ ಕೈಗೆ ಸರ್ಕಾರದ ಆಡಳಿತ ಜಾಗ್ರತೆ ಹೋಗಲೆಂದು ದೇವರನ್ನು ಪ್ರಾರ್ಥನೆ ಮಾಡುತ್ತೇನೆ.

ಇದಕ್ಕಿಂತ ಹೆಚ್ಚಾಗಿ ಹೇಳುವುದಕ್ಕೆ ಇಷ್ಟವಿಲ್ಲ. ಈ ದಿವಸ ಫುಟ್‌ಬಾಲ್ ಒದ್ದ ಹಾಗೆ ಮೈಸೂರು ಸಂಸ್ಥಾನವನ್ನು ಒದೆಯುವುದಕ್ಕೆ ಒಂದು ಅವಕಾಶವಾಗಿದೆ. ಸಂದರ್ಭ ಬಂದಾಗ ಆ ಮಾತನ್ನು ಹೇಳುತ್ತೇನೆ. ಈ ದಿವಸ ಅದನ್ನು ಪ್ರಸ್ತಾಪಿಸುವುದಕ್ಕೆ ಇಷ್ಟವಿಲ್ಲ. ರಾಜ್ಯ ವಿಸ್ತರಣೆ, ಏಕೀಕರಣದ ಪ್ರಶ್ನೆ, ದಕ್ಷಿಣ ಪ್ರದೇಶ ರಚನೆ ಇವೆಲ್ಲಾ ಈ ದಿವಸ ಒಂದು ಗೊಂದಲವಾಗಿರುವುದಕ್ಕೆ ಮುಖ್ಯ ಕಾರಣ ಸರ್ಕಾರ ಒಂದು ಸರಿಯಾದ ನೀತಿಯನ್ನನುಸರಿಸದೆ ಕಾಲಕ್ಕೆ ತಕ್ಕ ಹಾಗೆ ಕುಣಿಯುತ್ತಾ ಯಾವ ಯಾವ ಕಾಲದಲ್ಲಿ ಏನೇನು ಮಾಡಬೇಕೋ

(ಶ್ರೀ ಎಚ್. ಕೆ. ವೀರಣ್ಣಗೌಡ.)

ಅದನ್ನು ಮಾಡದೆ ಸ್ವಾರ್ಥ ದೃಷ್ಟಿಯಿಂದ, ನೀತಿಯಿಲ್ಲದೆ ಅನೀತಿಯುತವಾಗಿ ವರ್ತಿಸುತ್ತಿರುವುದೇ ಆಗಿದೆ. ಹೀಗೆ ಮಾಡಿರುವುದರಿಂದ ದೇಶದ ಪರಿಸ್ಥಿತಿ ಈ ದಿವಸ ಹೀಗಾಗಿದೆ. ಕರ್ಣಾಟಕ ಏಕೀಕರಣ ಏಕೆ ಕೂಡದು, ದಕ್ಷಿಣ ಪ್ರದೇಶದ ಅನುಕೂಲವೇನು, ಮೈಸೂರು ಹೀಗೆಯೇ ಇರಬೇಕೆನ್ನುದೇಕೆ ಎಂಬುದನ್ನು ಸಂದರ್ಭ ಬಂದಾಗ ಹೇಳುತ್ತೇನೆ. ಆದರೂ ಈ ದಿವಸ ಗೊಂದಲ ಉಂಟಾಗಿ ಜನರ ಮನಸ್ಸು ಅಲ್ಲಕಲ್ಲೋಲವಾಗಿರುವುದು ಸರ್ಕಾರ ಭದ್ರವಾದ ಒಂದು ನೀತಿಯನ್ನು ಹಾಕಿ ಒಂದು ನಿರ್ದಿಷ್ಟ ಕಾರ್ಯಕ್ರಮದ ಪ್ರಕಾರ ಕೆಲಸ ಮಾಡದೆ ಸಂದರ್ಭಾನುಸಾರ ಮಾತನಾಡಿಕೊಂಡು ಬಂದುದರಿಂದ ಎಂದು ಮಾತ್ರ ಹೇಳಬೇಕಾಗಿದೆ. ಇಷ್ಟು ಹೇಳಿ ತಮ್ಮ ಕೈಯಲ್ಲಿ ಕಾಲ ಮುಗಿಯಿತೆಂದು ಹೇಳಿಸಿಕೊಳ್ಳುವುದಕ್ಕೆ ಮುಂಚೆ ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

Mr. SPEAKER.—Now the Finance Minister will reply.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಕಾಲ ನಿಗದಿ ಮಾಡದೆ ಹೀಗೆ ಮಾಡಿದರೆ ಹೇಗೆ ?

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಅಧ್ಯಕ್ಷರೆ, ಎಲ್ಲ ಸದಸ್ಯರೂ ತಮ್ಮ ಅಭಿಪ್ರಾಯಗಳನ್ನು ಸೂಚಿಸುವುದಕ್ಕೆ ಮೊದಲೇ ಜವಾಬು ಹೇಳುವುದು ಸರಿಯಲ್ಲ. ತಾವು ನಮ್ಮ ಹಕ್ಕು ಬಾಧ್ಯತೆಗಳನ್ನು ರಕ್ಷಣೆ ಮಾಡಬೇಕೆಂದು ಅನೇಕ ಸಾರಿ ಪ್ರಾರ್ಥನೆ ಮಾಡಿದ್ದೇವೆ. ಅದಕ್ಕೂ ನಾವು ನಮ್ಮ ಅಭಿಪ್ರಾಯ ಸೂಚಿಸುವುದಕ್ಕೂ ನಿಯಮಗಳಲ್ಲಿ ಅವಕಾಶವಿದೆ. ನಿಧಾನವಾಗಿ ಚರ್ಚೆ ಮಾಡುವುದಕ್ಕೆ ಅವಕಾಶಕೊಡಬೇಕೆಂದು ಅನೇಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹಾಗೆ ಅವಕಾಶ ನೀಡದಿದ್ದರೆ ನಾವು ನಮ್ಮ ಊರುಗಳಿಂದ ಭತ್ಯ ತೆಗೆದುಕೊಳ್ಳಲು ಇಲ್ಲಿಗೆ ಬಂದ ಹಾಗಾಗುತ್ತದೆ. ಅವಕಾಶ ಈಗ ದೊರೆಯದಿದ್ದರೆ ನಮ್ಮ ಜನರ ಆಶೋತ್ತರವನ್ನು ಹೇಳುವುದು ಹೇಗೆ ? ಯಾವ ಸಮಯದಲ್ಲಿ ಹೇಳುವುದು ? ಅದರಲ್ಲೂ ಇಂಥ ಬಹಳ ಅಮೂಲ್ಯವಾದ ಬಡ್ಜೆಟ್ ಚರ್ಚೆಯ ವಿಚಾರದಲ್ಲಿ ನಮಗೆ ಬಹಳ ಹಕ್ಕಿದೆ, ಅನೇಕ ವಿಷಯಗಳನ್ನು ಸರ್ಕಾರಕ್ಕೆ ತಿಳಿಸಬೇಕಾಗುತ್ತದೆ. ಆಡಳಿತ ಸರಿಯಾಗಿ ನಡೆಯಬೇಕಾದರೆ, ಸರ್ಕಾರದ ಉದ್ದೇಶ ಸಫಲವಾಗಬೇಕಾದರೆ, ನಮ್ಮ ಮನಸ್ಸಿನಮೇಲೆ ಬಡ್ಜೆಟ್ ಭಾಷಣವೇನು ಪರಿಣಾಮಮಾಡಿದೆಯೆಂಬುದನ್ನು ಹೇಳುವುದಕ್ಕೆ ಅವಕಾಶವಿರಬೇಕು. ಇನ್ನು ನಾವು ಹೆಚ್ಚಾಗಿ ಹೇಳುವುದಕ್ಕಾಗುವುದಿಲ್ಲ. ತಾವು ದೊಡ್ಡ ಮನಸ್ಸು ಮಾಡಿ ನಮ್ಮ ಹಕ್ಕುಬಾಧ್ಯತೆಗಳನ್ನು ರಕ್ಷಣೆ ಮಾಡಬೇಕು.

2-30 P.M.

Sri Mulka GOVINDA REDDY (Chitaldrug).—It is really unfair to deny the members of this House to contribute their mite in the discussions. You have given only two days' time and, in between, you want to rush through the legislative measures as well. It is really unfair to deny that opportunity to the members and I further suggest that instead of asking Government to make a reply now, the members may be allowed to speak till 5 O'clock and Government may reply after 5 O'clock. Why don't you accept this suggestion ?

ಶ್ರೀ ಎಚ್. ಹುಚ್ಚಮಾಸ್ತಿಗೌಡ—ಸ್ವಾಮಿ, ಈಗ ಹಾಲಿ ಈ ಶಾಸನಸಭೆಗಳು ನಡೆಯುತ್ತಿದ್ದಾಗ್ಯೂ, ಇಲ್ಲಿ ತಾವು ಹಾಜರಿರದೆ, ಮುಖ್ಯ ಮಂತ್ರಿಗಳು ತಮ್ಮ ಪ್ರವಾಸವನ್ನು ಈ ವೇಳೆಯಲ್ಲೂ ಕೈಗೊಳ್ಳಲು ಕಾರಣವೇನು, ಇದೇ ಸರಿಯೇ ಎನ್ನುವುದನ್ನು ಚರ್ಚೆಮಾಡಲು ಒಂದು ಅವಕಾಶ ಕೊಟ್ಟು ಈ ಸಭೆಗೆ ಸಹಾಯಮಾಡಬೇಕೆಂದು ನಾನು ಮತ್ತೊಮ್ಮೆ ತಮ್ಮಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಸಿ. ನಾಗಯ್ಯ ರೆಡ್ಡಿ (ಗೋರಿಬಿದನೂರು).—ಸರ್ಕಾರದವರಿಗೆ ಅವರು ತಮಗೆ ಬೇಕಾದಂತೆ ವರ್ತಿಸಲು ಅವಕಾಶ ಕೊಡುತ್ತಿರುವುದು ಸರಿಯೇ ? ಇಂಥದ್ದನ್ನು ಅವರು ಮಾಡದೆ ಇರುವ ಹಾಗೆ ತಡೆಗಟ್ಟಲು ತಮಗೆ ಶಕ್ತಿ ಇದೆಯೇ ಅಥವಾ ಇಲ್ಲವೇ ? ಈ ಸಭೆಯ ಹಕ್ಕುಭಾದ್ಯತೆಗಳನ್ನು ಕಾಪಾಡಿಕೊಂಡು ಸದಸ್ಯರಿಗಿರುವ ಹಕ್ಕುಗಳನ್ನು ಉಳಿಸಿಕೊಂಡು ಬರಲು ತಾವು ಮೊದಲು ಒಂದು ತೀರ್ಮಾನ ಕೊಡಬೇಕು.

ಅಧ್ಯಕ್ಷರು.—ನಾನು ನಾಳೆ ಈ ವಿಚಾರವಾಗಿ ಒಂದು ಸ್ಟೇಟ್‌ಮೆಂಟ್ ಮಾಡುತ್ತೇನೆ. ಇಲ್ಲಿಗೆ 8 ದಿವಸಗಳ ಹಿಂದೆಯೇ ಈ ಬಡ್ಜೆಟ್ ಅಧಿವೇಶನವನ್ನು ಪ್ರಾರಂಭಿಸುವುದಕ್ಕೆ ತಾವೆಲ್ಲರೂ ಅವಕಾಶ ಮಾಡಿಕೊಟ್ಟಿದ್ದರೆ ಆಗ ಈ ತೊಂದರೆಗಳೊಂದೂ ಇರುತ್ತಿರಲಿಲ್ಲ, ಆದರೆ ಈ ಸಲ ಕೆಲವು ಅನಿವಾರ್ಯಗಳಿಂದ ವಿಧಿಯಿಲ್ಲದೆ ಸ್ವಲ್ಪ ತೊಂದರೆಗಳಿಗೆ ಅವಕಾಶವಾಗಿದೆ. ಆದರೆ ನಾನು ಇಲ್ಲದೆ ಇದ್ದಾಗ ತಾವುಗಳೇ ಎಲ್ಲರೂ ಸೇರಿ ಈ ತೀರ್ಮಾನಕ್ಕೆ ಬಂದುದರಿಂದ ಹೀಗೆ ಮಾಡಲಾಗಿದೆ. ಹಿಂದೆ ಇದೇ ಬಡ್ಜೆಟ್ ಬಗ್ಗೆ ಚರ್ಚೆ ಮಾಡಲು 12 ದಿವಸಗಳ ಕಾಲಾವಕಾಶ ಕೊಡಲಾಗಿತ್ತು, ಆದರೆ ಈ ಸಲ 30ನೇ ತಾರೀಖಿನೊಳಗಾಗಿ ಬಡ್ಜೆಟ್ ಮುಗಿಯಬೇಕಾಗಿದೆ. ಅಷ್ಟರಲ್ಲಿ ಇದು ಪಾಸಾಗಬೇಕಾಗಿರುವುದರಿಂದ ಹೀಗೆ ಮಾಡಲೇಬೇಕಾಯಿತು.

Sri B. NARAYANASWAMY (Mysore City—South).—We have been deprived of a very fine opportunity of offering our remarks. At least the Ministers will be asked to reply after 5 and we may be given an opportunity to speak till 5.

Mr. SPEAKER.—Even last time only 22 members spoke. To-day I think about 17 members have spoken.

Sri B. NARAYANASWAMY.—Five more.

Mr. SPEAKER.—I may bring it to the notice of the House that it is not possible for all the members to speak during the period allotted for budget discussion. Instead of 10 days, we have allotted 12 days for voting of demands. All members will be given

due opportunities and there need be no fear on this account. But to-day, under the circumstances, in accordance with the programme we have already chalked out, there is no time or scope to extend the budget discussion even by one day. That is the difficulty. I will make a statement with regard to what Sri Nagiah Reddy has said about my powers to regulate the discussions. I am to arrange business in consultation with the Leader of the House. I will make a statement, anyhow, to-morrow.

Sri T. MARIAPPA.—May I appeal to the Hon'ble Speaker, in view of the insistent demand of the members of the House, will you kindly have a brief consultation with the Leaders and give at least 2½ hours more for the members' to speak ?

Mr. SPEAKER.—I do not know what the Leader of the House says. He may say he has got other engagements and therefore has got to go.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ಹೀಗೆ ನೀವೇನೂ ನಮಗೆ ಈ ಒಂದೆರಡು ನಿಮಿಷಗಳ ಭಿಕ್ಷವನ್ನು ನೀಡಬೇಕಾದ್ದಿಲ್ಲ. ನೀವು ಈ ವಿಷಯದಲ್ಲಿ ಮೊದಲು ಒಂದು ಸ್ಟೇಟ್‌ಮೆಂಟ್ ಕೊಡಬೇಕು.

Sri K. HANUMANTHAIYA (Chief Minister).—I know the House is anxious to prolong the discussion on the Budget. I for one would say that time should be given for these discussions. Under the rules there are opportunities for discussing Government policies such as discussion on the Rajpramukh's Address as well as the Budget speech and also on Demands. If the House wants longer time for this purpose it goes without saying that we must plan accordingly before-hand and we must be prepared to sit for longer hours. Many a time we quote the precedent of the House of Commons. Members know that in the House of Commons sometimes—many times in fact—the House sits even till 4 o'clock or 5 o'clock in the morning. The responsibilities of this House are increasing and we have to devise ways to give sufficient opportunity for members to discuss. The present procedure may not bring satisfaction to all the members who wish to speak, but nevertheless, as you have said, if we take into consideration the number of people who participate in discussions, it is almost 70-80 per cent of the members participating in the discussions, (*Voices: 17 only*). We have to take into consideration people who speak not only during the Budget discussion but also on the Rajpramukh's Address and during the discussion of Demands. If this percentage is taken into consideration, it is in very few cases in the whole of India and particularly in Parliament such a large percentage of members get opportunity. Nevertheless we in this House have got every right to determine our own procedure. For the last four years we have been following a particular procedure. There is no departure from it. If, as my friend Sri K. Puttaswamy suggested, vote on accounts has to be granted and then Budget discussion and other formalities have to take place, that should have been determined earlier. It is not as though I was against such a course and I will tell the House that I do not shirk to answer criticism, I do not want to take shelter under want of time. I am prepared to answer every criticism that has been made. I do not want to blow my own trumpet and I will say before man and God I have not shown any of the bad qualities that are attributed to me by my Hon'ble and old friend Sri Veeranna Gowdh. I am in an embarrassing position. The democracy that we are running is of a particular pattern. It runs on the basis of party system of Government. The parties are expected to follow certain principles, certain standards and certain principles of discipline. If some members violate those well known standards my position prevents me from doing the same thing. I could reply in an equal measure to all the criticisms, charitable and uncharitable. My difficulty, the handicap under which I am suffering, is, I cannot decend to the same level and if members knowing the position in which I am placed, cast aspersions on me and make charges, I can only tell them that it is not a very courageous stand. There must be equal opportunities for the

4725

(SRI K. HANUMANTHAIYA.)

Ministers as well as the members to have free play. If per chance I begin to reply to criticisms, in that fashion where strong language is being used, I will be guilty of indiscipline on my own part. I would, therefore, put up with and I will put up very courageously with all the criticisms that they have made, personal and undeserved criticisms. But there are forums, there are occasions for them to discuss these matters and having had those forums and having had those chances, if they still go on repeating the same old charges, I can only say it is not fair and I want fairness to have full play in our affairs, in the affairs of this House, in the affairs of the political parties. Therefore, the House will forgive me if I do not reply to some of the personal charges that have been made against me.

I will deal with the criticisms that have been made against my budget speech. The first objection, rather the first point that I would like to dwell upon is one mentioned by my friend Sri Gopala Gowda. He is reported to have said that the budget speech was handed over to some Papers before it was delivered in this House. I may give him this information. It is not so. No Paper was supplied with a copy of my speech before I concluded my speech in this House. What actually happened probably is this and that is the circumstance which has given room for suspicion. Madras Papers offered to bear expenses and get copies of the budget speech at about 11 or 11·30, as the case may be, in Madras. In order to safeguard secrecy of the budget speech, I did not entrust it to any one of these Papers, but we sent a special messenger and he was instructed to deliver these copies after the time fixed for the conclusion of the budget speech in this House. That is what has happened.

Several members referred to District Board elections. It is a very unfortunate thing that these District Boards particularly have been in an uncertain state of affairs for a very long time. I suppose for the last 10 or 11 years no elections were held. It is once before I said it was nobody's fault. Circumstances so shaped that the members of this House changed their views according to the experience they gained of indirect elections or direct elections. Several times Government democratically responded to the opinions so expressed. We finally passed a measure with certain amendments. By the time the election calendar was ready to be issued and that was a few months—one or two months—before, another consideration weighed with the Government. That is the reorganisation of the States. Sir, the House is aware that five territories of different administrative units are being formed into one administrative unit. These local boards have their own Acts and systems of working in the different territories. We thought it would not be advisable to hold the election now and again reconstitute the District Boards after the new State comes into existence. In fact I am told that in Hyderabad there are no District Boards. The District Boards in Bombay have a particular pattern. So also in Madras. We therefore thought it wise that, after consulting representative opinion, it would be better to postpone the elections so that after the new State comes into existence we may once for all take a decision on this matter and hold the election throughout the new State of greater Mysore. That is the reason why we had to postpone the elections.

But several members have expressed their view that it would not be wise to make the Deputy Commissioner the sole monarch of the District Board affairs. Government agree with that view. We have therefore taken a decision to constitute non-official committees to supervise the working of District Boards. Government will issue, after careful consideration and examination of all aspects of the matter, orders for the constitution of these District Boards in an advisory capacity. Whether the Deputy Commissioner should continue to be *Ex-officio* President or whether a Non-official President can be selected are

matters which require legal examination. That also will be determined when this order issues.

Several members, particularly my friend Sri K. Pattabhiraman, complained that the single ward system that exists now in municipalities has led to malpractices, corruption and many other undesirable results. I have been in touch with public opinion on this matter and I now find that there is a large volume of public opinion in favour of modifying this single membership system. Government propose to bring in suitable amendments at the appropriate time in this behalf. Municipal elections are now over. Therefore another election will come in only at the end of four years or so. There is considerable time for us to think over. As I said, at the appropriate time Government have decided to sponsor the necessary amendments to prevent these malpractices as far as possible.

Sir, one or two members made reference to horse racing. Every time they see only one side of the picture, and I do not blame them either. If they had a full picture before them, even the worst critic of the Government would not hazard criticism of the kind that has been made on the floor of this House by one or two members. This year the Race Club did not apply for licence in time. Section 7 of the Act says that the fee for the grant or renewal of licence shall be a sum of Rs. 3,000 provided that if the application for renewal of the licence is not made whithin the period specified in the rule the fee shall be a sum of Rs. 6,000. Sir, the Club applied belatedly. But they have never enclosed any cheque or challan for having paid the licence fee. Therefore even the licence application that they have sent to Government is not valid according to the rules on the subject matter.

There is another difficulty. The Race Club is making continuous representation that the tax that is now being levied is excessive. As the House is aware, the tax now is 15 per cent on the sum that is deposited for betting. They told me that in Madras and Bombay the tax is levied only on the sums won by individuals and that tax is only 10 per cent on the winnings, whereas here we are levying 15 per cent on betting itself. They say this is a great hardship and the tax has to be reduced to the level that prevails in Madras or Bombay. That is a serious matter. Whenever tax reductions take place there is what is called the consideration that the revenues of the State will suffer. At the same time we have to judge whether this Race Club can carry on with the existing rate of taxation. This is one of the reasons why the Race Club has been somewhat hesitant to run the races. They say: Last year we suffered a loss; therefore we have no money for initial expenditure in connection with races. They are asking the Government to lend them a lakh of rupees for this purpose to be reimbursed later. We are telling them that it may not be proper for the Government to advance a lakh of rupees by way of loan to the Race Club. And I told them: You have to find your own resources for this purpose. These are the considerations that are weighing with the Government for not sanctioning the licence immediately and I hope that the Race Club authorities and the concerned Governmental authorities will be able to have a discussion and come to some settlement. There is no use in imputing motives on this matter, and if motives are imputed every time and on every subject, I can only take comfort by saying that they lose all value and force.

Sir, my friend Sri Devaraj Urs referred to Samskriti Prasara work. We must always take a balanced view of the matter. It may be true that in some cases there was no sufficient number of people. It may be true that in some cases there were no proper speakers. But that is not evidence enough to condemn the whole movement. There have been. . . .

Sri D. DEVARAJA URS.—I did not condemn but I made a suggestion.

Sri K. HANUMANTHAIYA.—Very good. There have been meetings and functions which have been a great success. I also say there is much force

(SRI K. HANUMANTHAIYA.)

in the criticism that the list that has been prepared by the Director of the Samskriti movement contained a lot of names and they were running about the State rather quite unnecessarily. I see the force of the argument and it is therefore I have modified the working of this movement and I have clearly said in my budget speech that hereafter the Rural Development Committees which have been set up will be in charge of this work. Even the sum that remains unspent during the course of this year has been made over to these committees; and these committees consist of Hon'ble Members of this House; they contain other equally representative people of the taluks concerned. I am sure, Sir, that since they have been given power not only to spend this money but also select lecturers for the committees, they will be able to do things to their own satisfaction if not to the satisfaction of the Government. I trust that, if this work if accepted to be good, it only remains for all of us to work it out properly and it is the proper working spirit that I crave for on behalf of this House.

Sir, Sri Imam criticised the Government in appointing certain Assistant Professors. Government did not appoint these Assistant Professors in the sense in which Sri Imam made it out to be. What happened, Sir, was this. The University Council some time ago appointed a Standing Committee for the purpose of selecting Assistant Professors on the basis of merit and on the basis of providing proper representation to the personnel of the backward classes. This Committee, after interviewing a number of lecturers, made the selection and that selection was considered by the University Council. There was difference of opinion in the Council. Their proceedings came before the Government and the Government accepted *in toto* the recommendations of the Standing Committee. That is the position. If as somebody says any hardship has been occasioned to some individuals, it is for the University Council to examine their cases and if they examine these individual cases of alleged injustice and report to the Government we have no hesitation in approving the recommendations made by the University Council in this behalf.

Sir, I will now deal with the important subject of Pay Structure Committee recommendation. Many members have made a reference to it. Sri K. Puttaswamy in particular asked me to implement at least some of the recommendations.

MR. SPEAKER.—The House will now rise and meet at 3-30 P.M.

The House then adjourned for Lunch at Three of the Clock and reassembled at Thirty Minutes past Three of the Clock.

[MR. SPEAKER in the Chair.]

MR. SPEAKER.—Before the Chief Minister resumes his speech, I want to make an announcement. We want to continue the discussion on the Budget after the speech of the Hon'ble Chief Minister and the time up to which we can sit is left to the House.

SRI K. HANUMANTHAIYA.—Sir, I was dealing with the recommendations of the Pay Structure Committee. On further examination, I find myself that I am unable to implement any of the recommendations of the Pay Structure Committee. For example, Sir, there are about five or six recommendations. Since my friend Sri Pattabhiraman has made a special appeal and since a number of Hon'ble Members have also expressed that Government should view these recommendations with sympathy, I will deal with them one by one.

They recommend that the emoluments of any Government servant should not be less than Rs. 40 per mensem and accordingly recommend revision of scales of pay in all Departments, rationalisation of allowances and the restoration of allowances which were abolished in the case of officers drawing Rs. 500 and above—I may recall to the House that when

that decision was announced on the last occasion, it not only met with the approval of the House, but also with the applause of the House—next is payment of dearness allowance to pensioners. These involve increased expenditure. I will come to the expenditure aspect later. The other recommendations, Sir, which do not involve any expenditure are increase in hours of work and regulation of holidays. I do not think of increasing the hours of work when there is also a recommendation to enhance the emoluments also. It would not be just for us to ask them to work for longer hours when we do not take a corresponding decision to increase their emoluments. Then there is the question of retrenchment of peons according to the scale suggested. I have no doubt, Sir, that this suggestion can be straightaway accepted. But the Pay Structure Committee itself has stated that retrenchment should not be effected so as to cause unemployment. It is a very difficult proposition for me to effect retrenchment on the one side and not to make people unemployed on the other. Nobody can do it. But this recommendation can be implemented if both the recommendations are taken into consideration as and when peons retire; or when the new State comes into existence, the allotment of peons to various offices may be made on a reduced scale. The number of peons that will be affected is stated to be of the order of 250 and I do not suppose that the House likes the Government to send them home immediately.

The appointment of a high power committee for rationalisation of work and retrenchment of staff is also suggested. That also can wait till the new State comes into existence, so that we can rationalise the whole Governmental system of working satisfactorily enlarging the districts and taluks. One of the recommendations—very sound recommendation—that has been made by the Committee is, Sir, the proposal to enlarge the revenue districts and taluks so as to reduce the administrative cost. Once before, I have said on the floor of this House that our districts and taluks need to be enlarged. That also can only happen after the new State comes into existence. There are districts like Dharwar and South Kanara which are very big and there are districts like Chikmagalur which are very small. We have probably to appoint a committee to examine this suggestion and redraw the map of taluks and districts in the new picture and, I am certain, nobody would ask us to do this here and now.

There is the other aspect. I may straightaway say I am in favour of Prohibition being completely implemented. There is no difference of opinion. There need not be any misunderstanding or suspicion on the subject. The only proposition is as to who should meet this reduced revenue. We may ask the Central Government to meet it, there is nothing wrong in it. In fact, the position of this State in particular has become financially very weak. That is so for two or three reasons.

In the pre-integration days, we had our own railway system, we had the income-tax and various other sources of income. In addition, there was the income under various heads from the Kolar Gold Fields to the tune of a crore and odd. In fact that single item formed almost as much as if not more the land revenue of the State itself. The Hon'ble House is aware that we are not getting any income at present from that source. These elastic and healthy resources have dried up; some because of the financial integration effected and some because of other reasons. Because of these revenues, Mysore State was able to give considerable amount of amenities in the nation-building departments. That increased expenditure has to be met to-day with our depleted resources. It is something like a rich man trying to maintain his establishment even after his income has dwindled up. That is the position. But we need not despair. As I have already said repeatedly on the floor of this House, this financial picture that we have in view, is not a separatist water-tight compartment as

(SRI K. HANUMANTHAIYA.)

it used to be in the pre-integrating days. The financial picture is progressively coming to be one integrated whole.

The Constitution has made provision for the appointment of a Finance Commission every five years. I am happy to announce, Sir, the Chairman of the Finance Commission Sri Santhanam is arriving here today and I am meeting him, after I finish my speech, in the Residency. This Finance Commission has to take the Central resources and the State resources and re-allocate the finances. The Central Government cannot afford to make the States weak and yet continue to have a strong Centre. It will be like a person having all his limbs weak but only the head big and strong. That will be a lopsided development that will take place if the Central Government goes on crippling the resources of the States. I have every confidence that this Finance Commission which is now appointed will go into the question and see that the States are made financially strong and sound and at the same time the Central Government is in a position to carry on the work that has been entrusted to it under the Constitution. What is now happening is that the Centre is not only concentrating in its hands all financial resources but also the powers vested in the Constitution. I am one with Sri Pattabhiraman and other friends of mine who plead continuously for decentralisation of administration.

